ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

ಶನಿವಾರ, ೮ ನೇ ಏಪ್ರಿಲ್ ೧೯೯೫ ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 9.50 ಗಂಟೆಗೆ ಸಮಾವೇಶಗೊಂಡಿತು.

Friday, 8th April 1995 Sayana Sowra chithra 16 (S.E.)

ಅಧ್ಯಕ್ಷರು : (ಶ್ರೀ ರಮೇಶ್ ಕುಮಾರ್) ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು.

ಅಧ್ಯಕ್ಷರು : ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆ.

ಶ್ರೀ ವಾಟಾಳ್ ನಾಗರಾಜ್ : (ಚಾಮರಾಜನಗರ) ಮಾನ್ಯ ಅಧ್ಯಕ್ಷರೇ, ಇದು ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆ. ಮಾರ್ಚ್ 20ನೇ ತಾರೀಖು ರಾಜ್ಯಪಾಲರು ಈ ಸದನದಲ್ಲಿ ಭಾಷಣ ಮಾಡಿದರು. ಏಪ್ರಿಲ್ 8ನೇ ತಾರೀಖು ಅವರಿಗೆ ನಾವು ವಂದನೆಯನ್ನು ಸಲ್ಲಿಸುವ ಕೊನೆಯ ದಿನ. ಈ ಸಂಪ್ರದಾಯವೇ ಒಂದು ರೀತಿ ಅಪಹಾಸ್ಯಕ್ಕೆ ಈಡಾಗುತ್ತಿದೆ. ಸಾಮಾನ್ಯವಾಗಿ ರಾಜ್ಯಪಾಲರ ಭಾಷಣ, ಈ ವ್ಯವಸ್ಥೆ ಸರಿ-ಇಲ್ಲ ಎನ್ನತಕ್ಕಂಥಾದ್ದು ಒಂದು ವಾದ ಆದರೆ ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಸಲ್ಲಿಸತಕ್ಕಂಥ ಕಾರ್ಯವನ್ನು ಆಯವ್ಯಯ ಮಂಡನೆಗಿಂತ ಮುಂಚೆ ಮುಗಿಸಿಬಿಡಬೇಕಾಗಿತ್ತು. ರಾಜ್ಯಪಾಲರ ಭಾಷಣವನ್ನು ಆಮೇಲೆ ಇಟ್ಟುಕೊಳ್ಳೋಣ ಎಂದು ಹೇಳಿ ಇದನ್ನು ಒಂದು ಕಡೆ ಮೂಲೆಗೆ ಹಾಕಿ ನಾವು ಯಾವಾಗ ಬೇಕಾದರೂ ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಸಲ್ಲಿಸಬಹುದು, ಅದೇನು ಮಹತ್ತರವಾದುದಲ್ಲ ಎನ್ನತಕ್ಕಂಥ ಭಾವನೆ, ಒಂದು ವಿಚಾರ ಸರ್ಕಾರದಲ್ಲಿ ಆ ಧೋರಣೆ ಏನು ಇದೆ. ಇದು ರಾಜ್ಯಪಾಲರ ಭಾಷಣಕ್ಕೆ ಮಾಡುವಂಥ ತೀವ್ರ ಅಪಚಾರ. ನಾನು ರಾಜ್ಯಪಾಲರ ಭಾಷಣವನ್ನು ಹರಿದು ಹಾಕಿದಾಗ ಬಹಳ ಅಪಚಾರ ಮಾಡಿಬಿಟ್ಟಿದ್ದಾರೆ ವಾಟಾಳ್ ನಾಗರಾಜ್‌ರವರು, ಈ ಸದನಕ್ಕೆ ಮತ್ತು ರಾಜ್ಯಪಾಲರಿಗೆ ಬಹಳ ಅಪಾರವಾದ ಅಗೌರವ ಮಾಡಿದ್ದಾರೆ ಎಂದು ಹೇಳಿ ನನ್ನ ಮೇಲೆ ಆಕ್ಷೇಪಗಳೆಲ್ಲಾ ಬಂತು. ಅದೆಲ್ಲಕ್ಕಿಂತ ತೀವ್ರವಾಗಿ ಈ ಸರ್ಕಾರ ನಡೆದುಕೊಂಡಿರತಕ್ಕ ರೀತಿ ನೀತಿಗಳನ್ನು ನೋಡಿದಾಗ ನನಗನ್ನಿಸುತ್ತದೆ. ನಾನೇನು

ರಾಜ್ಯಪಾಲರ ಭಾಷಣವನ್ನು ಹರಿದು ಹಾಕಿದೆ, ಆ ಹರಿದುದಕ್ಕಿಂತಲೂ ಹೆಚ್ಚಾಗಿ ರಾಜ್ಯಪಾಲರಿಗೆ ತೀವ್ರ ಅಗೌರವವನ್ನು ಈಗ ತೋರಿಸಿದ ಹಾಗಾಗಿದೆ. ಸಂಸದೀಯ ಸಚಿವರು ಇದುವರೆಗೆ ಮೌನವಾಗಿ ಇದ್ದದ್ದು ನನಗಂತೂ ಬಹಳ ಆಶ್ಚರ್ಯವನ್ನು ಉಂಟುಮಾಡಿದೆ. ಸಂಸದೀಯ ಸಚಿವರ ಜವಾಬ್ದಾರಿ ಇದು. ರಾಜ್ಯಪಾಲರ ಭಾಷಣ ಮಾರ್ಚ್ 20ನೇ ತಾರೀಖು ಇತ್ತು. ಅವರನ್ನು ಮೆರವಣಿಗೆಯಲ್ಲಿ ಕರೆದುಕೊಂಡು ಬರುತ್ತೀರಿ ಇದನ್ನು ತಲೆಯ ಮೇಲೆ ಹೊತ್ತುಕೊಳ್ಳುತ್ತೀರಿ, ಕೊನೆಯಲ್ಲಿ ಕೆಳಗೆ ಹಾಕುತ್ತೀರಿ. ಇದು ನಿಮ್ಮ ಸರ್ಕಾರ ನಿಜವಾಗಲೂ ನೇರವಾಗಿ ರಾಜ್ಯಪಾಲರಿಗೆ ತೋರಿಸತಕ್ಕಂಥ ಗೌರವ ಅಲ್ಲ. ನನಗೆ ರಾಜ್ಯಪಾಲರ ಬಗ್ಗೆ ವೈಯಕ್ತಿಕವಾಗಿ ಅಪಾರ ಗೌರವ ಇದೆ. ಅದರ ಬಗ್ಗೆ ಎರಡನೇ ಅಭಿಪ್ರಾಯವಿಲ್ಲ. ಈ ವ್ಯವಸ್ಥೆ ಸರಿಯಿಲ್ಲ ಎಂದು ನಾನು ವಾದ ಮಾಡಿದಾಗ, ಇದೆಲ್ಲಾ ಸರಿಯಿಲ್ಲ, ಈ ಸಭೆಯಲ್ಲಿ ಇದೆಲ್ಲಾ ಮಾಡುವುದಕ್ಕಾಗುವುದಿಲ್ಲ ಹರಿಯುವುದು ಅಂದರೆ ಏನು ? ಇದನ್ನು ಹರಿದು ಬಹಳ ಅಪರಾಧ ಮಾಡಿಬಿಟ್ಟಿದ್ದಾರೆ, ಎಂದು ಆ ಒಂದು ಮಾತು ನಿಮ್ಮ ಹೃದಯದಲ್ಲಿ ಎಷ್ಟಿತ್ತೆಂದರೆ ನಿಮಗೆ ಏನಾದರೂ ಅವಕಾಶ ಇದ್ದರೆ ಗಲ್ಲಿಗೆ, ನೇಣುಗಂಬಕ್ಕೆ ಏರಿಸುತ್ತಿದ್ದಿರೇನೋ ? ಆದರೆ ಆ ಅವಕಾಶ ಇಲ್ಲ.

ಅಧ್ಯಕ್ಷರು : ನೀವು ಇಂಟರ್‌ಫಿಯರ್ ಆಗಬೇಡಿ ಈಗಾಗಲೇ ಹೆಚ್ಚು ಸಮಯವಾಗಿದೆ.

ಶ್ರೀ. ಎಂ.ಸಿ. ನಾಣಯ್ಯ : ಇರಲಿ ಸ್ವಾಮಿ. I think we should have wits in between in Parliamentary System during the debate to keep it lively. ಹಿರಿಯ ಸದಸ್ಯರಾಗಿರತಕ್ಕಂಥ ವಾಟಾಳ್ ನಾಗರಾಜ್‌ರವರು, ಸಂಸದೀಯ ಸಚಿವರು ಕೂಡ ಇದರ ಬಗ್ಗೆ ಬಹಳ ಮೌನವಾಗಿದ್ದರು ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ರಾಜ್ಯಪಾಲರು ಭಾಷಣವನ್ನು ಮಾಡುತ್ತಾರೆ. ರಾಜ್ಯಪಾಲರ ಭಾಷಣದಲ್ಲಿ ಮುಂದಿನ ವರ್ಷಕ್ಕೆ ಇರತಕ್ಕಂಥ ನೀತಿಯನ್ನು ಅವರು ಪ್ರತಿಪಾದನೆ ಮಾಡುತ್ತಾರೆ. ಆ ನೀತಿಯನ್ನು ಪ್ರತಿಪಾದನೆ ಮಾಡಿ ಆದಮೇಲೆ ಬಜೆಟನ್ನು ಮಂಡಿಸುತ್ತಾರೆ. ರಾಜ್ಯಪಾಲರ ಭಾಷಣದಲ್ಲಿ ಹೇಳಿರತಕ್ಕಂಥ ಕೆಲವು ವಿಚಾರಗಳನ್ನು ಕೂಡ ಬಜೆಟ್‌ನಲ್ಲಿ ನಾವು ಅಳವಡಿಸಿಕೊಂಡು ಅದರ ಮೇಲೆ ಚರ್ಚೆ ಮುಂದುವರೆಯಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೆ, ಆಗಿರತಕ್ಕಂಥಾದ್ದು ತಮಗೂ ಗೊತ್ತಿದೆ. ಸಭಾ ಸಲಹಾ ಸಮಿತಿಯಲ್ಲಿ ಮೀಟಿಂಗ್ ಆಯಿತು ಮೀಟಿಂಗ್ ಆದಮೇಲೆ ಅವರೆಲ್ಲಾ ಸೇರಿಕೊಂಡು ರಾಜ್ಯಪಾಲರ ಭಾಷಣದ ಮೇಲೆ ಕೂಡ ನಾವು ಇನ್ನೂ ಹೆಚ್ಚು ಹೆಚ್ಚು ಚರ್ಚೆ ಮಾಡಬೇಕು ಎನ್ನುವ ತೀರ್ಮಾನ ಮಾಡಿ ಈ ಒಂದು ಮುಂಗಡ ಪತ್ರದ ಚರ್ಚೆ ಆದಮೇಲೂ ಕೂಡ ಇದನ್ನು ತೆಗೆದುಕೊಂಡು ನಾವು ಚರ್ಚೆ ಮಾಡಬಹುದು ಎಂದು ತಾವು ಹೇಳಿದ್ದರಿಂದ ಬಹುಶಃ ಈ ಒಂದು ಪರಿಸ್ಥಿತಿ ನಿರ್ಮಾಣವಾಯಿತು ಮತ್ತು ಇದಕ್ಕೆ ಇಲ್ಲಿ ನಾವು ಎಲ್ಲರೂ ಒಪ್ಪಿಗೆಯನ್ನೂ ಕೊಟ್ಟಿದ್ದೇವೆ. ಆದ್ದರಿಂದ, ನಿಮ್ಮ ಮನಸ್ಸಿನ ಚಿಂತನೆ ನನಗೆ ಅರ್ಥವಾಯಿತು. ರಾಜ್ಯಪಾಲರ ಭಾಷಣ ಚರ್ಚೆ ಆಗತಕ್ಕಂಥಾದ್ದು, ಮೆರವಣಿಗೆಯಲ್ಲಿ ತರತಕ್ಕಂಥಾದ್ದು, ಲೆಗೆಸಿ ಆಫ್ ದಿ ಬ್ರಿಟಿಷ್ ಅಂತ ಹೇಳುತ್ತಿರತಕ್ಕಂಥ ನಿಮ್ಮ

ಮನಸ್ಸಿನಲ್ಲಿ ಚಿಂತನೆ ಯಾವುದು ಇದೆ ಅದು ನಿಜ, ಬಹಳಷ್ಟು ಜನ ಅದರ ಬಗ್ಗೆ ವ್ಯಾಖ್ಯಾನ ಮಾಡುತ್ತಿದ್ದಾರೆ. ಆದರೆ ಎಲ್ಲಿಯವರೆಗೆ ರಾಜ್ಯಾಂಗ ಬದ್ಧವಾಗಿ ನಾವು ಅದನ್ನು ಒಪ್ಪಿಕೊಂಡಿದ್ದೇವೆ, ಅಲ್ಲಿಯವರೆಗೆ ನಾವು ಅದಕ್ಕೆ ಕೊಡಬೇಕಾಗಿರತಕ್ಕ ಗೌರವವನ್ನು ಕೊಟ್ಟು, ರಾಜ್ಯಾಂಗದಲ್ಲಿ ತಿದ್ದುಪಡಿಯಾಗಿ ಅದು ಬೇಕಾಗಿಲ್ಲ ಎಂದು ಹೇಳುತ್ತಾ ಇರತಕ್ಕಂಥ ಪರಿಸ್ಥಿತಿ ನಿರ್ಮಾಣ ಆದಮೇಲೆ ಬಹುಶಃ ವಾಟಾಳ್ ನಾಗರಾಜ್‌ರವರ ಚಿಂತನೆ ಯಾವುದು ಇದೆ, ಆ ಚಿಂತನೆ ಪ್ರಸ್ತುತ ಎನ್ನತಕ್ಕಂಥಾದ್ದನ್ನು ಕೂಡ ಇಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಆಯಿತು. ಸಂವಿಧಾನ ಬದ್ಧವಾಗಿ ತಾವು ಇದನ್ನು ಒಪ್ಪಿಕೊಂಡಿರುವುದನ್ನು ನಾನು ತಳ್ಳಿಹಾಕುವುದಕ್ಕೆ ಹೋಗುವುದಿಲ್ಲ. ಆದರೆ ಅದನ್ನೇ ನೀವು ಅಪಚಾರ ಮಾಡುತ್ತಿದ್ದೀರಲ್ಲ. ಆ ನೀತಿಯನ್ನು ನೀವು ಸರಿಯಾಗಿ ಅನುಸರಿಸಲಿಲ್ಲ. ಇವತ್ತು ಮುಕ್ತಾಯವಾಗುತ್ತದೆ ಎಂದು ಕಾಣಿಸುತ್ತದೆ. ಇಂದು ರಾಜ್ಯಪಾಲರಿಗೆ ಕೊನೆಯ ವಂದನೆ ಸಲ್ಲಿಸಿ ಎಲ್ಲಾ ಮುಗಿದು, ನೀವು ಏನೇನು ಮಾತನಾಡಬೇಕೋ ಎಲ್ಲಾ ಮಾತನಾಡಿ, ಆಯವ್ಯಯದ ಮೇಲೆ ಏನೇನು ಬೇಕೋ ಎಲ್ಲಾ ಮಾತನಾಡಿ ಎಂದು ಇವೆಲ್ಲಾ ಮಾಡುತ್ತಿದ್ದೀರಿ. ಕೊನೆಯಲ್ಲಿ ನೀವು ರಾಜ್ಯಪಾಲರ ಬಾಯಿಯಲ್ಲಿ ಹೇಳಿಸಿದ್ದೀರಿ. 1995ರ ಮಾರ್ಚ್ 31ನೇ ತಾರೀಖಿನೊಳಗೆ ಅಸಲು ಹಣವನ್ನು ಪಾವತಿ ಮಾಡಿದವರಿಗೆ ಬಡ್ಡಿ ಮನ್ನಾ ಎಂದು. ಇದನ್ನು ರಾಜ್ಯಪಾಲರು ಹೇಳಿರುವುದು. ರಾಜ್ಯಪಾಲರ ಭಾಷಣದಲ್ಲಿ ಹೇಳಿಸಿದಿರಿ ಮಾರ್ಚ್ 31 ಎಂದು. ಮತ್ತು ಈಗ ನೀವು ಹೇಳುತ್ತಿದ್ದೀರಿ ಮೇ 31 ಅಂತ ನನಗೆ ಸಂತೋಷ. ಹಾಗಾದರೆ ರಾಜ್ಯಪಾಲರನ್ನು ನೀವು ಕೈಬಿಟ್ಟುಬಿಟ್ಟಿರಲ್ಲ, ಅವರ ಭಾಷಣದ ಕತೆ ಮುಗಿಯಿತಲ್ಲ. ಇದಕ್ಕೆ ಏನಾದರೂ ಅರ್ಥ ಇದೆಯೇ ? ನಿಜವಾಗಲೂ ಇದು ನಾಟಕೀಯವಲ್ಲವೇ ? ಇದು ನಿಜವಾಗಲೂ ನಾಚಿಕೆಗೇಡು ಮಾರ್ಚ್ 31 ಎಂದು ಹೇಳಿ ನಿಮ್ಮ ಇಚ್ಛೆ ಬಂದಹಾಗೆ ರಾಜ್ಯಪಾಲರ ಭಾಷಣವನ್ನು ಮೂಲೆಗೆ ಹಾಕಿ, ರಾಜ್ಯಪಾಲರ ಭಾಷಣ ತಿರುಚಿ ನಿಮ್ಮ ಇಚ್ಛೆ ಬಂದ ಹಾಗೆ ಹೇಳಿಬಿಡುವುದು ಮೇ 31. ಹೀಗೆಂದರೆ ಏನು ಅದು ? ಸದನದಲ್ಲಿ ಚರ್ಚೆಯಾದ ಮೇಲೆ ತಾನೆ ಹೇಳುವುದು ?

ಶ್ರೀ. ಎಸ್.ಎಸ್. ಪಾಟೀಲ್ : ರೈತರಿಗೆ ಮಾಡುವುದೆಲ್ಲಾ ನಾಚಿಕೆಗೇಡೇ. ಏನು ಮಾತನಾಡುವುದು ? ರೈತರಿಗೆ ಒಳ್ಳೆಯದು ಆಗುವ ದೃಷ್ಟಿಯಿಂದ ಮಾಡಿದ್ದೇವೆ.

ಶ್ರೀ. ವಾಟಾಳ್ ನಾಗರಾಜ್ : ಸ್ವಲ್ಪ ಹೇಳಿ, ಅದನ್ನು ತಿರುಗಿಸಬೇಡಿ.

ಶ್ರೀ ಎಸ್.ಎಸ್. ಪಾಟೀಲ್ : ತಿರುಗಿಸುವುದೇನಿದೆ.

ಒಬ್ಬ ಮಾನ್ಯ ಸದಸ್ಯರು : ಸ್ವಾಮಿ ಅವರು ಬೆಂಗಳೂರಿನವರು.

ಶ್ರೀ ವಾಟಾಳ್ ನಾಗರಾಜ್ : ಇನ್ನೂ ಒಂದು ವರ್ಷ ಕಾಲಾವಕಾಶ ಕೊಡಲಿ. ಇದನ್ನು ರೈತರಿಗೆ ಇನ್ನೊಂದು ವರ್ಷ ಕಾಲ ಮುಂದುವರಿಸಲಿ. ನಾನು ಈ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸುತ್ತೇನೆ. ಆದರೆ ಅವರು ಪ್ರಾಮಾಣಿಕವಾಗಿ ರೈತರ ಬಗ್ಗೆ ಮಾತನಾಡುತ್ತಿಲ್ಲ ಅದನ್ನು ನಾನು ಮಾತನಾಡುತ್ತಿಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ಮೊಸಳೆ ಕಣ್ಣೀರು ಸುರಿಸುವವರೇ ಬಹಳ ಹೆಚ್ಚು.

ಶ್ರೀ ವಾಟಾಳ್ ನಾಗರಾಜ್ : ನಾನು ಹೇಳಿದ ಮೇಲೆ ಮತ್ತೆ ಇದನ್ನೇ ಮಾತನಾಡುತ್ತಿದ್ದಿರಿ ನಾನು ಇಲ್ಲ ಎಂದರೆ ನೀವು ಉಂಟು ಎಂದು ಹೇಳುತ್ತಿದ್ದೀರಿ, ಅದೇನದು ? ನಾನು ಹೇಳುವುದೇನೆಂದರೆ, ಭಾಷಣದಲ್ಲಿ ಒಂದು ಹೇಳಿಸುತ್ತೀರಿ. ಪಾಪ, ಅವರ ಭಾಷಣವನ್ನೇ ತಿರುಚುತ್ತೀರಿ. ಈ ಭಾಷಣ ವ್ಯವಸ್ಥೆ ಸರಿಯಿಲ್ಲ........

ಶ್ರೀ ಎಸ್. ಆರ್. ಲಕ್ಷ್ಮಯ್ಯ : ಅವರ ಸರ್ಕಾರ ಬಂದ ಮೇಲೆ ಹಾಗೆ ಮಾಡಲಿ.

ಶ್ರೀ ವಾಟಾಳ್ ನಾಗರಾಜ್ : ಯಾವ ಸರ್ಕಾರ ?

ಅಧ್ಯಕ್ಷರು : ನಿಮಗೆ ಇವರು ಯಾರೂ ಸರಿಯಿಲ್ಲ. ನೀವು ನನ್ನ ಕಡೆ ತಿರುಗಿಕೊಂಡು ಮಾತನಾಡುತ್ತಾ ಹೋಗಿ. ಸುಮ್ಮನೆ ಸಮಯ ಹೋಗಿ ಬಿಡುತ್ತದೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಅವರು ಅದನ್ನು ಹರಿದು ಬಿಟ್ಟಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ನಾನು ಅದನ್ನು ಇಲ್ಲ ಎಂದು ಹೇಳುತ್ತಿಲ್ಲ. ಹರಿದು ಹಾಕಿದೆ, ಹರಿದು ಬಿಸಾಡಿದೆ. ಅದರ ಬಗ್ಗೆ ಮಾತನಾಡುತ್ತಿಲ್ಲ. ಈ ವ್ಯವಸ್ಥೆ ಸರಿಯಲ್ಲ ಎಂದು ಹೇಳುತ್ತಿದ್ದೇನೆ.

ಶ್ರೀ ಸಿ. ಬೈರೇಗೌಡ : ಅದನ್ನು ಹರಿದು ಬಿಸಾಕಿದ ಮೇಲೆ ಅದರ ಮೇಲೆ ಇವರಿಗೆ ನಂಬಿಕೆ ಇಲ್ಲ ಅನ್ನತಕ್ಕಂಥಾದ್ದು ವ್ಯಕ್ತವಾಗುತ್ತದೆ. ಈಗ ಏನು ಹೇಳುತ್ತಿದ್ದಾರೆ ಎಂದರೆ ರಾಜ್ಯಪಾಲರ ಬಾಯಿಂದ ಹೇಳಿಸಿದಿರಿ ಮಾರ್ಚ್ 31ರೊಳಗೆ ಅಸಲು ಪಾವತಿ ಮಾಡಿದ ರೈತರಿಗೆ ಬಡ್ಡಿ ಮನ್ನಾ, ಸುಸ್ತಿ ಬಡ್ಡಿ ರಿಯಾಯಿತಿ ಎಂದು ತೋರಿಸಿದ್ದೀವೆ ಎಂದು ಆದರೆ ಅದನ್ನು ಪುನಃ ಮುಂದುವರಿಸುತ್ತೇವೆ ಎಂದು ಹೇಳುತ್ತಿದ್ದಾರೆ ಯಾವಾಗ ಅದನ್ನು ಪ್ರಯೋಜನ ಇಲ್ಲ ಎಂದು ಹರಿದು ಬಿಸಾಕಿದರೋ ಅದನ್ನು ಅವರು ಉಲ್ಲೇಖ ಮಾಡಿ ಹೇಳತಕ್ಕಂಥಾದ್ದು ಸಹ ಸರಿಯಿಲ್ಲ.

ಅಧ್ಯಕ್ಷರು : ಹೌದು, ನನಗೆ ಒಂದು ಆಶ್ಚರ್ಯ. ನಿಮಗೆ ಕೊಟ್ಟಿದ್ದ ಪ್ರತಿ ನೀವು ಹರಿದು ಹಾಕಿಬಿಟ್ಟಿರಿ. ಎಕ್ಸ್ಟ್ರಾ ಕಾಪಿ ಎಲ್ಲಿಂದ ಬಂತು ? ಪ್ರತಿ ಎಲ್ಲಿ ಸಿಕ್ಕಿತು.

ಶ್ರೀ ವಾಟಾಳ್ ನಾಗರಾಜ್ : ಒಂದು ಹೇಳುತ್ತೇನೆ. ಒಂದು ಪ್ರತಿಯನ್ನು ಹರಿದರೆ ಸಾವಿರ ಪ್ರತಿಗಳು ನಿಮ್ಮಲ್ಲಿ ಇವೆ.

ಡಾ. ಯು. ಚಿತ್ತರಂಜನ್ : ಹರಿದು ಹಾಕಿದ್ದುದು ಇಂಗ್ಲೀಷ್ ಪ್ರತಿ.

ಅಧ್ಯಕ್ಷರು : ಚಿತ್ತರಂಜನ್ ಹೇಳಿದ್ದುದು ಸರಿಯಾಗಿದೆ.

ಶ್ರೀ ವಾಟಾಳ್ ನಾಗಾರಾಜ್ : ನಾನು ಒಂದು ಹೇಳುತ್ತೇನೆ. ನಾನು ಪ್ರತಿ ಹರಿದೆ. ರಾಜ್ಯಪಾಲರ ಭಾಷಣದ ವ್ಯವಸ್ಥೆ ಸರಿಯಿಲ್ಲ ಎಂದು ಹೇಳಿದ್ದೇನೆ. ಆದರಿಂದ ಹಿಂದೆ ಸರಿಯತಕ್ಕಂಥ ಪ್ರಶ್ನೆ ಇಲ್ಲ. ಆದರೆ ರಾಜ್ಯಪಾಲರನ್ನು, ಅವರ ಭಾಷಣವನ್ನು ತಾವು ತಲೆಯ ಮೇಲೆ ಇಟ್ಟುಕೊಂಡು ಅವರ ಪಾದಪೂಜೆ ಮಾಡುತ್ತಾ ಇದ್ದೀರಿ. ನಾನು ತಮಗೆ ಹೇಳುತ್ತಾ ಇದ್ದೇನೆ ತಾವು ಅವರಿಗೆ ಯಾವ ರೀತಿ ಗೌರವವನ್ನು ಕೊಡುತ್ತಾ ಇದ್ದೀರಿ ? ರಾಜ್ಯಪಾಲರ ಬಗ್ಗೆ ನಾನು ಹೇಳಿದ್ದುದು ಸರಿಯಿಲ್ಲ ಎಂದು ತಾವು ಹೇಳಿದ್ದೀರಿ. ಆದರೆ ನೀವು ತೆರೆಯ ಮರೆಯಲ್ಲಿ

ರಾಜ್ಯಪಾಲರಿಗೆ ಅಗೌರವವನ್ನು ಮಾಡುತ್ತಾ ಇದ್ದೀರಿ. ನಾನು ಇದರ ಬಗ್ಗೆ ಹೆಚ್ಚಿಗೆ ಹೋಗುವುದಿಲ್ಲ. ಉತ್ತರವನ್ನು ಇವತ್ತು ಯಾರು ಕೊಡಬೇಕಾಗಿತ್ತು ? ಮಾನ್ಯ ರಾಜ್ಯಪಾಲರು ಕೊಡಬೇಕಾಗಿತ್ತು, ಹಾಗಾದರೆ ಅವರ ಪರವಾಗಿ ಮುಖ್ಯ ಮಂತ್ರಿಗಳು ಏಕೆ ಉತ್ತರವನ್ನು ಕೊಡಬೇಕು ? ಇದು ಏನು ನಾಚಿಕೆಗೇಡು. ಇದು ರಾಜ್ಯಪಾಲರ ಭಾಷಣ, ಅವರ ಉತ್ತರ ಇನ್ನೊಬ್ಬರು ಕೊಡುವುದು. ಇದೇನು ವ್ಯವಸ್ಥೆ. ಇದು ಸರಿಯಲ್ಲ ಇವತ್ತು ಉತ್ತರ ಕೊಡಿಸಲು ಅವರನ್ನು ಮೆರವಣಿಗೆಯಲ್ಲಿ ಕರೆದುಕೊಂಡು ಬರಬೇಕಾಗಿತ್ತು ಈ ನಾಟಕೀಯ ಏನಿದೆ ಇದು ಬದಲಾವಣೆಯಾಗಬೇಕು ಎನ್ನತಕ್ಕಂಥದ್ದು ನನ್ನ ಸ್ಪಷ್ಟವಾದಂಥ ಅಭಿಪ್ರಾಯ. ಒಪ್ಪಿಕೊಳ್ಳುವುದು, ಬಿಡುವುದು ನಿಮಗೆ ಸೇರಿದ್ದುದು. ನಾನು ಇದನ್ನು ತೀರ ಜಾಸ್ತಿಯಾಗಿ ಲಂಬಿಸಿ ಎಳೆದುಕೊಂಡು ಹೋಗುವುದಕ್ಕೆ ಹೋಗುವುದಿಲ್ಲ. ವಸ್ತುಸ್ಥಿತಿ ಏನಿದೆ ಈ ವ್ಯವಸ್ಥೆ ಬಗ್ಗೆ ದೇಶದಲ್ಲಿ ಚಿಂತನೆಯಾಗಬೇಕು. ಮಾನ್ಯ ರಾಜ್ಯಪಾಲರ ವ್ಯವಸ್ಥೆ, ಅವರ ಭಾಷಣದ ರೀತಿನೀತಿಗಳ ಬಗ್ಗೆ ದೇಶದ ಉದ್ದಗಲಕ್ಕೂ ಚಿಂತನೆಯಾಗಬೇಕು. ಉದಾಹರಣೆಗೆ ಸದನವನ್ನು ಬಿಟ್ಟು ಹೊರಗಡೆ ಕುಳಿತುಕೊಂಡು ಮಾತನಾಡಿದಾಗ ನೀವು ಏನು ಹೇಳುತ್ತೀರಿ, ನೀವು ಹೇಳುವುದೆಲ್ಲ ಸತ್ಯವಾಗಿದೆ, ಪರಿಸ್ಥಿತಿ ಹಾಗೆ ಇದೆ, ಸದನದಲ್ಲಿ ಈ ರೀತಿ ಮಾಡಬೇಕಾಗಿದೆ ಎಂದು. ಅಂದರೆ ನಮ್ಮ ಮನಸ್ಸು ಈ ವ್ಯವಸ್ಥೆ ಸರಿಯಿಲ್ಲ ಎಂದು ಹೇಳುತ್ತದೆ. ಅದರೆ ನಾಟಕೀಯವಾಗಿ ಮಾಡತಕ್ಕಂಥ ವಿಚಾರ ಏನಿದೆ ಇದು ನಿಜವಾಗಿಯೂ ಒಂದು ರೀತಿಯಾಗಿ ರಾಜ್ಯಪಾಲರ ವ್ಯಕ್ತಿತ್ವಕ್ಕೆ ಧಕ್ಕೆಯಾಗುತ್ತದೆ. ನನಗೆ ಅವರ ಬಗ್ಗೆ ವೈಯಕ್ತಿಕವಾಗಿ ಬಹಳ ಗೌರವ ಇದೆ. ಇದರಲ್ಲಿ ಎರಡು ಅಭಿಪ್ರಾಯವೇನೂ ಇಲ್ಲ. ಆದರೆ ರಾಜ್ಯಪಾಲರುಗಳಿಗೆ ಸಂಪೂರ್ಣ ಅಧಿಕಾರ ಇರಬೇಕೆ? ಬಿಡಬೇಕೆ ? ಎನ್ನತಕ್ಕಂಥದ್ದು ಪ್ರಶ್ನೆಯಾಗಿದೆ. ಈ ಸದನದಲ್ಲಿ ಎರಡು ಮೂರು ಸಾರಿ ತಮಿಳುನಾಡು ವಿಚಾರಗಳ ಬಗ್ಗೆ ಪ್ರಸ್ತಾಪ ಬಂದಿದ್ದು ತಮಗೆ ಗೊತ್ತು. ಇದು ಇವತ್ತು ದೇಶದಲ್ಲಿ ಚರ್ಚೆಯಾಗಬೇಕು. ಯಾರೋ ಒಬ್ಬ ಯಾವುದೋ ಆಪಾದನೆ ಸರ್ಕಾರದ ಮೇಲೆ ಮಾಡಿದ ನಂತರ ಆ ಸರ್ಕಾರದ ಮೇಲೆ ಮೊಕದ್ದಮೆ ಹಾಕಬಹುದು ಅಂಥ ರಾಜ್ಯಪಾಲರು ನೇರವಾಗಿ ಹೇಳುವುದು, ಇಂಥ ವ್ಯವಸ್ಥೆಗಳನ್ನೆಲ್ಲಾ ನೋಡಿದಾಗ ಮತ್ತೊಮ್ಮೆ ದೇಶದಲ್ಲಿ ಇದರ ಬಗ್ಗೆ ಚಿಂತನೆ ನಡೆಸಬೇಕು. ಪ್ರಜಾಪ್ರಭುತ್ವದ ಹಿತದೃಷ್ಟಿಯಿಂದ ಚುನಾಯಿಸಿದ ಸರ್ಕಾರವನ್ನು ನೇರವಾಗಿ ರಾಜ್ಯಪಾಲರು ತಮ್ಮ ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳಬಹುದೆ ? ತಮ್ಮ ಅಧಿಕಾರದ ಗದ್ದುಗೆಯನ್ನು ವ್ಯವಸ್ಥಿತವಾಗಿ ನಡೆಸದೆ ದಾರಿ ತಪ್ಪಬಹುದೆ ? ಇವುಗಳೆಲ್ಲ ಚಿಂತನೆಗೆ ಗ್ರಾಸವಾಗುತ್ತದೆ. ರಾಜ್ಯಪಾಲರುಗಳ ವ್ಯವಸ್ಥೆಯನ್ನು ಚಿಂತನೆ ಮಾಡುವುದಕ್ಕೆ ಸೂಕ್ತವಾದ ವೇದಿಕೆ ಎಂದರೆ ಅಧ್ಯಕ್ಷರ ಸಮ್ಮೇಳನ ಎಂದು ನನಗನ್ನಿಸುತ್ತದೆ. ಅದು ಒಂದು ಬಹಳ ಒಳ್ಳೆಯ ಸೂಕ್ತವಾದ ವೇದಿಕೆ ಮತ್ತು ದೇಶದಲ್ಲಿರತಕ್ಕಂತಹ ಕಾನೂನು ಪಂಡಿತರುಗಳನ್ನೆಲ್ಲಾ ಸೇರಿಸಿ ಇದರ ಬಗ್ಗೆ ಏನು ಮಾಡಬೇಕು ಎನ್ನತಕ್ಕಂತಹ ಬಗ್ಗೆ ಒಂದು ಸಮಗ್ರ ಚಿಂತನೆ ಆಗಬೇಕಾದುದು ಕರ್ತವ್ಯ. ಅ ಚಿಂತನೆಯಾದರೆ ಒಂದು ಹೊಸ ದಿಕ್ಕಿಗೆ ದಾರಿ ಕೊಡುತ್ತದೆ. ಒಂದು ಮಾತನ್ನು ಹೇಳುವುದಾದರೆ, ನಾವು ಇಲ್ಲಿ ಒಂದು ಮಸೂದೆಯನ್ನು ಪಾಸ್ ಮಾಡಿ, ವಿಧಾನ ಪರಿಷತ್‌ಗೆ ಕಳುಹಿಸಿದೆವು. ಆದರೆ

ವಿಧಾನ ಪರಿಷತ್‌ನಲ್ಲಿ ಬಹುಮತ ಕಳೆದುಕೊಂಡು ತಳ್ಳಿ ಹಾಕಿತು. ಮತ್ತೆ ಇಲ್ಲಿಗೆ ಆ ಮಸೂದೆ ಬಂತು. ಅಂದಮೇಲೆ ವಿಧಾನ ಪರಿಷತ್ ಇರಬೇಕೆ ಎಂದು ನಾವು ಯೋಚನೆ ಮಾಡಬೇಕಾಗುತ್ತದೆ. ಇವತ್ತಿನ ವಿಧಾನ ಪರಿಷತ್ತಿನ ವ್ಯವಸ್ಥೆ ಏನು ? ಆ ವಿಧಾನ ಪರಿಷತ್ತಿನ ಸದಸ್ಯರ ಬಗ್ಗೆ ನಾನು ಅಗೌರವವನ್ನು ತೋರಿಸುವುದಿಲ್ಲ. ವಿಧಾನಪರಿಷತ್ತಿನ ಸದಸ್ಯರ ಬಗ್ಗೆ ನನಗೆ ಅಪಾರ ಗೌರವ ಇದೆ. ವಿಧಾನ ಪರಿಷತ್ತು - ಎಂಬ ಬಿಳಿ ಆನೆ ಇವತ್ತು ಇರಬೇಕೆ ? ತಮಿಳುನಾಡಿನಲ್ಲಿ ವಿಧಾನ ಪರಿಷತ್ ಇಲ್ಲ, ಆಂಧ್ರದಲ್ಲಿ ಇಲ್ಲ, ಪಶ್ಚಿಮ ಬಂಗಾಳದಲ್ಲಿ ಇಲ್ಲ. ಆದರೆ ಕರ್ನಾಟಕದಲ್ಲಿ ಇನ್ನು ಕೆಲವು ರಾಜ್ಯಗಳಲ್ಲಿ ಇದೆ. ವಿಧಾನಸಭೆಯಲ್ಲಿ ನಾವು ಮಾಡಿದಂಥ ಮಸೂದೆಯನ್ನು ಆ ಸದನಕ್ಕೆ ಕಳುಹಿಸಿದಾಗ ವಿಧಾನ ಪರಿಷತ್ತಿನಲ್ಲಿ ಬಹುಮತವನ್ನು ಕಳೆದುಕೊಂಡು ತಿರಸ್ಕೃತವಾಗಿ ಇಲ್ಲಿಗೆ ಬಂದಾಗ ಮತ್ತೆ ಅದನ್ನು ಒಪ್ಪಬೇಕು ಅನ್ನತಕ್ಕಂಥ ಒಂದು ನೀತಿ ಇರುವುದರಿಂದ ವಿಧಾನ ಪರಿಷತ್ತಿನ ಅವಶ್ಯಕತೆ ಉಂಟೆ ? ಈ ವಿಧಾನ ಪರಿಷತ್ ಬೇಡ, ಇದನ್ನು ರದ್ದು ಮಾಡಬೇಕೆಂಬ ಚರ್ಚೆ ಅನೇಕ ಕಡೆ ನಡೆದಿದೆ ಮತ್ತೆ ಅನೇಕ ರಾಜ್ಯಗಳಲ್ಲಿ ರದ್ದು ಕೂಡ ಮಾಡಿದ್ದಾರೆ. ಇವತ್ತು ತಮಿಳುನಾಡಿನಲ್ಲಿ ಇಲ್ಲ, ಆಂಧ್ರದಲ್ಲಿ ಇಲ್ಲ, ಪಶ್ಚಿಮ ಬಂಗಾಳದಲ್ಲಿ ಇಲ್ಲ. ಮತ್ತೊಂದು ವಿಚಾರ ಎಂದರೆ ಈ ಪರಿಷತ್ತಿಗೆ ಮತದಾರರು ಯಾರು ? ನಾವೇ ಮತದಾರರು. ಪದವೀಧರರ ಕಡೆಯಿಂದ, ಸ್ಥಳೀಯ ಸಂಸ್ಥೆಗಳ ಕಡೆಯಿಂದ, ಶಿಕ್ಷಕರ ಕಡೆಯಿಂದ ಮತ್ತು ಸದನದ ಕಡೆಯಿಂದ ಮತದಾರರಾಗಿರುತ್ತೇವೆ. ಈ ವ್ಯವಸ್ಥೆಯಲ್ಲಿ ನಾವು ಎರಡೆರಡು ಕಡೆಗಳಿಂದ ಮತದಾರರಾಗಿರುತ್ತೇವೆ. ನಮ್ಮ ವಿಧಾನ ಪರಿಷತ್ ಬಗ್ಗೆ ಮಾತನಾಡುತ್ತಿಲ್ಲ. ದೇಶದ ಸಮಗ್ರ ವಿಧಾನ ಪರಿಷತ್‌ಗಳ ಬಗ್ಗೆ ಪ್ರಮಾಣಿಕವಾಗಿ ಮಾತನಾಡುತ್ತಾ ಇದ್ದೇನೆ. ಕೆಲವು ಸಾರಿ ನನಗನ್ನಿಸುತ್ತದೆ, ವಿಧಾನ ಪರಿಷತ್ ಎಂದರೆ ರಾಜಕೀಯ ನಿರಾಶ್ರಿತರಿಗೆ ಆಶ್ರಯವನ್ನು ಕೊಡತಕ್ಕಂಥ ಒಂದು ಸ್ಥಳ ಆಗುತ್ತೋ ಏನೋ ಅನ್ನತಕ್ಕಂಥ ಭಯ ನನಗೆ ಈಗ ಬರುತ್ತಾ ಇದೆ. ಇತ್ತೀಚೆಗೆ ತಾವು ನೋಡುತ್ತಾ ಇರಬಹುದು ನಾಮಕರಣಗಳು ಹೇಗೆ ಅಗುತ್ತಾ ಇವೆ, ಸತ್ಸಂಪ್ರದಾಯ ಇತ್ತೆ. ತಮಗೆ ಜ್ಞಾಪಕ ಇರುವಂತೆ ಮಾನ್ಯ ಕೆಂಗಲ್ ಹನುಮಂತಯ್ಯನವರು ಮುಖ್ಯ ಮಂತ್ರಿಯಾಗಿದ್ದಾಗ ಅವರು ಪಿಟೀಲ್ ಚೌಡಯ್ಯನವರನ್ನು, ಗುಬ್ಬಿ ವೀರಣ್ಣನವರಂತಹವರನ್ನು ಒಳ್ಳೆಯ ವಿದ್ವಾಂಸರುಗಳನ್ನು, ಮೇಧಾವಿಗಳನ್ನು ಸದಸ್ಯರನ್ನಾಗಿ ಮಾಡಿದ್ದರು. ಇವತ್ತಿನ ನಾಮಕರಣಗಳ ವ್ಯವಸ್ಥೆಯೇ ಬೇರೆ, ಮಾನ್ಯ ಮುಖ್ಯ ಮಂತ್ರಿಗಳಿಗೆ, ನಮ್ಮ ರಾಜಕೀಯಕ್ಕೆ ಬೇಕಾದಂಥವರನ್ನು ನಾವು ನಾಮಕರಣ ಮಾಡಬಹುದು, ಅದಕ್ಕೆ ಅಡೆತಡೆ ಏನೂ ಇಲ್ಲ. ಈ ವ್ಯವಸ್ಥೆಗೆ ಹೋದಾಗ ಮೂಲಭೂತವಾದ ವಿಧಾನ ಪರಿಷತ್‌ನ್ನು ಇಟ್ಟು ಕೊಳ್ಳಬೇಕೆ ? ಬಿಡಬೇಕೆ ? ಅನ್ನತಕ್ಕ ಬಗ್ಗೆ ತೀವ್ರವಾಗಿ ಚಿಂತನೆ ಮಾಡಬೇಕು. ಮತ್ತೊಂದು ಅಂಶ ಎಂದರೆ ವಿಧಾನ ಪರಿಷತ್ ಸದಸ್ಯರಿಗೆ ಆರು ವರ್ಷ, ಮತ್ತು ಚುನಾಯಿತ ಪ್ರತಿನಿಧಿಗಳಿಗೆ ಐದು ವರ್ಷ ಅವಧಿ, ಮತ್ತೆ ವಿಧಾನ ಸಭೆ ಸದಸ್ಯರು ಯಾವತ್ತು ಬೇಕಾದರೂ ಅಧಿಕಾರವನ್ನೂ ಕಳೆದುಕೊಳ್ಳಬಹುದು. ಮೂರು ವರ್ಷದಲ್ಲಿಯೇ ಹೋಗಬಹುದು, ಎರಡು ವರ್ಷದಲ್ಲಿಯೇ ಹೋಗಬಹುದು ಒಂದು ವರ್ಷದಲ್ಲಿಯೇ ಹೋಗಬಹುದು. ಆದರೆ ವಿಧಾನ ಪರಿಷತ್ ಸದಸ್ಯರು ಒಂದು

ಸಾರಿ ಸದಸ್ಯರಾದರೆ ಅವರು ಆರು ವರ್ಷದವರೆಗೆ ಇರುತ್ತಾರೆ. ಭ್ರಷ್ಟ ಬಂದರು ಅವರನ್ನು ಬದಲಾವಣೆ ಮಾಡುವ ಹಾಗಿಲ್ಲ. ಆರು ವರ್ಷ ಅವರು ಭದ್ರವಾಗಿರುತ್ತಾರೆ. ಸರ್ಕಾರದ ಗೊಂದಲದಿಂದ, ರಾಜಕಾರಣದ ಅನಾಹುತದಿಂದ ನಾವು ಯಾವ ಗಳಿಗೆಯಲ್ಲಿ ಬೇಕಾದರೂ ಹೋಗಬಹುದು. ನಮ್ಮ ಚುನಾವಣೆಗಳಲ್ಲಿ ನಾವು ಗೆದ್ದು ಬರಬೇಕಾದರೆ ನಾವು ಮೂರು ಸಮುದ್ರಗಳ ನೀರನ್ನು ಕುಡಿದು ಬರಬೇಕು. ಆ ಪರಿಸ್ಥಿತಿಯಲ್ಲಿ ಬಂದು, ಇಲ್ಲಿ ಕುಳಿತುಕೊಳ್ಳಬೇಕಾದರೆ ಇದು ಯಾರ್‍ಯಾರಿಗೂ ಬೇಡ ಅನ್ನಿಸುತ್ತದೆ. ಅದರಲ್ಲೂ ಇವತ್ತಿನ ಒಂದು ವ್ಯವಸ್ಥೆಯನ್ನು ಏನು ಮಾಡಿದ್ದೀರಿ, ಅದರಲ್ಲಿ ಮುಂದಿನ ಐದು ವರ್ಷಗಳು ಹೇಗೆ ನಾವು ಚುನಾವಣೆಯಲ್ಲಿ ಗೆದ್ದು ಬರುತ್ತೇವೋ ಗೊತ್ತಿಲ್ಲ. ತಾವು ಮಾಡಿರತಕ್ಕಂತಹ ಈ ಮಸೂದೆಯಿಂದ ನಾವು ಇಲ್ಲಿ ಒಳಗಡೆ ಬರಬೇಕಾದರೆ ನಮಗೆ ಏನೋ ಅಪಾಯ ಕಾದಿದೆ, ನಾನು ಗೆಲ್ಲುವುದಕ್ಕೆ ಹೇಗೋ ಪ್ರಯತ್ನ ಪಡುತ್ತೇನೆ. ಆದರೆ ಈ ವ್ಯವಸ್ಥೆ ಏನಿದೆ ಇದರಲ್ಲಿ.....

ಶ್ರೀ ಎಸ್. ಎಸ್. ಪಾಟೀಲ್ : ಮತ್ತೆ ಜನತಾ ದಳದವರೇ ಬರುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಬರಲಿ, ನೀವು ಬಂದರೆ ನನಗೆ ಏನು ವಿರೋಧವಿಲ್ಲ. ನಿಮ್ಮ ಸರ್ಕಾರವನ್ನು ಕಿತ್ತು ಹಾಕಬೇಕು ಎಂದು ನಾನು ಹೇಳುವುದಿಲ್ಲ. ಆ ಪ್ರಶ್ನೆಗೆ ಹೋಗುವುದಿಲ್ಲ. ಇದೊಂದು ವ್ಯವಸ್ಥೆ, ವಿಧಾನ ಪರಿಷತ್ ಸದಸ್ಯರಿಗೂ, ವಿಧಾನ ಸಭೆಯ ಸದಸ್ಯರಿಗೂ ಇರತಕ್ಕಂಥ ವ್ಯವಸ್ಥೆ ಏನು ? ನಾವು ಬೆಳಿಗ್ಗೆ ಎದ್ದರೆ ಜನರು ಬಂದು ನಮ್ಮ ಕುತ್ತಿಗೆ ಹಿಡಿಯುತ್ತಾರೆ. ವಿಧಾನ ಪರಿಷತ್ತಿನ ಸದಸ್ಯರ ಹತ್ತಿರ ಯಾರೂ ಹೋಗುವುದಿಲ್ಲ. ಮಾನ್ಯ ನಾಣಯ್ಯನವರೆ ಸ್ವಲ್ಪ ಗಮನ ಕೊಡಬೇಕು, ತಾವು ವಿಧಾನ ಪರಿಷತ್‌ನ ಸದಸ್ಯರಾಗಿದ್ದೀರಿ.

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ವಾಟಾಳ್ ನಾಗರಾಜ್‌ರವರು ನನ್ನನ್ನು ನೋಡಿ ಏನು ಹೇಳುತ್ತಾರೆ ಅಂದರೆ ಈ ನಾಣಯ್ಯನವರನ್ನು ಒಂದು ಸಲ ಕಳುಹಿಸಬೇಕು ಎಂಬ ತೀರ್ಮಾನಕ್ಕೆ ಬಂದಿರಬಹುದು ಎಂದು ಕಾಣುತ್ತದೆ. ಏಕೆಂದರೆ ಮಾನ್ಯ ಹಿರಿಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಹೇಳಿದರು ನಾವು ಮೂರು ಸಮುದ್ರದ ನೀರನ್ನು ಕುಡಿದು ಬರಬೇಕಾಗುತ್ತದೆ ಎಂದು. ವಿಧಾನ ಪರಿಷತ್ ಸದಸ್ಯರಿಗೆ ಆರು ವರ್ಷ, ವಿಧಾನ ಸಭಾ ಸದಸ್ಯರಿಗೆ ಐದು ವರ್ಷ ಎಂದೂ ಸಹ ಹೇಳಿದ್ದಾರೆ. ಆದರೆ ಅಲ್ಲಿ ಆರು ವರ್ಷ ಇರತಕ್ಕಂಥವರೂ ಕೂಡ ಈ ಸಭೆಯ ನಿರ್ಣಯಕ್ಕೆ ಒಳಪಟ್ಟೇ ಕೆಲಸ ಮಾಡಬೇಕಾಗುತ್ತದೆ. ಈ ಸಭೆಯ ನಿರ್ಣಯವನ್ನು ಬಿಟ್ಟು ಕೆಲಸ ಮಾಡಲಿಕ್ಕೆ ಆಗುವುದಿಲ್ಲ. ಕಾರಣ ಏನೆಂದರೆ, ಈ ಸದನ ಒಂದು ನಿರ್ಣಯವನ್ನು ತೆಗೆದುಕೊಂಡು ಬಿಟ್ಟರೆ ಆ ವಿಧಾನ ಪರಿಷತ್ತನ್ನು ಇವತ್ತೇ ಕಳುಹಿಸಿ ಬಿಡಬಹುದು. ಬಹುಶಃ ಇದರ ಬಗ್ಗೆ ಚಿಂತನೆ ಆಗಬೇಕಾಗಿರತಕ್ಕಂಥಾದ್ದು ಮತ್ತು ಆ ವ್ಯವಸ್ಥೆ ಬಗ್ಗೆ ಸಮಗ್ರವಾಗಿ ಚರ್ಚೆ ಮಾಡಿ, ಆ ಸದನ ಬೇಕಾಗಿಲ್ಲ ಎಂದು ಹೇಳತಕ್ಕ ಸಂದರ್ಭ ಬಂದಾಗ ಇದನ್ನು ವ್ಯಾಪಕವಾಗಿ ಚರ್ಚೆ ಮಾಡಬಹುದು. ಅದನ್ನು ಮಾಡಕೂಡದು ಎಂದು ಹೇಳುವುದಕ್ಕೆ ತಯಾರಿಲ್ಲ. ಹಿರಿಯ ಸದಸ್ಯರಾದ ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ಒಂದನ್ನು ಹೇಳುತ್ತೇನೆ, ಮೇಲ್ಮನೆಯ ಸದಸ್ಯರು ಎಂದು ಏತಕ್ಕೆ ಹೇಳುತ್ತೇವೆಂದರೆ, ಯಾವುದಾದರೂ ಒಂದು ವಿಧೇಯಕವನ್ನು ಇಲ್ಲಿ ಚರ್ಚೆಮಾಡಿ ಪಾಸ್ ಮಾಡಿ ಅಲ್ಲಿಗೆ ಹೋದಂಥ

ಸಂದರ್ಭದಲ್ಲಿ ಬಹುಶಃ ತಾವು ಯಾವುದೇ ಒಂದು ವಿಚಾರವನ್ನು ಆಳವಾಗಿ ಅಧ್ಯಯನ ಮಾಡದೆ, ಎಲ್ಲಿಯಾದರೂ ಲೋಪ ಬಂದಾಗ ಅದನ್ನು ಮೇಲ್ಮನೆಯ ಸದಸ್ಯರು ಸ್ವಲ್ಪಮಟ್ಟಿಗೆ ವಿಚಾರ ಮಾಡಿ, ಲೋಪ ಇದೆ ಎಂದು ಹಿಂದಕ್ಕೆ ಕಳುಹಿಸಿ ಇದನ್ನು ಪುನಃ ನೀವು ಪರ್ಯಾಲೋಚನೆ ಮಾಡಿ ಹೇಳುವಂಥ ಹಿನ್ನೆಲೆಯಲ್ಲಿ ಮಾತ್ರ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ ಮಾನ್ಯ ನಾಣಯ್ಯನವರು ಸುದೀರ್ಘವಾಗಿ ಈ ಸದನದಲ್ಲಿರಬೇಕು. ಅವರು ಈ ಸದನದಲ್ಲಿದ್ದರೆ ಒಂದು ರೀತಿಯ ಕಳೆ, ಅವರು ಸದನಕ್ಕೆ ಬಂದರೆ ನನಗೆ ಸ್ವಲ್ಪ ಶಕ್ತಿ ಬರುತ್ತದೆ. ಕೋಪತಾಪ ಇರುತ್ತದೆ. ಯಾವ ಗಳಿಗೆಯಲ್ಲಿ ಕೋಪ ಬರುತ್ತದೆಯೋ, ಯಾವ ಗಳಿಗೆಯಲ್ಲಿ ತಾಪ ಬರುತ್ತದೆಯೋ, ಆದರೂ ಅವರು ನನಗೆ ಒಬ್ಬ ಅತ್ಯಂತ ಒಳ್ಳೆಯ ಮಿತ್ರ, ಸ್ನೇಹಿತ. ಅದರಲ್ಲಿ ಎರಡು ಅಭಿಪ್ರಾಯವಿಲ್ಲ. ನಾಣಯ್ಯನವರು ನಮ್ಮ ಸದನಕ್ಕೆ ಶಾಸಕರಾಗೇ ಬರಲಿ, ನಾನು ಅತ್ಯಂತ ಸಂತೋಷವಾಗಿ ಅವರನ್ನು ಸ್ವಾಗತ ಮಾಡುತ್ತೇನೆ. ನಾಣಯ್ಯನವರಿಗೋಸ್ಕರವಾಗಿ ನಾನೇನು ವಿಧಾನ ಪರಿಷತ್ ಬಗ್ಗೆ ಹೇಳುತ್ತಿಲ್ಲ. ಪ್ರಮಾಣಿಕವಾಗಿ ಮಾತನಾಡುತ್ತಾ ಇದ್ದೇನೆ, ಅದು ಒಂದು ನೀತಿಯ ಪ್ರಶ್ನೆ. ತಾವು ಅರ್ಥ ಮಾಡಿಕೊಳ್ಳುತ್ತೀರಿ. ನಾನು ಮೂರು ಸಮುದ್ರದ ನೀರನ್ನು ಕುಡಿಯಬೇಕು ಎಂದು ಹೇಳಿದರೆ, ನಾವು ಶಾಸಕರಾಗಬೇಕಾದರೆ ಮೂರು ಸಮುದ್ರದ ನೀರಲ್ಲ ಏಳು ಸಮುದ್ರದ ನೀರನ್ನು ಕುಡಿಯಬೇಕು ಎಂದು ಮಾನ್ಯ ಗೃಹ ಸಚಿವರು ಹೇಳಿದರು. ಅದು ನಿಜ ಪರಿಸ್ಥಿತಿ ಹಾಗೆಯೇ ಇದೆ. ನಮ್ಮ ಕಷ್ಟ ತಮಗೆ ಗೊತ್ತಿದೆ, ತಾವು ಹೊರಗಡೆ ಇದ್ದಿರಿ, ಮತ್ತೆ ಒಳಗಡೆ ಬಂದಿರಿ, ಪರಿಸ್ಥಿತಿ ಏನು ಇದೆ ಎಂದು ತಮಗೂ ಗೊತ್ತಿದೆ. ನಾವು ಒಂದು ರೀತಿ ಬೀದಿಯಲ್ಲಿ ಎಲ್ಲರಿಗೂ ಸಿಕ್ಕಿಹಾಕಿಕೊಳ್ಳುವಂಥ ಜನ. ಅಂದರೆ ಬೀದಿ ಜನ. ಅವರ ತರಹ ಮಡಿವಂತರು ಏನೂ ಅಲ್ಲ. ವಿಧಾನ ಪರಿಷತ್‌ನವರದು ಮಡಿವಂತಿಕೆ. ನೀವು ಅಲ್ಲಿ ವೈಟ್‌ಹೌಸ್ ಇದೆಯಲ್ಲ, ಅಲ್ಲಿ ಕುಳಿತುಕೊಳ್ಳುವವರು, ಆದರೆ ನಾವೆಲ್ಲಾ ಚರಂಡಿ ಪಕ್ಕದಲ್ಲಿ ಇರತಕ್ಕಂಥ ಜನ. ನಾವು ಮತದಾರರ ಕೈಗೆ ನೇರವಾಗಿ ಸಿಕ್ಕುತ್ತೇವೆ. ನಿಮ್ಮನ್ನು ಹುಡುಕಿದರೂ ಸಿಗುವುದಿಲ್ಲ. ಹತ್ತು ಸಾವಿರ ಕ್ಯಾಂಡಲ್ ಬ್ಯಾಟರಿ ಹಾಕಿದರೂ ಸಿಕ್ಕುವುದಿಲ್ಲ. ಅದು ನಿಮಗೆ ಸಂಬಂಧವೇ ಇಲ್ಲ. ನಿಮ್ಮ ಸಂಬಂಧ ಸೇತುವೇನೇ ಇಲ್ಲ. ಇದು ಸ್ಪಷ್ಟ ಆದ್ದರಿಂದ ನೀವು ಇದನ್ನು ಚಿಂತನೆ ಮಾಡತಕ್ಕದ್ದು ಅತ್ಯಂತ ಪ್ರಾಮುಖ್ಯವಾಗಿದೆ. ಇನ್ನೊಂದು ವಿಷಯ. ಬಹುಜನರಿಗೆ ವಿಧಾನ ಪರಿಷತ್ತಿನ ಪರಿಚಯ ಇಲ್ಲ. ವಿಧಾನ ಪರಿಷತ್ತಿನ ಸದಸ್ಯರು ವಿಧಾನ ಪರಿಷತ್ ಎನ್ನುವುದು ಖಂಡಿತ ಪರಿಚಯ ಇಲ್ಲ. ಈಗ ನಾನು ಅದನ್ನು ಜಾಸ್ತಿ ಲಂಬಿಸುವುದಕ್ಕೆ ಹೋಗುವುದಿಲ್ಲ. ಈ ಸಂದರ್ಭದಲ್ಲಿ ಇವರು ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳ ಮೂಲಕ ಶಾಸನಬದ್ಧ ವಿಕೇಂದ್ರೀಕರಣ ಎನ್ನುವುದನ್ನೆಲ್ಲಾ ಹೇಳಿದ್ದಾರೆ. ಈ ಸದನದಲ್ಲಿ ಇದರ ಬಗ್ಗೆ ಬಹಳ ಸಾರಿ ಚರ್ಚೆಯಾಗಿದೆ. ಆದರೂ ತಮಗೆ ಮತ್ತೊಮ್ಮೆ ಜ್ಞಾಪಿಸುವುದಕ್ಕೆ ಹೇಳುತ್ತಿದ್ದೇನೆ. ಇನ್ನು ಇವತ್ತು ನಾಳೆ ಸದನ ಮುಗಿಯುತ್ತದೆ, ಸದನ ಮುಗಿದ ನಂತರ ನಾವು ಶಾಸಕರು ಇದರಿಂದ ದೂರಾಗುತ್ತೇವೆ. ನಾವು ಇಲ್ಲಿ ಕುಳಿತು ಒಂದು ಸಾವಿರ ಸಾರಿ ತಪಸ್ಸು ಮಾಡಿದರೂ ನೀವು ಕರೆಯುವಾಗಲೇ ಕರೆಯುವುದು, ಸೇರುವಾಗಲೇ ಸೇರುವುದು.

ಆದರೂ ಬೇಗ ಸೇರುವುದಕ್ಕೆ ಅವಕಾಶ ಇದೆ. ವಿಷಯ ಸಮಿತಿಗಳನ್ನು ಮಾಡಿ ವರದಿ ಕೊಡಬೇಕು ಎಂದು ಇರುವುದರಿಂದ ಸ್ವಲ್ಪ ಬೇಗ ಸೇರಬಹುದೆಂದು ನನಗೆ ಒಂದು ಧೈರ್ಯ. ಅದು ಬಿಟ್ಟರೆ ಶಾಸನ ಸಭೆಗೆ ನೀವು ಅಷ್ಟು ಬೆಲೆ ಕೊಟ್ಟಿದ್ದೀರಿ ಎಂದು ನಾನು ಅಂದುಕೊಳ್ಳುವುದಿಲ್ಲ. ನೀವು ನಿಮಗೆ ಇಷ್ಟ ಬಂದಾಗ ಕರೆಯುತ್ತೀರಿ ಅದು ನಿಮಗೆ ಸೇರಿದ್ದುದು ಯಾವಾಗ ಬೇಕಾದರೂ ಮುಂದುವರಿಸತಕ್ಕದ್ದು ನಿಮಗೆ ಸೇರಿರತಕ್ಕದ್ದು. ಆದರೆ ಅಧ್ಯಕ್ಷರು ಚುರುಕಾಗಿದ್ದಾರೆ. ನಿಮ್ಮ ದಾರಿ ತಪ್ಪುವುದನ್ನು ಎಚ್ಚರಿಕೆಯಿಂದ ಗಮನಿಸುತ್ತಿದ್ದಾರೆ. ಅವರ ಗಮನಕ್ಕೆ ನೀವು ಸ್ವಲ್ಪ ಸ್ಪಂದಿಸಬಹುದೇನೋ ಎನ್ನುವ ನಂಬಿಕೆ ಮತ್ತು ಅಪನಂಬಿಕೆ ಎರಡೂ ಇದೆ. ಆದ್ದರಿಂದ ಅದನ್ನು ನೋಡಿಕೊಳ್ಳೋಣ. ನಾವು ಇಲ್ಲಿ ಶಾಸಕರ ಬಗ್ಗೆ ಸಮಗ್ರವಾಗಿ ಚರ್ಚೆ ಮಾಡಿದೆವು. 18 ಅಥವಾ 20ನೇ ತಾರೀಖು ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ಅಧ್ಯಕ್ಷರ ನೇಮಕ ಆಗಬಹುದು. ಬಹುಶಃ ಈ ತಿಂಗಳ 15 ಅಥವಾ 20ರ ಒಳಗೆ ತೀರ್ಮಾನ ಮಾಡುತ್ತೀರೆಂದು ಕಾಣುತ್ತದೆ. ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ನೇಮಕವಾದ ನಂತರ ಶಾಸಕರುಗಳಿಗೆ ಆಯಾ ಕ್ಷೇತ್ರದಲ್ಲಿ ಒಂದು ಲೋಟ ಕುಡಿಯುವ ನೀರನ್ನೂ ಬೇರೆಯವರಿಗೆ ಕೊಡುವ ಅಧಿಕಾರ ಇಲ್ಲ. ಒಂದು ಲೋಟ ಕುಡಿಯುವ ನೀರನ್ನೂ ನಾನು ಶಾಸಕನಾಗಿ ಕೊಡುತ್ತೇನೆ ಎಂಬ ಅಧಿಕಾರ ಇಲ್ಲ ಇದು ಸ್ಪಷ್ಟ. ಆಗ ನೀವು ಯಾವ ಕೇಂದ್ರಕ್ಕೆ ಹೋಗುತ್ತೀರಿ ನೋಡಿಕೊಳ್ಳೋಣ. ಕೇಂದ್ರೀಕರಣ, ವಿಕೇಂದ್ರೀಕರಣ ಈ ಕರಣಗಳನ್ನು ನೀವು ಮಾಡಿಕೊಳ್ಳಿ. ಒಂದು ತಿಂಗಳ ಕಾಲದಲ್ಲಿ ನಿಮ್ಮ ಕೇಂದ್ರೀಕರಣ ಗೊತ್ತಾಗುತ್ತದೆ. ನಿಮ್ಮ ಹಣೆಬರಹ ಏನಾಗುತ್ತದೆ ಎಂದು ಗೊತ್ತಾಗುತ್ತದೆ. ನಿಮ್ಮ ಮಂತ್ರಿಗಳು ಓಡಬೇಕಾಗುತ್ತದೆ.

ಪಿ. ಸಿ. ಸಿದ್ಧನಗೌಡರ್ : ಒಂದು ತಿಂಗಳು ಅಲ್ಲ, 5 ವರ್ಷ ಯಾರೂ ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನಿಮ್ಮ ಸರ್ಕಾರ ಹೋಗುತ್ತದೆ ಎಂದು ನಾನು ಹೇಳಲಿಲ್ಲ. ನೀವು ಇರಿ, 25 ವರ್ಷ ಇರಿ, 100 ವರ್ಷ ಇರಿ. ನನ್ನ ಅಭ್ಯಂತರವೇನಿಲ್ಲ. ನನ್ನದು ಏನು ತಕರಾರಿಲ್ಲ.

ಅಧ್ಯಕ್ಷರು : ಹೌದೌದು, ಅವರು ನೀವು ಒಪ್ಪಂದಕ್ಕೆ ಬಂದು ಅಷ್ಟು ವರ್ಷ ಇದ್ದರೆ ಇವರೆಲ್ಲಾ ಸುಮ್ಮನಿರುತ್ತಾರೆಯೇ?

ಶ್ರೀ ವಾಟಾಳ್ ನಾಗರಾಜ್ : ಲಕ್ಷ್ಮಯ್ಯನವರೇ ಸ್ವಲ್ಪ ಕೇಳಿ. ಇಷ್ಟೊಂದು ಆತುರ ಆದರೆ ಹೇಗೆ ನಾನು ಏನು ಹೇಳುತ್ತಿದ್ದೇನೆಂದರೆ ಈಗ ಏಪ್ರಿಲ್ ಅಥವಾ ಮೇ ಮಧ್ಯಭಾಗದಲ್ಲಿ ವರ್ಗಾವರ್ಗಿ ಶುರುವಾಗುತ್ತದೆ. ನಾವು ಈಗ ವಸ್ತು ಸ್ಥಿತಿ ಮಾತನಾಡೋಣ. ಈಗ ನಾವು ನೇರವಾಗಿ ಆರೋಗ್ಯ ಸಚಿವರನ್ನು ಕುರಿತು ಮಾತನಾಡೋಣ. ಒಬ್ಬರು ಶಾಸಕರು ಒಬ್ಬ ಡಾಕ್ಟರನ್ನು ಬದಲಾವಣೆ ಮಾಡಿ ಎಂದು ಹೇಳುವುದಕ್ಕೆ ಬರುತ್ತಾರೆ. ಇವರು ಆಗುವುದಿಲ್ಲ ಎನ್ನುತ್ತಾರೆ. ಇವರ ಮೇಲೆ ಶುರುವಾಯಿತು ಸ್ವಾಮಿ. ಇದು ವಸ್ತು ಸ್ಥಿತಿ. ನಾವು ಸುಮ್ಮನೆ ನಾಟಕೀಯವಾಗಿ ಮಾತನಾಡುವುದು ಬೇಡ. ನಾವು ಯಾರನ್ನೂ ವರ್ಗ ಮಾಡಿ ಎಂದು ಹೇಳುವುದಿಲ್ಲ, ನಾವೆಲ್ಲಾ ಪರಮ ಪವಿತ್ರರು, ಸತ್ಯ ಹರಿಶ್ಚಂದ್ರರು ಎಂಬುದನ್ನು ಬಿಡಿ. ಆದ್ದರಿಂದ

ಇಡೀ ಶಾಸಕ ಸಮುದಾಯವೇ ಸರ್ಕಾರದ ವಿರುದ್ಧ ಆ ಪಕ್ಷ ಈ ಪಕ್ಷ ಎಂಬುದು ಇಲ್ಲ. ಎಲ್ಲಾ ಪಕ್ಷದವರೂ ನಿಮ್ಮ ಮೇಲೆ ಧಾಳಿ ಮಾಡುತ್ತಾರೆ. ಎರಡನೆಯದಾಗಿ, ಶಾಸಕರುಗಳಿಗೆ ಇದೇ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು, 20 ಅಂಶಗಳ ಕಾರ್ಯಕ್ರಮ, ಅದರಲ್ಲಿ ಎಲ್ಲಾ ಅಧಿಕಾರಿಗಳೂ ಬರತಕ್ಕಂಥಾದ್ದು, ತಿಂಗಳಿಗೆ ಒಂದು ಸಭೆ...

ಶ್ರೀ. ಎಸ್.ಎಸ್. ಪಾಟೀಲ್ : ಶಾಸಕರೆಲ್ಲಾ ನಮ್ಮ ಮೇಲೆ ಧಾಳಿ ಮಾಡುತ್ತಾರೆ ಎಂದು ಹೇಳುತ್ತಿದ್ದಾರೆ. ಆ ರೀತಿ ಮಾತನಾಡುತ್ತೀದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ತಾಲ್ಲೂಕು ತಹಶೀಲ್ದಾರ್ ಕಾರ್ಯಾಲಯದಲ್ಲಿ ಶಾಸಕರಿಗೆ ಒಂದು ಕಾರ್ಯಾಲಯ ಕೊಡುತ್ತೇವೆ ಎಂದು ಈ ಸದನದ ನಾಯಕರಾದ ಶ್ರೀಮಾನ್ ದೇವೇಗೌಡರು ಹೇಳಿದ್ದಾರೆ. ಹೌದು ಸ್ವಾಮಿ, ಸಂಸದೀಯ ಸಚಿವರೇ, ನಾನು ಸುಳ್ಳು ಹೇಳುವುದಕ್ಕೆ ಹೋಗುವುದಿಲ್ಲ, ಅವರು ಈ ರೀತಿ ಹೇಳಿದ್ದಾರೆ.

ಶ್ರೀ ಎಂ.ಸಿ. ನಾಣಯ್ಯ ; ಈ ವಿಷಯ ಚರ್ಚೆಗೆ ಬಂದಂಥ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದ್ದಾರೆ ಎಂದರೆ ಹ್ಯಾಂಡ್ ಬುಕ್ ಫಾರ್ ದಿ ಲೆಜಿಸ್‌ಲೆಟರ್ಸ್ ಎಂಬ ಪುಸ್ತಕ ಇದೆ ಇದಕ್ಕೆ ಸಂಬಂಧಪಟ್ಟ ಹಾಗೆ ಯಾವ ಯಾವ ಅಧಿಕಾರ ಕೊಡಬೇಕು ಮತ್ತು ಅದರ ಜೊತೆಯಲ್ಲಿ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ವ್ಯವಸ್ಥೆ ಅಸ್ತಿತ್ವಕ್ಕೆ ಬರವುದರಿಂದ ಆ ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿಗಳಲ್ಲಿ ಯಾರ್‍ಯಾರಿಗೆ ಯಾವ ಯಾವ ಅಧಿಕಾರವನ್ನು ಕೊಡಬೇಕು ಎಂದು ತೀರ್ಮಾನ ಮಾಡಿ ಆದ ಮೇಲೆ ಅದಕ್ಕೆ ಒಳಪಟ್ಟು ಏನು ಅಧಿಕಾರ ಕೊಡಬೇಕೊ ಅದನ್ನು ಕೊಡಬೇಕು ಎಂದು ಹೇಳಿದ್ದಾರೆ. ಆದರೆ ಶಾಸಕರೆಲ್ಲರಿಗೂ ತಹಶೀಲ್ದಾರುಗಳ ಕಛೇರಿಯಲ್ಲಿ ಒಂದೊಂದು ಕಾರ್ಯಾಲಯ ಕೊಡುತ್ತೇವೆಂದು ಹೇಳಿದ್ದಾರೆ ಎಂದು ಹೇಳತಕ್ಕ ವಾದ ಸರಿಯಲ್ಲ. ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿಗಳು ಅಸ್ತಿತ್ವಕ್ಕೆ ಬಂದಮೇಲೆ ಯಾರು ಯಾರಿಗೆ ಯಾವ ಯಾವ ಅಧಿಕಾರ ಕೊಡಬೇಕು ಎನ್ನುವುದನ್ನು ನಾವು ನಿರ್ಣಯಿಸುತ್ತೇವೆ ಎಂದು ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಮುಖ್ಯಮಂತ್ರಿಗಳು ಹೇಳಿರತಕ್ಕಂಥ ಪದ ಕಡತದಲ್ಲಿ ಇದೆಯೇ ಇಲ್ಲವೇ ಎಂಬುದನ್ನು ತಾವು ತರಿಸಿ ನೋಡಿ. ಅವರು ಆ ಮಾತನ್ನು ಹೇಳಲಿಲ್ಲ ಎಂದು ಹೇಳಿದ್ದಾರೆ ನಾನು ನೇರವಾಗಿ ನನ್ನ ಸದಸ್ಯತ್ವಕ್ಕೆ ರಾಜೀನಾಮೆ ಕೊಡುತ್ತೇನೆ.

ಅಧ್ಯಕ್ಷರು : ಮುಖ್ಯಮಂತ್ರಿಗಳು ಕಛೇರಿಯಲ್ಲಿ ಮಾತನಾಡಿದಾಗಲೂ ನಾನು ಇದ್ದೆ. ನನ್ನ ಸಮ್ಮುಖದಲ್ಲೇ ಆ ಮಾತುಕತೆ ನಡೆದಿದ್ದು. ಮುಖ್ಯಮಂತ್ರಿಗಳು ಈ ಸದನದಲ್ಲಿ ಮಾತನಾಡುವ ಸಂದರ್ಭದಲ್ಲಿ ಕೂಡ ನಾನು ಇದ್ದೆ. ಆದ್ದರಿಂದ ಈ ವಿಚಾರ ಇಲ್ಲಿ ಪ್ರಸ್ತಾಪ ಮಾಡುವಾಗ ಸ್ಪಷ್ಟೀಕರಣ ನೀಡದಿದ್ದರೆ ಸರಿ ಹೋಗುವುದಿಲ್ಲ. ಮೊದಲು ಏನು ಒಂದು ಕಛೇರಿ ಇತ್ತು, ಅದನ್ನು ಮುಂದುವರಿಸಬೇಕು ಎನ್ನತಕ್ಕ ಮಾತು ಹೇಳಿದಾಗ ಶಾಸಕರಿಗೆ ಒಂದು ಕಛೇರಿ ಮಾಡೋಣ ಎಂದು ಹೇಳಿದ್ದಾರೆ. ಇಲ್ಲವೆಂದು ನಾನು ಹೇಳುತ್ತಿಲ್ಲ ಆದರೆ ಮೊದಲಿದ್ದ ಕಛೇರಿ ತಾಲ್ಲೂಕು ಪಂಚಾಯತಿ

ಅಧ್ಯಕ್ಷರ ಕಛೇರಿ ಪಕ್ಕದಲ್ಲೇ ಇತ್ತು. ಶಾಸಕರಾಗಿದ್ದಂಥವರು ಬಿ.ಡಿ.ಓ. ಕಛೇರಿಯ ಆವರಣದಲ್ಲಿ ಒಂದು ಕಛೇರಿಯನ್ನು ಹೊಂದಿದ್ದರು. ಈಗ ತಾಲ್ಲೂಕು ಪಂಚಾಯತಿ ಸಮಿತಿಗೆ ಚುನಾವಣೆ ಮೂಲಕ ಒಬ್ಬ ಅಧ್ಯಕ್ಷರು ಆಯ್ಕೆಯಾಗಿ ಬರುತ್ತಾರೆ. ಆಗ ಅವರಿಗೆ ಸ್ಥಾನಪಲ್ಲಟವಾಗುತ್ತದೆ. ಮುಖ್ಯಮಂತ್ರಿಗಳ ಜೊತೆ ಮತ್ತೆ ನಾನು ಚರ್ಚೆ ಮಾಡಿದ್ದೇನೆ. ಬಿ.ಡಿ.ಓ. ಕಛೇರಿಯ ಆವರಣದಲ್ಲಿ ಒಂದು ಕೊಠಡಿ ಕಟ್ಟುವುದಾದರೂ ಚಿಂತೆ ಇಲ್ಲ. ಶಾಸಕರಿಗೆ ಒಂದು ಕಛೇರಿ ಮಾಡಿಕೊಡುವುದಕ್ಕೆ ತತ್ವಶಃ ಅವರು ಒಪ್ಪಿಗೆ ಕೊಟ್ಟಿದ್ದಾರೆ. ತಹಶೀಲ್ದಾರ್ ಆಫೀಸಿನಲ್ಲಿಯೇ ಆಗಬೇಕೆಂದು ತಾವೇನೂ ಹಠ ಹಿಡಿದಿಲ್ಲ. ಶಾಸಕರಿಗೆ ಒಂದು ಕಾರ್ಯಾಲಯ ಇರಬೇಕೆಂಬುದು ಅವರ ಉದ್ದೇಶ. ಅವರು ಏನು ಹೇಳಿದ್ದಾರೆ ಅದಕ್ಕೆ ಅವರು ಒಪ್ಪಿಕೊಂಡಿದ್ದಾರೆ. ಬಿ.ಡಿ.ಓ. ಕಛೇರಿ ಆವರಣದಲ್ಲಿ ತಾಲ್ಲೂಕು ಪಂಚಾಯಿತಿ ಅಧ್ಯಕ್ಷರ ಕಛೇರಿ ಒಂದು ಕಡೆ ಇರುತ್ತದೆ. ಮತ್ತೊಂದು ಕಡೆ ಶಾಸಕರ ಕಾರ್ಯಾಲಯ ಏರ್ಪಾಟು ಮಾಡುವುದಕ್ಕೆ ಒಪ್ಪಿದ್ದಾರೆ. ಆದ್ದರಿಂದ ಅದರ ಬಗ್ಗೆ ಹೆಚ್ಚು ಚರ್ಚೆಗೆ ಹೋಗುವುದು ಅನಗತ್ಯ.

ಒಬ್ಬ ಮಾನ್ಯ ಸದಸ್ಯರು: ಇದು ಬಿ.ಡಿ.ಓ. ಕಛೇರಿ ಪಕ್ಕದಲ್ಲಿ ಮಾಡಿದರೆ ಅಡ್ಡಿಯಿಲ್ಲ. ಅದು ಬಿಟ್ಟು ಬೇರೆ ಎಲ್ಲಿಯಾದರೂ ಮಾಡಿದರೆ ಪ್ರಯೋಜನ ವಾಗುವುದಿಲ್ಲ.

ಅಧ್ಯಕ್ಷರು : ನಾನು ಕನ್ನಡದಲ್ಲೇ ಹೇಳಿದ್ದೇನೆ. ಗುಲ್ಬರ್ಗಾದವರಿಗೆ, ಕಾರವಾರದವರಿಗೆ ಇಬ್ಬರಿಗೂ ಅರ್ಥವಾಗುವ ಕನ್ನಡದಲ್ಲೇ ಹೇಳಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ನಾನು ಯಾರೋ ಒಬ್ಬರಿಗೋಸ್ಕರ ಎಂದಲ್ಲ. ನಾನು ಇಡೀ ಶಾಸಕರ ಬಗ್ಗೆ ಮಾತನಾಡುತ್ತಿದ್ದೇನೆ. ಅಲ್ಲಿ ಏನು ಪಿತೂರಿ ನಡೆಯಿತು ಎಂದರೆ ತಾಲ್ಲೂಕು ಕಛೇರಿಯಲ್ಲಿ ಶಾಸಕರಿಗೆ ಕಛೇರಿ ಕೊಟ್ಟರೆ ಪ್ರತಿದಿನ ಬೆಳಗ್ಗೆ ಬಂದು ಕುಳಿತುಕೊಂಡು ತಹಶೀಲ್ದಾರರನ್ನು, ರೆವೆನ್ಯೂ ಇನ್ಸ್‌ಪೆಕ್ಟರ್‌ನ್ನು ಕರೆದು ಮಾತನಾಡುತ್ತಿರುತ್ತಾರೆ ಎಂಬುದು ಅವರ ಭಾವನೆ. ಆದ್ದರಿಂದ .ಅವರಿಗೆ ಏಕೆ ಕೊಡಬೇಕು? ಮಾನ್ಯ ಅಧ್ಯಕ್ಷರೇ, ತಮಗೆ ನನ್ನ ಮನವಿಯನ್ನು ಸಲ್ಲಿಸುತ್ತಿದ್ದೇನೆ. ಈಗ ಜಿಲ್ಲಾಧಿಕಾರಿಗಳ ಕಾರ್ಯಾಲಯದಲ್ಲಿ ಲೋಕಸಭಾ ಸದಸ್ಯರಿಗೆ ಒಂದು ಕಾರ್ಯಾಲಯ ಕೊಟ್ಟಿದ್ದಾರೆ. ಮತ್ತು ಅವರು ಇಡೀ ಜಿಲ್ಲೆಯಲ್ಲಿ, ಅವರ ಕ್ಷೇತ್ರದಲ್ಲಿ ಓಡಾಡುವುದಕ್ಕೆ ಒಂದು ಕಾರು ಕೊಟ್ಟಿದ್ದಾರೆ. ಮತ್ತು ಒಂದು ಕೋಟಿ ರೂಪಾಯಿಗಳಲ್ಲಿ ಅವರು ಯಾವ ಕೆಲಸ ಬೇಕಾದರೂ ಮಾಡತಕ್ಕ ವ್ಯವಸ್ಥೆ ಇದೆ. ಅವರು ಪರಮ ಪವಿತ್ರರು, ಶಾಸಕರು ಪಾಪಿಗಳು ಎನ್ನುವ ಭಾವನೆಯೇ? ನಮಗೆ ತಾಲ್ಲೂಕು ಆಫೀಸಿನಲ್ಲಿ ಕಛೇರಿ ಬೇಡ, ಎಲ್ಲಿಯದರೂ ಕೊಡಿ ಅದರ ಬಗ್ಗೆ ನನ್ನ ಅಭ್ಯಂತರವಿಲ್ಲ. ನಾನು ತಲೆ ಕೆಡಿಸಿಕೊಳ್ಳುವುದಿಲ್ಲ. ನಾನು ಅದರ ಬಗ್ಗೆ ವಾದ ಮಾಡುತ್ತಿಲ್ಲ. ಈ ಭಾವನೆ ಸರ್ಕಾರದಲ್ಲಿ ಇದೆಯಲ್ಲ. ಆ ಭಾವನೆ ಇದು ಸರಿಯಲ್ಲ.

ಅಧ್ಯಕ್ಷರು : ತಾಲ್ಲೂಕು ಕಛೇರಿಗಳು ನಮ್ಮ ವ್ಯವಸ್ಥೆಯಲ್ಲಿ ಏನಿವೆ ಅವು ದಿನನಿತ್ಯ ಆಡಳಿತವನ್ನು ನಡೆಸಿಕೊಂಡು ಹೋಗತಕ್ಕಂಥ ಜವಾಬ್ದಾರಿಯನ್ನು ಹೊಂದಿರ ತಕ್ಕಂಥ ಒಂದು ಸಂಸ್ಥೆ. ಅದು ಜಮೀನಿಗೆ, ಖಾತೆಗೆ ಇನ್ನೊಂದಕ್ಕೆ, ಮತ್ತೊಂದಕ್ಕೆ ಸಂಬಂಧಿಸಿದೆ. ಒಂದು ತಾಲ್ಲೂಕಿನ ಅಥವಾ ಒಂದು ಕ್ಷೇತ್ರದ ಮಟ್ಟಕ್ಕೆ ನಡೆಯತಕ್ಕಂಥ ಎಲ್ಲಾ ಅಭಿವೃದ್ಧಿ ಕಾರ್ಯಗಳ ಕೇಂದ್ರ ಈ ಬಿ.ಡಿ.ಓ. ಯವರ ಕಾರ್ಯಾಲಯ.

10.20 ಎ.ಎಂ.

ಒಬ್ಬ ಶಾಸಕರಿಗೆ ಅಲ್ಲಿಯ ಅಭಿವೃದ್ಧಿ ಕಾರ್ಯಗಳಲ್ಲಿ ಪಾಲ್ಗೊಳ್ಳುವಿಕೆಗೆ ಅವಕಾಶ ಮಾಡಿಕೊಡುವುದಕ್ಕೆ ಈ ವ್ಯವಸ್ಥೆ ಮಾಡುತ್ತಿದ್ದಾರೆ. ದಿನನಿತ್ಯದ ಆಡಳಿತದಲ್ಲಿ ನಾವು ಹಸ್ತಕ್ಷೇಪ ಮಾಡಬೇಕಾದ ಅಗತ್ಯವೂ ನಮಗಿಲ್ಲ, ಅದರ ಅಪೇಕ್ಷೆಯೂ ನಮಗಿಲ್ಲ. ತಾವು ಕೂಡ ಅದನ್ನು ಸ್ಪಷ್ಟ ಮಾಡಿದ್ದೀರಿ. ಆದ್ದರಿಂದ ಶಾಸಕರಿಗೆ ಕಛೇರಿ ತಹಶೀಲ್ದಾರರ ಆಫೀಸಿನಲ್ಲಿದ್ದರೇನು, ಬಿ.ಡಿ.ಓ. ಆಫೀಸಿನಲ್ಲಿದ್ದರೇನು? ಬಿಡಿ.ಓ. ಆಫೀಸಿನಲ್ಲಿ ವ್ಯವಸ್ಥೆ ಮಾಡುವುದಕ್ಕೆ ಅವರು ಒಪ್ಪಿಕೊಂಡಿದ್ದಾರೆ, ಮಾಡಲಿ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ : ಮಾನ್ಯ ಸಭಾಧ್ಯಕ್ಷರೇ, ಮಿನಿ ವಿಧಾನಸೌಧ ಆದ ಮೇಲೆ, ಈಗ ಎಲ್ಲಾ ಕಡೆ ಮಿನಿ ವಿಧಾನಸೌಧ ಮಾಡುವುದರಿಂದ ಪೂರ್ಣ ಎಲ್ಲಾ ಕಛೇರಿಗಳು ಒಂದೇ ಕಡೆ ಆಗುತ್ತದೆ. ಅದಕ್ಕೆ ಒಂದು ಕಾರ್ಯಾಲಯವನ್ನು ಶಾಸಕರಿಗೆ ಕಟ್ಟಿಸತಕ್ಕ ವ್ಯವಸ್ಥೆ ಮಾಡಿದರೆ ಸುಲಭವಾಗುತ್ತದೆ ಕೆಲಸ.

ಅಧ್ಯಕ್ಷರು : ಹೊಸದಾಗಿ ಮಿನಿ ವಿಧಾನಸೌಧಗಳು ಬರುವ ಕಡೆಗೆ ವಿನ್ಯಾಸ ಮಾಡುವಾಗ ಇದನ್ನೂ ಒಳಪಟ್ಟು ಮಾಡಬೇಕೆಂದು ಹೇಳಿ ಸೂಚನೆ ಕೊಡೋಣ. ಈಗ ಅದರ ವ್ಯವಸ್ಥೆ ಇಲ್ಲದೇ ಇರುವ ಕಡೆಗೆ ಬಿ.ಡಿ.ಓ. ಆಫೀಸಿನಲ್ಲಿ ಇನ್ನೊಂದು ರೂಮ್ ಹೊಸದಾಗಿ ಕಟ್ಟಾದರೂ ಸರಿಯೇ, ಮಾಡಿಕೊಡಬೇಕು ಎಂದು ಮಾಡೋಣ. ಶಾಸಕರಿಗೆ ಕಾರ್ಯಾಲಯ ಇರಬೇಕು. ಅದು ಬಿ.ಡಿ.ಓ. ಆಫೀಸ್ ಆವರಣದಲ್ಲೇ ಇರುತ್ತದೆ. ಊರ ಹೊರಗೆ ಎಲ್ಲೋ ಇರುವುದಿಲ್ಲ. ತತ್ವಶಃ ಇಷ್ಟಕ್ಕೆ ನಾನು ತಮ್ಮೆಲ್ಲರಿಗೂ ಕೂಡ ವಚನ ಕೊಡುತ್ತಿದ್ದೇನೆ. ಮುಖ್ಯ ಮಂತ್ರಿಗಳನ್ನು ಒಲಿಸಿ ಮಾಡಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಈಗ ಎಲ್ಲಿ ಆಫೀಸ್ ಇರಬೇಕು ಎಂಬ ವಾದಕ್ಕಿಂತ ಹೆಚ್ಚಾಗಿ ತಮ್ಮನ್ನು ಒಂದು ಪ್ರಶ್ನೆ ಕೇಳುತ್ತೇನೆ.

ಶ್ರೀ ಶಂಕರಲಿಂಗೇಗೌಡ : ನಗರದ ಎಂ.ಎಲ್.ಎ.ಗಳು ಎಲ್ಲಿಗೆ ಹೋಗಬೇಕು, ಯಾವ ಕಾರ್ಯಾಲಯಕ್ಕೆ ಹೋಗಬೇಕು ಎಂದು ಕೇಳುತ್ತಿದ್ದೇನೆ.

ಒಬ್ಬ ಸದಸ್ಯರು : ಮುನಿಸಿಪಾಲಿಟಿ ಇದೆಯಲ್ಲ.

ಶ್ರೀ ಶಂಕರಲಿಂಗೇಗೌಡ : ಅದೇ ಸಭಾಧ್ಯಕ್ಷರ ವತಿಯಿಂದ ಬರಲಿ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಮೀಟಿಂಗ್‌ಗಳೇ ನಡೆಯುತ್ತಿಲ್ಲ. ಇನ್ನೆಲ್ಲಿ ನಮಗೆ ಸ್ಥಳ ಇದೆ?

ಅಧ್ಯಕ್ಷರು : ಶಂಕರಲಿಂಗೇಗೌಡರೆ, ಸ್ಥಳ ಇಲ್ಲದೇ ಹೇಗಿದ್ದೀರಿ ನೀವು, ಇನ್ನು ಸ್ಥಳ ಬೇರೆ ಮಾಡಿದರೆ ಏನಾಗಬಹುದು ನಗರಗಳು?

ಒಬ್ಬ ಮಾನ್ಯ ಸದಸ್ಯರು: ಮಾನ್ಯ ಸಭಾಧ್ಯಕ್ಷರು .ನಗರಪಾಲಿಕೆಯಲ್ಲಿ ರೂಮ್‌ಗಳನ್ನು ಮೂರು ಜನ ಶಾಸಕರುಗಳಿಗೆ ನಗರ ಪ್ರದೇಶದಲ್ಲೂ ಅವಕಾಶ ಮಾಡಿಕೊಡಬೇಕಾಗಿ ವಿನಂತಿ.

ಅಧ್ಯಕ್ಷರು : ಆಲೋಚನೆ ಮಾಡೋಣ.

ಶ್ರೀ ವಾಟಾಳ್ ನಾಗರಾಜ್ : ನಮಗೇನೂ ಕೆಲಸ ಇಲ್ಲ. ಅದು ಸ್ಪಷ್ಟ. ಇಲ್ಲ ಅಂದರೆ ತಮ್ಮನ್ನು ನಾನು ನೇರವಾಗಿ ಏನು ಕೇಳುತ್ತೇನೆ ಅಂದರೆ ಕನಿಷ್ಠ

ನೂರೈವತ್ತು ದಿನವಾದರೂ ಶಾಸನಸಭೆ ನಡೆಸಿದರೆ ತಮಗೆ ಇದಾದರೂ ಒಂದು ಕೆಲಸ ಇರುತ್ತದೆ. ಒಂದು ಸಾರ್ವಜನಿಕವಾಗಿ ಜನಗಳ ಸಮಸ್ಯೆಯನ್ನಾದರೂ ಚರ್ಚೆ ಮಾಡತಕ್ಕ ಅವಕಾಶ ಇರುತ್ತದೆ. ನೀವು ಈ ಕಡೆ ಶಾಸನಸಭೆಯನ್ನೂ ಕರೆಯುವುದಿಲ್ಲ. ಆ ಕಡೆ ಶಾಸಕರುಗಳಿಗೆ ಕೆಲಸವನ್ನೂ ಕೊಟ್ಟಿಲ್ಲ. ಎಲ್ಲಿಗೆ ಹೋಗಬೇಕು? ಒಳ್ಳೆ ತ್ರಿಶಂಕು ಪರಿಸ್ಥಿತಿಯಲ್ಲಿಟ್ಟಿದ್ದೀರಲ್ಲ. ಏನು ಪರಿಸ್ಥಿತಿ ನಿಮ್ಮ ಸರ್ಕಾರ ಏನಾಗಬೇಕು? ನಾವು ಪ್ರಾಮಾಣಿಕವಾಗಿ ಚಿಂತನೆ ಮಾಡೋಣ.

ಶ್ರೀ. ಎಂ.ಸಿ. ನಾಣಯ್ಯ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್ ಅವರ ಚಿಂತನೆ ನನಗಿನ್ನೂ ಅರ್ಥವಾಗಿಲ್ಲ. ಶಾಸಕರಾಗಿರುವವರು ತಮ್ಮ ಅಧಿಕಾರವನ್ನು ಸಂಪೂರ್ಣವಾಗಿ ಕಳೆದುಕೊಂಡುಬಿಡುತ್ತಾರೆ ಕಾರಣ ವಿಕೇಂದ್ರೀಕರಣ ವ್ಯವಸ್ಥೆ ಜಾರಿಗೆ ಬಂದಿದ್ದರಿಂದ ಎಂದು ಹೇಳುತ್ತಿದ್ದಾರೆ. ದಯವಿಟ್ಟು ನಾವು ಒಂದನ್ನು ನೇರವಾಗಿ ಈ ಸಂದರ್ಭದಲ್ಲಿ ಒಪ್ಪಬೇಕಾಗುತ್ತದೆ. ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಆ ಜನತೆ ಯಾರನ್ನು ಆರಿಸಿ ಕಳುಹಿಸುತ್ತಾರೆ ಅವರಿಗೆ ನಾವು ಅಧಿಕಾರವನ್ನು ಕೊಡಬೇಕು ಎನ್ನತಕ್ಕ ಚಿಂತನೆಯಿಂದಲೇ ಹಲವಾರು ವರ್ಷಗಳು ನಡೆದು ಹೋಗಿವೆ. ಆದಾದಮೇಲೆ ಇವತ್ತು ನಾವು ಶಾಸಕರಾಗಿರುವವರು ಮಾನ್ಯ ನಾಗರಾಜ್ ಅವರೇ ನಾನು ಹೇಳುತ್ತೇನೆ ಆ ಸಂಸ್ಥೆಗಳು ಯಾವ ಕೆಲಸವನ್ನು ಮಾಡಬೇಕಾಗುತ್ತದೆ ಅದಕ್ಕೆ ನೀತಿಯನ್ನು ರೂಪಿಸಬೇಕಾದ ಜವಾಬ್ದಾರಿ ನಮ್ಮ ಮೇಲಿದೆ. ನಾವು ಇದಕ್ಕೆ ವಿಧೇಯಕಗಳನ್ನು ಮಾಡಬೇಕಾಗುತ್ತದೆ. ಆ ವಿಧೇಯಕಗಳಿಗೆ ಅನುಗುಣವಾಗಿ ಅವರು ಕೆಲಸವನ್ನು ಮಾಡಬೇಕಾಗುತ್ತದೆ. ಇವತ್ತು ಏನಾಗಿದೆ ಮಾನ್ಯ ಸಭಾಧ್ಯಕ್ಷರೇ, ಇವತ್ತು ಶಾಸನಸಭೆಗಳಲ್ಲಿ ವಿಧೇಯಕಗಳ ಮೇಲೆ ಚರ್ಚೆಯನ್ನೇ ಮಾಡುತ್ತಿಲ್ಲ. ಯಾವ ವಿದೇಯಕಕ್ಕೆ ನಾವು ಹೆಚ್ಚು ಮಹತ್ವವನ್ನು ಕೊಟ್ಟು ಅದರ ಬಗ್ಗೆ ಚರ್ಚೆ ಮಾಡಿ ಯಾವ ವಿದೇಯಕ ನಮಗೆ ಬೇಕು ಎಂಬ ಬಗ್ಗೆ ಚರ್ಚೆ ಮಾಡುತ್ತಿಲ್ಲ the Legislative body will hardly discussed legislations, We discuss all other things other than Legisalastion. ಆದರೆ ನಾನು ಒಂದು ಹೇಳುತ್ತಿದ್ದೇನೆ ರಾಜ್ಯವನ್ನು ನಡೆಸಲಿಕ್ಕೆ ನಮಗಿರತಕ್ಕ ಪರಮಾಧಿಕಾರ ಮತ್ತೆ ಕಾರ್ಯಾಂಗಕ್ಕೆ ಯಾವ ಕೆಲಸವನ್ನು ಮಾಡಬೇಕು ಎಂದು ಹೇಳತಕ್ಕ ಕಾನೂನನ್ನು ರೂಪಿಸಬೇಕಾದುದು ನಮ್ಮ ಮಹತ್ತರವಾದ ಜವಾಬ್ದಾರಿ ಈ ಜವಾಬ್ದಾರಿ ಕಡೆ ನಾವು ಹೆಚ್ಚು ಗಮನವನ್ನು ಹರಿಸಬೇಕೇ ವಿನಹ ಆಡಳಿತ ಯಂತ್ರವನ್ನು ನಾವು ನಮ್ಮ ಸುಪರ್ದಿನಲ್ಲಿ ತರಬೇಕು ಎನ್ನತಕ್ಕ ಚಿಂತನೆಯಲ್ಲಿ ಅಲ್ಲ.

ಶ್ರೀ .ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ನಮ್ಮ ನಾಣಯ್ಯನವರು ವಿಚಾರವನ್ನು ಬಹಳ ನಾಜೂಕಾಗಿ ತಿರುಚಿ ಯಾರ ಮೇಲಾದರೂ ಕೆಸರು ಎರಚುವಂಥದ್ದು ಅವರ ಸ್ವಭಾವ ವಿಕೇಂದ್ರೀಕರಣಕ್ಕೆ ನಾನು ಯಾವತ್ತೂ ವಿರೋಧ ಮಾಡಿಲ್ಲ. ನಾನು ಯಾವತ್ತು ವಿರೋಧ ಮಾಡಿದ್ದೇನೆ? ಇಲ್ಲವೇ ಇಲ್ಲ, ಅದರ ಬಗ್ಗೆ ಅಲ್ಲಿ ಪ್ರಶ್ನೆಯೇ ಬರುವುದಿಲ್ಲ ವಿಕೇಂದ್ರೀಕರಣದ ಬಗ್ಗೆ ನಾನು ಮಾತನಾಡುವುದಿಲ್ಲ ತಮಗೆ ನಾನು ಹೇಳುತ್ತೇನೆ, ಈ ಸಭೆ ನಿನ್ನೆ ಸ್ವಲ್ಪ ಹೆಚ್ಚು ಕಡಿಮೆ ಎಷ್ಟು ಸ್ವಾಮಿ

ಮಸೂದೆಗಳಾದವು? ಸ್ವಲ್ಪ ಹೆಚ್ಚು ಕಡಿಮೆ ಹತ್ತು ಆಗಿರಬೇಕು ಎಂದು ಕಾಣುತ್ತದೆ. ಈ ಮಸೂದೆಗಳು ಎಷ್ಟು ಪರಮ ಪವಿತ್ರವಾದವು? ಕಾನೂನನ್ನು ನಾವು ಮಾಡಿ ಜಾರಿಗೆ ಕೊಡತಕ್ಕಂಥದ್ದು. ಇದನ್ನು ಚರ್ಚೆ ಮಾಡುವುದಕ್ಕೆ ಎಷ್ಟು ಸಮಯ ತೆಗೆದುಕೊಳ್ಳುತ್ತೇವೆ. ಚರ್ಚೆ ಮಾಡುವುದಕ್ಕೆ ಎಲ್ಲಿ ಅವಕಾಶ ಕೊಡುತ್ತಿದ್ದೀರಿ ನೀವು? ಈ ಕಡೆ ಅದನ್ನೂ ಮಾತನಾಡುತ್ತೀರಿ ಆ ಕಡೆ ಇದನ್ನೂ ಮಾತನಾಡುತ್ತಿದ್ದೀರಿ. ಒಂದೊಂದು ದಿವಸಕ್ಕೆ 20 ಮಸೂದೆಗಳನ್ನು ತಂದಿಡುತ್ತೀರಿ ನೀವು. ಎಲ್ಲಾ ಹೌದಪ್ಪಗಳು. ಹೌದು ಎನ್ನುವವರ ಪರ ನಡೆಯುತ್ತಿದೆ ಇಲ್ಲಿ. ಏನು ನಡೆದಿದೆ? ಸ್ವಲ್ಪ ಪ್ರಾಮಾಣಿಕವಾಗಿ ಮಾತನಾಡೋಣ. ಒಂದು ಕಡೆ ಅಧ್ಯಕ್ಷರ ಕೈ ಕಟ್ಟಿಸಿದ್ದೀರಿ. ಒಂದು ಕಡೆ ಶಾಸನಸಭೆ ಕಟ್ಟಿಸಿದ್ದೀರಿ. ಮತ್ತೊಂದು ಕಡೆ ಬಹಳ ವೇದಾಂತ ಹೇಳುತ್ತೀದ್ದೀರಿ. ಶಾಸನಸಭೆ ಇರುವುದು ಶಾಸಕರು ಶಾಸನವನ್ನು ಮಾಡುವುದಕ್ಕೆ ಎಂದು. ಯಾವ ಶಾಸನ ಸ್ವಾಮಿ? ಒಂದೊಂದು ಶಾಸನದ ಬಗ್ಗೆ ಎರಡೆರಡು ದಿವಸ ಚರ್ಚೆ ಮಾಡಿ, ಸಮಗ್ರವಾಗಿ ಚಿಂತನೆ ಮಾಡಿ, ಶಾಸನ ಅಂದರೆ ಏನು? ನಾಟಕದ ಚೀಟಿ ಏನಲ್ಲ ಇದು. ಒಂದೊಂದು ಶಾಸನದ ಬಗ್ಗೆಯೂ ನಾವು ಸಮಗ್ರವಾಗಿ ಚಿಂತನೆ ಮಾಡಿ ಚರ್ಚೆ ಮಾಡಿ ಮಾಡಬೇಕು. ಈ ಶಾಸನದ ಪ್ರತಿಗಳನ್ನು ಎಷ್ಟು ದಿವಸ ಮುಂಚಿತವಾಗಿ ಕೊಡುತ್ತೀರಿ ನೀವು ಸದಸ್ಯರಿಗೆ? ಶಾಸನಸಭೆ ಸೇರಿದ ತಕ್ಷಣ ನಮ್ಮ ಲಕೋಟೆ ಒಳಗೆ ಹಾಕಿ ಕಳುಹಿಸುತ್ತೀರಿ ನೀವು. ಇಲ್ಲಿ ಬಂದು ಕೇಳಿದಾಗ ಇಲ್ಲಿ ಕೊಡುತ್ತೀರಿ. ನಿಮಗೆ ತೀಟೆ ಬಂದಾಗ ಯಾವಾಗ ಬೇಕಾದರೂ ಅವಾಗ ಕೊಟ್ಟುಬಿಡುತ್ತೀರಿ ಇಲ್ಲಿ. ತೆಗೆದುಕೊಳ್ಳಿ ಇಟ್ಟುಕೊಳ್ಳಿ ಎಂದು. ಇದು ಶಾಸನ ಮಾಡತಕ್ಕ ವಿದವೆ? ಇದಲ್ಲ ಇದು. ನಾಟಕೀಯ ಆಗಬಾರದು ನಾವು ನಮ್ಮಲ್ಲಿ ಒಂದು ಶಾಸನಕ್ಕೆ ಮುದ್ರೆಯನ್ನು ಕೊಡಬೇಕಾದರೆ, ಆ ಸಭೆ ಆ ಒಂದು ಶಾಸನದ ಬಗ್ಗೆ ಒಂದು ವಿಧೇಯಕದ ಬಗ್ಗೆ ಸಮಗ್ರವಾಗಿ ಚಿಂತನೆ ಮಾಡಿ, ಆ ಕಡೆ ಈ ಕಡೆ ಮಂಥನ ಮಾಡಿ ಒಂದು ಹೊಸ, ಇದನ್ನು ಹೇಳಬೇಕಾದ್ದು ಕರ್ತವ್ಯ, ತಾವು ಒಪ್ಪುತ್ತೀರಿ ಎಂದು ಕಾಣುತ್ತೇದೆ ಇದು ಯಾವುದೂ ನಡೆಯುತ್ತಿಲ್ಲ. ಅಂದರೆ ನಾನು ಯಾರನ್ನೂ ಆಕ್ಷೇಪಣೆ ಮಾಡುತ್ತಿಲ್ಲ. ಕಾರಣ ಏನು? ನಿಮ್ಮ ಶಾಸನಸಭೆ ದಿನಗಳಿದೆಯಲ್ಲ ಅದನ್ನು ನಾಗಾಲೋಟದಲ್ಲಿ ಓಡಿಸಿ ಬಿಡುತ್ತೀರಿ. ನಾಳೆ ಬೆಳಿಗ್ಗೆ ಮುಗಿಯಬೇಕು, ಏನೇ ಆದರೂ ಮುಗಿಸಬೇಕು. ನಮ್ಮ ಕೈಯಲ್ಲಿ ಆಗುವುದಿಲ್ಲ ಸ್ವಾಮಿ. ಅಧ್ಯಕ್ಷರ ಬಾಯಿ ಮುಚ್ಚಿಸುತ್ತೀರಿ, ನಮ್ಮ ಬಾಯಿ ಮುಚ್ಚಿಸುತ್ತೀರಿ, ವಿರೋಧಪಕ್ಷಗಳ ಬಾಯಿ ಮುಚ್ಚಿಸುತ್ತೀರಿ. ಈ ವ್ಯವಸ್ಥೆ ಇರುವಾಗ ತಮಗೆ ನಾನು ಹೇಳುತ್ತೇನೆ ಇದು ಸರಿಯಲ್ಲ. ದಯಮಾಡಿ ತಮಗೆ ನಾನು ಹೇಳುತ್ತೇನೆ ಒಂದೊಂದು ವಿಧೇಯಕ. . . ಒಂದೊಂದು ಬೇಡಿಕೆಗಳ ಬಗ್ಗೆ ಈಗ ವಿಷಯ ಸಮಿತಿಗಳಾಗಿವೆ.

ಶ್ರೀ ಯು.ಬಿ.ಬಣಕರ್ : ಅಧ್ಯಕ್ಷರೆ, ನಾಣಯ್ಯನವರು ಹೇಳಿದಹಾಗೆ ನಾವು ಶಾಸಕರು. ಕೇವಲ ಶಾಸನವನ್ನು ಪಾಸ್ ಮಾಡುವುದಕ್ಕೆ ಇದ್ದರೆ, ತಾಲ್ಲೂಕಿನ ಯಾವುದೇ ಗ್ರಾಮಗಳ ಸಮಸ್ಯೆಗಳ ಬಗ್ಗೆ ಆಗಲೀ ಸಾರ್ವಜನಿಕರು ಯಾವುದೇ ಕುಂದುಕೊರತೆಗಳ ಬಗ್ಗೆ ಶಾಸಕರನ್ನು ಸಂಪರ್ಕ ಮಾಡಬಾರದು ಎಂದು ಅವರು ಹೇಳಿಬಿಟ್ಟರೆ ನಾವು ಕೇವಲ ಶಾಸನ ಮಾಡಿಕೊಂಡೇ ಇರುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಆಯಿತು. ನೀವು ಏನೋ ಒಂದು ರೀತಿ ಶಾಸಕರ ಬಗ್ಗೆ ಗಧಾಪ್ರಹಾರ ಮಾಡಬೇಕು ಎಂದು ವಿಧಾನಪರಿಷತ್ತಿನಲ್ಲಿ ಗೆದ್ದು ಬಂದಿರತಕ್ಕ ಸಂಸದೀಯ ಸಚಿವರ ಅಭಿಪ್ರಾಯ ಇದು ಬಹಳ ಅತ್ಯಂತ. . .

ಶ್ರೀ. ಎಂ.ಸಿ. ನಾಣಯ್ಯ : ಮಾನ್ಯ ಸಭಾಧ್ಯಕ್ಷರೆ, ನಾನು ಹೇಳಿರತಕ್ಕದ್ದು ನಾವು ಬೇರೆ ವಿಚಾರವನ್ನು ಚರ್ಚೆ ಮಾಡಬಾರದು ಎಂದು ಅಲ್ಲ. ನಾವು ಶಾಸನವನ್ನು ರಚನೆ ಮಾಡುತ್ತಾ ಇರತಕ್ಕ ಸಂದರ್ಭದಲ್ಲಿ ಶಾಸನಗಳಿಗೆ ಹೆಚ್ಚು ಮಹತ್ವವನ್ನು ಕೊಟ್ಟು ಅದನ್ನು ಮಂಥನ ಮಾಡಿ ಯಾವ ರೀತಿ ಅದರ ಮೇಲೆ ಬೆಳಕನ್ನು ಚೆಲ್ಲಬೇಕು ಎನ್ನುವುದರ ಬಗ್ಗೆ ಹೆಚ್ಚಿಗೆ ನಮ್ಮ ಸಮಯವನ್ನು ವಿನಿಯೋಗಿಸುತ್ತಿಲ್ಲ. ಅದನ್ನು ಬಿಟ್ಟು ಬೇಕಾದಷ್ಟು ಬೇರೆ ವಿಷಯಗಳಿಗೆ ಸಮಯವನ್ನು ನಾವು ವಿನಿಯೋಗಿಸುವುದರಿಂದ ಶಾಸನಕ್ಕೆ ನಾವು ಕೊಡಬೇಕಾಗಿರತಕ್ಕ ಮಹತ್ವವನ್ನು ನಾವು ಕೊಡುತ್ತಾ ಇಲ್ಲ ಎನ್ನತಕ್ಕ ಮಾತನ್ನು ಮಾತ್ರ ನಾನು ಆಡಿದ್ದೇನೆ. ಬೇರೆ ವಿಚಾರಗಳನ್ನು ಮಾತನಾಡಬಾರದು ಎಂದು ನಾನು ಹೇಳುವುದಿಲ್ಲ.

ಶ್ರೀ ಯು.ಬಿ.ಬಣಕಾರ್ : ಯಾವುದೇ ಒಂದು ಶಾಸನವನ್ನು ನಾವು ಪಾಸ್ ಮಾಡುವಾಗ ಪ್ರತಿಗಳನ್ನು ಮುಂಚಿತವಾಗಿ ಕೊಟ್ಟು ಚರ್ಚೆಗೆ ಹೆಚ್ಚು ಅವಕಾಶ ಮಾಡಿ ಕೊಡುವ ಸಂಪ್ರದಾಯವನ್ನು ತಾವು ಪ್ರಾರಂಭ ಮಾಡಿ

ಶ್ರೀ. ಎಂ.ಸಿ. ನಾಣಯ್ಯ : ತಮ್ಮ ಶಾಸಕರ ಹಕ್ಕನ್ನು ಯಾರಿಂದಲೂ ಕೂಡ ಮೊಟಕು ಮಾಡುವುದಕ್ಕಾಗುವುದಿಲ್ಲ. ಕಡೆಗೆ ಮಾನ್ಯ ಸಭಾದ್ಯಕ್ಷರೇ ಅದಕ್ಕೂ ಕೂಡ ರಕ್ಷಣೆಯನ್ನು ಕೊಡಬೇಕಾಗುತ್ತದೆ. ಆದರೆ ಶಾಸನವನ್ನು ನಾವು ಚರ್ಚೆ ಮಾಡುತ್ತಾ ಇರುವ ಸಂದರ್ಭದಲ್ಲಿ ಎಷ್ಟು ಮಹತ್ವವನ್ನು ಕೊಡಬೇಕಾಗಿತ್ತೋ ಅಷ್ಟು ಮಹತ್ವವನ್ನು ನಾವು ಇವತ್ತು ಕಳೆದುಕೊಂಡು ಮಹತ್ವವನ್ನು ಕೊಡದೇ ಇರತಕ್ಕ ವಿಷಯಗಳಿಗೆ ಹೆಚ್ಚು ಮಹತ್ವವನ್ನು ಕೊಡುತ್ತಿದ್ದೇವೆ ಎನ್ನತಕ್ಕ ಮಾತನ್ನು ಮಾತ್ರ ನಾನು ಆಡಲಿಕ್ಕೆ ಇಷ್ಟಪಡುತ್ತಿದ್ದೇನೆ.

ಶ್ರೀ ಚಂದ್ರಕಾಂತ ಜಿ ಬೆಲ್ಲದ್ : ಈ ವಿಷಯ ಈಗ ಹೇಳುತ್ತಿದ್ದೀರಿ. ಇವತ್ತಿನ ದಿವಸ ಅದಕ್ಕೆ ಅವಕಾಶವನ್ನೇ ಕೊಟ್ಟಿಲ್ಲವಲ್ಲ ಈಗ. ನಾವು ಮತ್ತು ವಾಟಾಳ್ ನಾಗರಾಜ್ ಅವರು ಹೇಳುತ್ತಾ ಇರುವುದು ಪ್ರತಿಯೊಂದು ವಿಧೇಯಕಕ್ಕೂ ಕೂಡ ಕನಿಷ್ಠ ಎರಡು ದಿವಸ ನಮಗೆ ಚರ್ಚೆಗೆ ಅವಕಾಶ ಕೊಡಬೇಕು ಎನ್ನುವುದೇ ನಮ್ಮ ವಾದ ಇದೆ. ಇವತ್ತಿನ ದಿವಸ ಅದಕ್ಕೂ ಅವಕಾಶ ಕೊಟ್ಟಿಲ್ಲ. ವಿಧಾನಸಭೆ ಎಷ್ಟು ದಿವಸ ನಡೆಯಬೇಕು, ಕಲಾಪಗಳು ಎಷ್ಟು ದಿವಸ ಚರ್ಚೆಯಾಗಬೇಕು ಬಜೆಟ್ ಮೇಲೆ ಎಷ್ಟು ದಿವಸ ಚರ್ಚೆ ಆಗಬೇಕು, ಬಜೆಟ್ ಮೇಲೆ ಚರ್ಚೆ ಆಗುವುದಕ್ಕಿಂತ ಮೊದಲು ಗೌರ್ನರ್ ಭಾಷಣದ ಮೇಲೆ ಚರ್ಚೆಯಾಗಿ ಆಮೇಲೆ ಬಜೆಟ್ ಇಂಟ್ರೊಡ್ಯೂಸ್ ಮಾಡಬೇಕಾಗಿತ್ತು. ಅದೂ ಸಹಿತ ಇಲ್ಲಿ ನಡೆಯುತ್ತಿಲ್ಲ ಈ ವಿಧಾನಸಭೆಯ ಮಹತ್ವ ಏನಿದೆ. ಈ ವಿಧೇಯಕಗಳನ್ನು ಕೂಲಂಕಷವಾಗಿ ಚರ್ಚೆ ಮಾಡಿ ಆಮೇಲೆ ಅದನ್ನು ಜಾರಿಯಲ್ಲಿ ತರಲಿಕ್ಕೆ ವ್ಯವಸ್ಥೆ ಮಾಡಬೇಕಾಗುತ್ತದೆ. ಆ ದಿಸೆಯಲ್ಲಿ ಕಾರ್ಯಕಲಾಪಗಳೇ ನಡೆಯುತ್ತಿಲ್ಲ. ಈ ದಿಸೆಯಲ್ಲಿ ಈ ಶಾಸಕರ ಹಕ್ಕುಬಾಧ್ಯತೆಗಳನ್ನು ಅಥವಾ ವಿಧಾನಸಭೆಯ ಒಂದು ಜವಾಬ್ದಾರಿಯನ್ನು ಮೊಟಕುಗೊಳಿಸುವಂಥ ಕಾರ್ಯ ನಡೆಯುವುದಕ್ಕೆ ತಾವು ಆಸ್ಪದ ಕೊಡುತ್ತಿಲ್ಲ ಎಂದು ನಾವು ಭಾವಿಸುತ್ತೇವೆ.

ಡಾ॥ ಯು ಚಿತ್ತರಂಜನ್ : ಪ್ರೊಫೆಷನಲ್ ಕಾಲೇಜುಗಳ ಬಗ್ಗೆ ಬಿಲ್ ಇಂಟ್ರೊಡ್ಯೂಸ್ ಮಾಡುತ್ತೇವೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದರು. ಅದರ ಕರಡು ನಮಗೆ ಕೊಟ್ಟಿಲ್ಲ. ಅದರ ಚರ್ಚೆ ಶಾಸನಸಭೆಯಲ್ಲಿ ಮಾತ್ರವಲ್ಲ ವ್ಯಾಪಕವಾಗಿ ಆಗಬೇಕಾಗುತ್ತದೆ. ಒಂದು ದಿವಸದಲ್ಲಿ ತಂದು ಹೌದು ಎಂದು ಮಾಡಿಸಿಕೊಂಡುಬಿಟ್ಟರೆ ಮತ್ತೇನೂ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಇಂಥ ವಿಷಯಗಳ ಬಗ್ಗೆ ಸಾಕಷ್ಟು ಸದನದಲ್ಲೂ ಚರ್ಚೆಯಾಗಬೇಕು. ಸದನದಲ್ಲಿರುವವರು ಮಾತ್ರ ಬುದ್ಧಿವಂತರಲ್ಲ. ಹೊರಗಿರುವಂಥ ಪಬ್ಲಿಕ್‌ನಲ್ಲೂ ಇದರ ಬಗ್ಗೆ ಚರ್ಚೆಯಾಗಲಿಕ್ಕೆ ಸಾಕಷ್ಟು ಅವಕಾಶ ಕೊಡಬೇಕಾಗುತ್ತದೆ.

ಶ್ರೀ ಪಿ.ಜಿ.ಆರ್.ಸಿಂಧ್ಯ : ಸನ್ಮಾನ್ಯ ಅಧ್ಯಕ್ಷರೇ, ಸರ್ಕಾರಕ್ಕೆ ವಿಧೇಯಕದ ಬಗ್ಗೆ, ಹಾಗೂ ಮಸೂದೆಯನ್ನು ಮಾಡುವುದರ ಬಗ್ಗೆ, ಚರ್ಚೆ ಮಾಡುವುದಕ್ಕೆ ಬರಬೇಕೆಂಬುದು ಉದ್ದೇಶವಲ್ಲ. ಎಷ್ಟು ಬೇಕಾದರೂ ಚರ್ಚೆಯಾಗಲಿ. ಶ್ರೀಮಾನ್ ಬೆಲ್ಲದ್‌ರವರು 2ನೇ ಸಾರಿ ಈ ಮನೆಯ ಸದಸ್ಯರಾಗಿದ್ದಾರೆ. ಅವರಿಗೆ ಇದರ ತಿಳುವಳಿಕೆ ಸಂಪೂರ್ಣವಾಗಿ ಗೊತ್ತಿದೆ. ನಮ್ಮಲ್ಲಿ ಸಭಾ ಸಲಹಾ ಸಮಿತಿ ಎಂದು ಇಟ್ಟುಕೊಂಡಿದ್ದೇವೆ. ಅದರಲ್ಲಿ ನಮ್ಮ ಪಕ್ಷದವರು, ನಿಮ್ಮ ಪಕ್ಷದವರು ನಾವೆಲ್ಲ ಕುಳಿತುಕೊಂಡು ಚರ್ಚೆ ಮಾಡುತ್ತೇವೆ. ಯಾವುದಕ್ಕೆ ಎಷ್ಟು ಸಮಯ ಎಂಬುದಾಗಿ ನಿಗದಿ ಮಾಡುತ್ತೇವೆ. ಅದರ ಪ್ರಕಾರ ನಾವು ನೀವು ನಡೆದುಕೊಳ್ಳಬೇಕಾಗುತ್ತದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ನಾವು ಹೊಸದಾಗಿ ಪಾಠ ಕಲಿತುಕೊಳ್ಳಬೇಕಾಗಿದೆ. ಸಭಾ ಸಲಹಾ ಸಮಿತಿಯಲ್ಲಿ ಏನು ಆಗುತ್ತದೆ? ಈ ಸದನಲ್ಲಿ ಯಾವ ರೀತಿ ನಾವು ನಡೆದುಕೊಳ್ಳಬೇಕು ಎನ್ನತಕ್ಕಂತಹದ್ದು ಹೊಸದಾಗಿ ಪಾಠ ಕಲಿತುಕೊಳ್ಳಬೇಕಾಗಿದೆ.

ಶ್ರೀ ಪಿ.ಜಿ.ಆರ್.ಸಿಂಧ್ಯ : ನೀವು ನಮ್ಮಿಂದ ಪಾಠ ಕಲಿಯುವುದು ಬೇಡ. ನೀವೇ ನಮಗಿಂತ ಜಾಸ್ತಿ ಅವಧಿ ಅಧಿಕಾರದಲ್ಲಿದ್ದಿರಿ, 15 ವರ್ಷ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಈ ಸದನದಲ್ಲಿ ತಮಗೆ ಗೊತ್ತಿದೆ ''0'' ಅವರ್‌ನಲ್ಲಿ ಶೂನ್ಯ ವೇಳೆ, ಇಷ್ಟೇ ಮಾತನಾಡಬೇಕು ಎಂದು ನಾವು ಅಲ್ಲಿ ಡಿಸೈಡ್ ಮಾಡುತ್ತೇವೆಯೇ; ಅನೇಕ ಸಮಸ್ಯೆಗಳು ಬರುತ್ತವೆ. ಎಮರ್ಜೆನ್ಸಿ, ಅಂದಾಗ ತಾತ್ಪೂರಿತವಾಗಿ ತಾವು ಕೂಡ ಅನೇಕ ಜನರಿಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡುತ್ತೀರಿ. ಅದರಲ್ಲಿ ಒಂದು ಗಂಟೆ ಹೋಗುತ್ತದೆ, 2 ಗಂಟೆ ಹೋಗುತ್ತದೆ 3 ಗಂಟೆಯನ್ನೂ ಕೂಡ ಕೆಲವು ಸಲ ನಾವು ಕಳೆದುಕೊಂಡಿದ್ದೇವೆ. ಅಂದಾಗ ಈ ವ್ಯತ್ಯಾಸಗಳು ಆಗುತ್ತವೆ. ಆದರೆ ಅದನ್ನೇ ನೆಪ ಹಿಡಿದುಕೊಂಡು ನಿಮಗೆ ಸಾಕಷ್ಟು ಸಮಯ ಇದೆ, ಅಲ್ಲೇ ಡಿಸೈಡ್ ಮಾಡಬೇಕು, ಸಭಾ ಸಲಹಾ ಸಮಿತಿಯಲ್ಲಿ, ಅಂದರೆ ಅದು ಅಷ್ಟು ಸಮಂಜಸ ಅಲ್ಲ. ಎರಡನೆಯದಾಗಿ ಇವತ್ತು ಏನಾಗಿದೆ ಎಂದರೆ, ನಾವು ಶಾಸಕರ ಬಗ್ಗೆ ಬಹಳ ಲಘುವಾಗಿ ಮಾತನಾಡುತ್ತಾ ಇದ್ದೇವೆ. ಹೊರಗಡೆ, ಬೇರೆ ಜನರ ದೃಷ್ಟಿಯಲ್ಲಿ ಮತ್ತು ಅಧಿಕಾರಿಗಳ ದೃಷ್ಟಿಯಲ್ಲೂ ಕೂಡ, ಇವತ್ತು ಅವರ ಪ್ರತಿಷ್ಟೆಯನ್ನು ಕಳೆದುಕೊಳ್ಳತಕ್ಕಂತಹದ್ದು ಅಥವಾ ಅವರ ಪ್ರತಿಷ್ಠೆ ಕುಗ್ಗುತ್ತಾ ಇದೆ. ಕಾರಣ ಇಷ್ಟೇ. ಮುಖ್ಯಮಂತ್ರಿಗಳು ಕೂಡ ಎಂ.ಎಲ್.ಎ.ಗಳು

ಇಂಟರ್‌ಫಿಯರ್ ಮಾಡುತ್ತಾರೆ, ಅದು ಬೇರೆ ಇದು ಬೇರೆ ಬೇಡ ಎಂದು ಹೇಳಿಕೊಳ್ಳುವುದು. ಹೊರಗಡೆ ಒಂದು, ಒಳಗಡೆ ಒಂದು. ಬೇರೆ ಮಂತ್ರಿಗಳೂ ಕೂಡ ಅದೇ ರೀತಿಯಾಗಿ ಹೇಳತಕ್ಕಂಥಾದ್ದು ಆದ್ದರಿಂದ ಅವರಿಗೆ ಬೇರೆಯವರು ಏನು ಗೌರವ ಕೊಡುತ್ತಾ ಇದ್ದರು ಅದೂ ಕೂಡ ಇವತ್ತು ಕಡಿಮೆಯಾಗುತ್ತದೆ ಏನಪ್ಪ ಈ ಎಂ.ಎಲ್.ಎ. ತೆಗೆದುಕೊಂಡು ಏನು ಮಾಡುವುದು? ಮುಖ್ಯಮಂತ್ರಿಗಳು ಈ ರೀತಿಯಾಗಿ ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರ್ ಈ ರೀತಿಯಾಗಿ ಹೇಳುತ್ತಾ ಇದ್ದಾರೆ, ಅದಕ್ಕಾಗಿ ಅವರು ಇದ್ದರೆಷ್ಟು ? ಬಿಟ್ಟರೆಷ್ಟು ? ಅವರನ್ನು ಬಿಟ್ಟು ಬರೀ ಸರ್ಕಾರಿ ಮಂತ್ರಿಗಳಿಗೆ ಹೋಗಿ ಭೇಟಿಯಾದರೆ, ನಮ್ಮ ಕೆಲಸಗಳು ಆಗುತ್ತವೆ. ಅಷ್ಟೇ ಸಾಕು, ಇವರು ಯಾರೂ ಕೂಡ-ಬೇಕಾಗಿಲ್ಲ ಎನ್ನತಕ್ಕ ಮನಸ್ಸು ಅಧಿಕಾರಿಗಳ ಮನಸ್ಸಿನಲ್ಲಿ ಬಂದರೆ, ಏನಾಗುತ್ತದೆ ಹಳ್ಳಿಗಳಿಗೆ ಅನೇಕ ಸಲ ನಾವು ಹೋಗುತ್ತೇವೆ. ಹಳ್ಳಿ ಹಳ್ಳಿಗಳಿಗೆ ಹೋದಾಗ, ಒಂದೇ ಉದಾಹರಣೆಯನ್ನು ಹೇಳುವುದಾದರೆ, ಕಳೆದ ಸಾರಿ ನಡೆದ ಪಂಚಾಯಿತಿ ಚುನಾವಣೆ ಸಮಯದಲ್ಲಿ ಹೋದಾಗ, ಅವರಿಗೆಲ್ಲರಿಗೂ ಜವಾಬ್ದಾರಿ ಗೊತ್ತಿದೆ. ಈ ಚರಂಡಿ ಮಾಡತಕ್ಕಂಥದ್ದು ಯಾರು ? ರಸ್ತೆಗಳನ್ನು ಮಾಡತಕ್ಕಂಥದ್ದು ಯಾರು ? ಇದು ಗೊತ್ತಿದ್ದರೂ ಕೂಡ ನೀವೂ ನಾವು ಹಳ್ಳಿಗಳಿಗೆ ಹೋದರೆ, ಸ್ವಾಮಿ ಇಲ್ಲಿ ಬನ್ನಿ ಈ ಓಣಿಯನ್ನು ನೋಡಿ; ಇಲ್ಲಿಂದ ಹಾಯ್ದು ಹೋಗಿ ಎಂದು ನಿಮ್ಮನ್ನು ಕರೆದುಕೊಂಡು ಹೋಗುತ್ತಾರೆ. ? ನಿಮಗೆ ತೋರಿಸುತ್ತಾರೆ. ಕುಡಿಯುವ ನಲ್ಲಿ ನೀರು ನೋಡಿ, ಮಿನಿ ವಾಟರ್ ಸಪ್ಲೈ ನೋಡಿ : ಎಂದು ತೋರಿಸುತ್ತಾರೆ. ನಾವು ಅವಾಗ ಹೇಳುವುದಕ್ಕಾಗುವುದಿಲ್ಲ. ಈ ಮಿನಿ ವಾಟರ್ ಸಪ್ಲೈ ಜಿಲ್ಲಾ ಪರಿಷತ್ತಿಗೆ ಬರುತ್ತದೆ. ಈ ಚರಂಡಿ ಪಂಚಾಯಿತಿಗೆ ಬರುತ್ತದೆ, ಈ ರಸ್ತೆ ಪಂಚಾಯಿತಿಗೆ ಬರುತ್ತದೆ, ನನ್ನದೇನೂ ಜವಾಬ್ದಾರಿ ಇಲ್ಲ ಎಂದು ಹೇಳಿ ನಾವು ತಪ್ಪಿಸಿಕೊಂಡು ಬರುವುದಕ್ಕಾಗುವುದಿಲ್ಲ. ಅವರು ಹೇಳುತ್ತಾರೆ, ಅವರಿಗೂ ಮತ ಕೊಟ್ಟಿದ್ದೇವೆ, ನಿಮಗೂ ಮತ ಕೊಟ್ಟಿದ್ದೇವೆ ಎಂದು ಆವಾಗ ಇಲ್ಲ, ನನಗೆ ಮತ ಕೊಟ್ಟಿದ್ದು, ವಿಧಾನ ಸಭೆಯಲ್ಲಿ ಹೋಗಿ, ಕಾನೂನು ಮಾಡತಕ್ಕಂತಹದ್ದು, ಶಾಸನ ಮಾಡತಕ್ಕಂತಹದ್ದು ಅಷ್ಟೇ ನನ್ನ ಕೆಲಸ, ಬೇರೆ ಯಾವೂದೂ ನನ್ನ ಕೆಲಸ ಅಲ್ಲ, ದಯವಿಟ್ಟು ಕ್ಷಮಿಸಿ ಎಂದು ಹೇಳಿಕೊಂಡು ಬರುವುದಕ್ಕಾಗುವುದಿಲ್ಲ. ಆದಕ್ಕೆ ತಾವು ಪ್ರಾಕ್ಟಿಕಲಿ ಏನು ಡಿಫಿಕಲ್ಟೀಸ್ ಇದೆ ಎಂಬುದನ್ನು ಅರ್ಥಮಾಡಿಕೊಳ್ಳಿ. ಸುಮ್ಮನೆ ಕೇವಲ ಮಾತಿಗಾಗಿ ಕಾನೂನು ಮಾಡುವುದು. ಮತ್ತೆ ಕಾನೂನನ್ನು ಮಾಡಬೇಕಾಗಿದ್ದರೆ ನೀವು ಯಾರೂ ಕೂಡ ರೆಕ್‌ಮೆಂಡ್ ಮಾಡಬೇಡಿ. ಟ್ರಾನ್ಸ್‌ಫರ್ ಯಾರಿಗೆ ಮಾಡುವುದು ಎಂಬುದನ್ನು ಅವರಿಗೇ ಬಿಟ್ಟು ಬಿಡಿ. ತಾಲ್ಲೂಕು ಪಂಚಾಯಿತಿ ಅಧ್ಯಕ್ಷ ಏನು ಹೇಳುತ್ತಾರೆ, ಅಂತಹವರಿಗೆ ಸೆಕ್ರೆಟರಿಯಾಗಿ ಹಾಕಿಕೊಡಿ ಅಥವಾ ಅವನು ಯಾವ ಗ್ರಾಮ-ಸಹಾಯಕನನ್ನು ಕೇಳುತ್ತಾನೆ, ಅದನ್ನೇ ಮಾಡಿ. ನೀವು ಇಲ್ಲಿಂದ ಒಂದೂ ಕಳುಹಿಸಬೇಡಿ. ಫ್ಯೂವನ್ ಅಂದರೆ ಕ್ಲಾಸ್-4 ಸರ್ವೆಂಟ್ಸ್ ವರ್ಗಾವಣೆ ಪ್ರಿಮೆಚುರ್ ಇದ್ದರೆ, ಅದು ಮುಖ್ಯಮಂತ್ರಿಗಳಿಗೆ ಬರಬೇಕು ಎಂದು ಇದೆ. ಜ್ಯೂನಿಯರ್ ಇಂಜಿನೀಯರ್ ವರ್ಗಾವಣೆ ಪ್ರಿಮೆಚೂರ್ ಇದ್ದರೆ, ಇಲ್ಲಿಗೆ ಬರಬೇಕು. ಒಬ್ಬ ಗೆಜಿಟೆಡ್ ಆಫೀಸರ್‌ದ್ದು ಪ್ರಿಮೆಚೂರ್ ಇದ್ದರೆ ಅದೂ ಕೂಡ ಇಲ್ಲೇ ಬರಬೇಕು.

ಅಂತ ಅಂದಾಗ ನೀವು ಈ ವ್ಯವಸ್ಥೆಯನ್ನು ನಿಮ್ಮ ಜೊತೆಯಲ್ಲಿ ಇಟ್ಟುಕೊಳ್ಳುತ್ತೀರಿ. ಬಾಕಿ ವ್ಯವಸ್ಥೆಗೋಸ್ಕರ ನಮಗೆ ಕಾನೂನು ತೋರಿಸುತ್ತೀರಿ. ಹೀಗಾಗಿ ನಮ್ಮದು ನಾವೇ ದಿನವೂ ಡಿಸ್‌ಕಸ್ ಮಾಡಿ, ಶಾಸಕರ ಬಗ್ಗೆ ಏನಾಗಿದೆ ಎಂದರೆ ಒಂದು ಅವರ್ಷನ್. ಏನಪ್ಪ ಈ ಎಂ. ಎಲ್.ಎ.ಗಳು ಪದೇ ಪದೇ ಅವರಿಗೋಸ್ಕರ ಏನೋ ಕೇಳುತ್ತಾ ಇದ್ದಾರೆ. ಈ ವಾಟಾಳ್ ನಾಗರಾಜ್‌ರವರು ದಿನಾ ಭಾಷಣ ಮಾಡುತ್ತಿದ್ದಾರೆ, ಖರ್ಗೆಯವರು ಮಾಡುತ್ತಿದ್ದಾರೆ. ಮತ್ತೆ ಯಡಿಯೂರಪ್ಪನವರು ಮಾಡುತ್ತಿದ್ದಾರೆ, ಎಂದು ಹೇಳಿ ಈ ಭಾವನೆ ಮೂಡುತ್ತಿದೆ. ಅವರ ಹಕ್ಕಿಗೋಸ್ಕರ ದಿನ ಎದ್ದು, ಅಸೆಂಬ್ಲಿಯಲ್ಲಿ ಬಡಿದಾಡುತ್ತಿದ್ದಾರೆ. ನಮ್ಮ ಬಗ್ಗೆ ಏನೂ ಕೇಳುತ್ತಿಲ್ಲ ಎನ್ನತಕ್ಕಂತಹ ಭಾವನೆ ಕೂಡ ಈ ಚರ್ಚೆಯಿಂದ ಮೂಡುತ್ತದೆ. ದಯಮಾಡಿ ತಾವು ಆ ಮಂತ್ರಿಗಳಿಗೆ, ಮುಖ್ಯಮಂತ್ರಿಗಳಿಗೆ ಸ್ಪಷ್ಟವಾಗಿ ಹೇಳಿ. ಯಾವುದು ಸಾಧ್ಯ ಇದೆ, ಇದನ್ನು ನಾವು ಮಾಡುತ್ತೇವೆ ಆಗುತ್ತದೆ ಎಂದು ಹೇಳಿ. ಇಲ್ಲ ನಿಮಗೆ ಏನೂ ಸಂಬಂಧ ಇಲ್ಲ, ನಾವು ಯಾವಾಗ ಅಸೆಂಬ್ಲಿ ಕರೆಯುತ್ತೇವೆ, ಬಂದು ಇಲ್ಲಿ ಕಾನೂನು ಮಾಡಿಕೊಂಡು ಚರ್ಚೆ ಮಾಡಿಕೊಂಡು ಹೋಗಿ, ಈ 5 ವರ್ಷದವರೆಗೆ, ನಾವು ಎಲ್ಲಿಯವರೆಗೆ ಇರುತ್ತೇವೆ, ಅಲ್ಲಿಯವರೆಗೂ ನಮ್ಮದು ಇದೇ ಧಾಟಿ ಇದೇ ನಮ್ಮ ನಡವಳಿಕೆ ಇದೇ ರೀತಿಯಾಗಿ ನಾವು ಕಾರ್ಯವನ್ನು ನಿರ್ವಹಿಸುತ್ತೇವೆ ಅಂದರೆ ನಮಗೆ ಏನೂ ಅಭ್ಯಂತರ ಇಲ್ಲ. ಇದನ್ನು ತಾವು ದಯವಿಟ್ಟು ಅವರಿಗೆ ಡೈರೆಕ್ಷನ್ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ನನಗನ್ನಿಸುತ್ತಿದೆ. ಮಾನ್ಯ ಖರ್ಗೆಯವರು ಹೇಳಿದ್ದನ್ನು ನಾನು ಸಮರ್ಥಿಸುತ್ತೇನೆ. ಅದು ನಿಜ. ಅವರಿಗೆ ಏನು ಬೇಕಾದರೂ ಮಾಡಿಕೊಂಡು ಹೋಗಲಿ.

ಶ್ರೀ ವೈ. ರಾಮಕೃಷ್ಣ : ನಾನು ಈ ಮನೆಯಲ್ಲಿ ಕೆಲಸ ಮಾಡಿದ್ದೇನೆ. ಪಾರ್ಲಿಮೆಂಟ್ ಅಫೇರ್ಸ್ ಮಿನಿಸ್ಟರ್ ಆಗಿ ಕೆಲಸ ಮಾಡಿದ್ದೇನೆ. ಕಾನೂನು ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ಆದರೆ ಇನ್ನೂ ಅನೇಕ ಜನ ಹಿರಿಯ ನಾಯಕರು ಕೆಲಸ ಮಾಡಿದ್ದಾರೆ. ಇತ್ತೀಚೆಗೆ 3 ತಿಂಗಳಿಂದ ಯಾವ ರೀತಿ ಕೆಲಸಗಳು ನಡೆಯುತ್ತಾ ಇವೆ, ಎಂಬುದನ್ನು ನೆನೆಸಿ ಕೊಂಡಾಗ, I have to pity the Minister. ಇಡೀ ಸದನಕ್ಕೆ ಮಾರ್ಗದರ್ಶನ ತೋರಿಸಬೇಕು, ಅವರ ಪಾರ್ಟಿಗೆ ಅಲ್ಲ. He is the Parliamentary affairs Minister not for the Janata Dal Party but for the entire House, for the entire Legislature. ಆ ಕೆಲಸ ಮಾಡುತ್ತಿದ್ದಾರೋ ಎಂಬುದನ್ನು ಅವರ ಆತ್ಮ ಸಾಕ್ಷಿಯಾಗಿ ಅವರು ಹೇಳಲಿ. ನಾನು ತಮ್ಮ ಮೂಲಕ ಹೇಳುತ್ತೇನೆ. ಇದು ಯಾವಾಗ ಆಗಬೇಕಾಗಿತ್ತು? ಯಾವಾಗ ಮುಕ್ತಾಯವಾಗಬೇಕಾಗಿತ್ತು ? ಯಾರು ಇದರ ಹೊಣೆ ? ಮುಂಚೆ ಬಡ್ಜೆಟ್ ನೀವು ಮಂಡಿಸಿಬಿಟ್ಟು ಕೇವಲ 5 ದಿವಸಗಳಲ್ಲಿ ಟೈಮು ತೆಗೆದುಕೊಂಡು ಅದನ್ನು ಪಾಸ್ ಮಾಡಿಕೊಂಡು, ಅಮೇಲೆ 8 ದಿವಸ ಈ ಗೌರ್ನರ್ ಭಾಷಣಕ್ಕೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟು, ಇದನ್ನು ಯಾರು ಡೈರೆಕ್ಟ್ ಮಾಡಬೇಕು ಸ್ವಾಮಿ ? ನಾವು ಡೈರೆಕ್ಟ್ ಮಾಡಬೇಕೇ ? ಇತಿಹಾಸದಲ್ಲಿ ಯಾವತ್ತಾದರೂ ಈ

ರೀತಿ ನಡೆದಿದೆಯೇ ? ಆದರ ಬಗ್ಗೆ ಅವರು ಆತ್ಮ ಪರಿಶೋಧನೆ ಮಾಡಿಕೊಳ್ಳಬೇಕು. ಲೆಜಿಸ್ಲೇಟರ್ಸ್‌ಗೆ, ಏನಿದೆ ಈ ಹಕ್ಕುಗಳು ಇರತಕ್ಕಂಹದ್ದು, ಇದು ಬಹಿರಂಗವಾಗಿ ಚರ್ಚೆಯಾಗಬೇಕೇ ? ಪೇಪರ್‌ಗಳಲ್ಲಿ ಬರಬೇಕೇ ? ನಮಗೆ ಆಯ್ಕೆ ಮಾಡಿದಂತಹ ಮತದಾರರು ಇದನ್ನು ನೋಡಿ ನಗಬೇಕೇ ? Who is there to protect the rights and interests of the legislators ? ಅವರಿಗೆ ಹಕ್ಕುಗಳು ಇವೆ. ನೀವು ಹೇಳುತ್ತಿದ್ದೀರಿ. ಜಿಲ್ಲಾ ಪರಿಷತ್ ಮತ್ತು ತಾಲ್ಲೂಕು ಪಂಚಾಯಿತಿ ಗಳಲ್ಲಿ ಇದ್ದದ್ದು ಏನು ? ಅವರ ಫಂಕ್ಷನ್ಸ್ ಏನು ಎಂಬುದನ್ನು ಬರೆದಿಲ್ಲವೇ ? What are the duties and functions of the legislators ? ಅದನ್ನು ಬರೆದಿಲ್ಲವೇ? Then why do you want to encroach upon the rights of the legislators ? ಅವರಿಗೂ ನಮಗೂ ಜಗಳ ತಂದು ಇಡಬೇಕು ಎಂದೇ? There must be some deadline. ನಾಯಕರು ನೋಡಿದರೆ ಪತ್ರಿಕೆಗಳಲ್ಲಿ, ಲೆಜಿಸ್ಲೇಟರ್ಸ್ ಮೇಲೆ ಅವಹೇಳನದ ರೀತಿಯಲ್ಲಿ ಪ್ರೆಸ್ ಸ್ಟೇಟ್‌ಮೆಂಟ್ ಕೊಡುವುದು, ಇವರಿಗೆ ಏನು ಕೆಲಸ ? ಅಭಿವೃದ್ಧಿ ಕೆಲಸಗಳಲ್ಲಿ ಇವರು ಕೈ ಹಾಕಬಾರದು ಎಂದು ಬಂದಿದೆ. ಪೇಪರ್‌ನಲ್ಲಿ ತಾವು ನೋಡಿದ್ದೀರಿ. ಹಾಗಾದರೆ ಇದರ ಅರ್ಥ ಏನು ? ಇವತ್ತು ಸ್ಟೇಡಿಯಂ ಕಟ್ಟಬೇಕು. ನೀವು ಕಾಂಟ್ರಿಬ್ಯೂಷನ್ ಕೇಳುತ್ತೀರಿ. ನಾವು ನಾಲ್ಕನೆ ಒಂದುಭಾಗದ ಹಣವನ್ನು ಕಾಂಟ್ರಿಬ್ಯೂಷನ್ ಆಗಿ ಕೊಡಬೇಕು. ತಾಲ್ಲೂಕು ಪಂಚಾಯಿತಿಯವರು ಮಾಡಿ ಕೊಡುತ್ತಾರೆ ? ಮತ್ತೆ ಇನ್ಯಾರಾದರೂ ವಸೂಲಿ ಮಾಡಿ ಕೊಡುತ್ತಾರೋ ? ಯಾರೂ ಕೊಡುವುದಿಲ್ಲ. ಆಗ ನಾವು ಅಭಿವೃದ್ಧಿ ಕಾರ್ಯಗಳಿಗೆ ಬಂದಂತಹ ಹಣವನ್ನು ವಾಪಸ್ಸು ಕಳುಹಿಸಬೇಕು. ಅದೇ ರೀತಿ ಎಲ್ಲೆಲ್ಲಿ ಫಂಡ್ಸ್ ವಸೂಲು ಮಾಡಬೇಕಾಗುತ್ತದೆ, ಅಲ್ಲೆಲ್ಲಾ ವಸೂಲು ಮಾಡಬೇಕಾದುದು ನಮ್ಮ ಧರ್ಮ, ವಸೂಲು ಮಾಡಬೇಕಾಗುತ್ತದೆ. ನಾವು ಕಾಂಟ್ರಿಬ್ಯೂಷನ್ ಕೊಡಬೇಕಾಗುತ್ತದೆ. ಕೆಲಸ ಕಾರ್ಯಗಳಾಗಬೇಕಾಗುತ್ತದೆ. We are expected to work along with them. ಅದನ್ನು ಬಿಟ್ಟು ಐಸೋಲೇಟ್ ಆಗಿ ನೀವು ಮಾಡುವ ಕೆಲಸ ಬರೀ ಶಾಸನ. ಹೋಗಲಿ ಇವತ್ತು ಇಲ್ಲಿಗೆ ಬಂದ ಮೇಲೆ ನೀವು ನಾಲ್ಕು ಬಿಲ್ಲುಗಳನ್ನು ಕೊಟ್ಟಿದ್ದೀರಿ. Where is the time for me to study ? ನಿಮ್ಮ ಕೆಲಸವನ್ನೇ ನಾನು ಹೇಳುತ್ತಾ ಇದ್ದೇನೆ. Is it the democratic way in which we are expected to function in this House ? ನೀವು ಕಾನೂನು ಮಂತ್ರಿಗಳಾಗಿ, ಪಾರ್ಲಿಮೆಂಟ್ ಅಫೇರ್ಸ್ ಮಿನಿಸ್ಟರ್ ಆಗಿ ಇದೇನಾ ನೀವು ಡೈರೆಕ್ಷನ್ ಕೊಡುತ್ತಾ ಇರುವುದು ? You still think that you are the Leader of Opposition. You are not considering that you are the Minister for Parliamentary Affairs and Law.

ಶ್ರೀ ಎಂ. ಸಿ. ನಾಣಯ್ಯ : ಮಾನ್ಯ ಸಭಾಧ್ಯಕ್ಷರೆ, ಹಿರಿಯರಾದ ಶ್ರೀ ರಾಮಕೃಷ್ಣರವರು ಒಂದು ನನ್ನ ಮೇಲೆ ಆರೋಪ ಎಂದು ಹೇಳುವುದಿಲ್ಲ, ಅವರ ಚಿಂತನೆಯನ್ನು ಹೇಳಿದ್ದಾರೆ. ಅವರೂ ಕೂಡ ಈ ಹಿಂದೆ ಕಾನೂನು ಮತ್ತು

ಸಂಸದೀಯ ವ್ಯವಹಾರಗಳ ಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ. ನಾನೂ ಕೂಡ ಈ ಸದನದಲ್ಲಿ ಕೂಡ 1978ನೇ ಇಸವಿಯಿಂದ 1983ನೇ ಇಸವಿಯವರೆಗೆ 5 ವರ್ಷ ಕೆಲಸ ಮಾಡಿದ್ದೇನೆ. ವಿರೋಧ ಪಕ್ಷದಲ್ಲಿ ಉಪನಾಯಕನಾಗಿ ಕೂಡ ಕೆಲಸ ಮಾಡಿದ್ದೇನೆ. ಆದರೆ ಈ ಸದನ ನನ್ನ prodecessors in office, Law & Parliamentary affairs ಖಾತೆಯಲ್ಲಿ ಯಾವ ಉಚ್ಛ ಪರಂಪರೆಯನ್ನು ಹಾಕಿಕೊಂಡು ಬಹಳ ವರ್ಷಗಳಿಂದ ಬಂದಿದ್ದಾರೆ, ಅದೇ ಪರಂಪರೆಯನ್ನೂ ನಾನೂ ಸಹ ಮುಂದುವರಿಸಿಕೊಂಡು ಹೋಗುತ್ತೇನೆ. ಅದಕ್ಕೆ ಕಳಂಕ ತರತಕ್ಕ ಯಾವ ಕೆಲಸವನ್ನೂ ನಾನು ಮಾಡಲಿಕ್ಕೆ ತಯಾರಿಲ್ಲ ಎನ್ನತಕ್ಕ ಮಾತನ್ನು ಆಡುತ್ತೇನೆ. What precedents, what traditions you had set up as Minister for Parliamentary affairs while you were functioning, I will not do anything which will undermine that tradition which you have set up.

ಅಧ್ಯಕ್ಷರು : ನೀವೇ ಸ್ಟಾರ್ಟ್ ಮಾಡಿದ್ದು ಎಂದು ಅವರು ಹೇಳುತ್ತಾರೆ.

SRI. Y. Ramakrishna : Never

SRI M.C. Nanaiah : I spoke about the traditions.

ಒಬ್ಬ ಮಾನ್ಯ ಸದಸ್ಯರು : ಶಾಸಕರು ಕೇವಲ ಶಾಸನ ಮಾಡಬೇಕೆಂದು ಯಾರೂ ಹೇಳಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಶಾಸಕರ ಬಗ್ಗೆ ಇಲ್ಲಿ ಪ್ರಶ್ನೆ ಚರ್ಚೆಗೆ ಬಂದಾಗ ಆ ಕಡೆ ಈ ಕಡೆ ಕೂಡ. ತಪ್ಪು ಅಭಿಪ್ರಾಯ ಮಾಡುತ್ತಾ ಇದೆ. ಇಲ್ಲಿ ಶಾಸಕರ ಸವಲತ್ತುಗಳ ಬಗ್ಗೆ ಚರ್ಚೆ ನಡೆಯುತ್ತಿದೆ ಎನ್ನತಕ್ಕ ಅಭಿಪ್ರಾಯ ಮೂಡಿ ಬರುತ್ತಿದೆ. ಇಲ್ಲಿ ವಾಸ್ತವವಾಗಿ ಶಾಸಕರಿಗೆ ಸವಲತ್ತುಗಳು ಬೇಕೆಂದು ಖಂಡಿತವಾಗಿಯೂ ಚರ್ಚೆಯಾಗುತ್ತಿಲ್ಲ. ಈಗಿರತಕ್ಕ ಸವಲತ್ತುಗಳು ಸಾಕಷ್ಟು ಇವೆ. ಆದರೆ ಇಲ್ಲಿ ಪ್ರಶ್ನೆ ಇರತಕ್ಕಹದ್ದು ಅವರ ಜವಾಬ್ದಾರಿಯ ಬಗ್ಗೆ ಅಷ್ಟೇ ಚರ್ಚೆಯಾಗಬೇಕಾಗಿದೆ, ಆ ಜವಾಬ್ದಾರಿಯನ್ನು ಹೇಗೆ ನಿರ್ವಹಿಸಬೇಕು ಎನ್ನುವ ಬಗ್ಗೆ ಸರ್ಕಾರ ಸ್ಪಷ್ಟವಾದ ಧೋರಣೆಯನ್ನು ಅನುಸರಿಸಿದರೆ ಸರಿಹೋಗುತ್ತದೆ. ಇಲ್ಲದಿದ್ದರೆ ಪ್ರತಿ ದಿವಸ ಅಸೆಂಬ್ಲಿಯಲ್ಲಿ ಚರ್ಚೆಯಾಗದೆ ಆಚೆ ಕಡೆ ಜನ ಶಾಸಕರು ಸವಲತ್ತುಗಳಿಗೋಸ್ಕರ ಹೊಡೆದಾಟ ಮಾಡುತ್ತಿದ್ದಾರೆನ್ನುವ ಅಭಿಪ್ರಾಯ ಬಂದಿದೆ. ದಯವಿಟ್ಟು ಅಧ್ಯಕ್ಷರು ತಾವು ಆ ಸಂಶಯವನ್ನು ನಿವಾರಣೆ ಮಾಡಬೇಕೆನ್ನುವುದು ನನ್ನ ಅಭಿಪ್ರಾಯ.

ಶ್ರೀ ವಾಟಾಳ್‌ನಾಗರಾಜ್ : ಮಾನ್ಯ ಅಧ್ಯಕ್ಷರೆ, ನನ್ನ ಕಾಲವನ್ನು ಬೇರೆಯವರು ತೆಗೆದುಕೊಂಡಿದ್ದಾರೆ.

ಅಧ್ಯಕ್ಷರು : ತಾವು ಭಾಷಣ ಪ್ರಾರಂಭ ಮಾಡಿ 50 ನಿಮಿಷಗಳಾಯಿತು.

ಶ್ರೀ ವಾಟಾಳ್ ನಾಗರಾಜ್ : ಆಯಿತು, ಭಾಷಣ ಪ್ರಾರಂಭ ಮಾಡಿ 50 ನಿಮಿಷವಾಯಿತು. 40 ನಿಮಿಷವನ್ನು ಅವರು ತೆಗೆದುಕೊಂಡಿದ್ದಾರೆ. ನನ್ನ ಹಣೆಯಬರಹ ನೋಡಿ. ನಾನು ಅವರಿಗೆ ಅವಕಾಶವನ್ನು ಕೊಡಲೇಬೇಕು, ಈಗ ಸಂಸದೀಯ

ಸಚಿವರು ಎದ್ದರು, ಹಿರಿಯರು ಸಂಸದೀಯ ಸಚಿವರಾಗಿದ್ದರು ಅವರಿಗೆ ನಾನು ಸಮಯ ಕೊಡಲಿಲ್ಲವೆಂದರೆ ಸೌಜನ್ಯಕ್ಕಾದರೂ ಕೊಡಲಿಲ್ಲವೆಂದರೆ ಬಹಳ ಘೋರವಾಗುತ್ತದೆ, ಅದಕ್ಕೋಸ್ಕರ ಕೊಟ್ಟಿದ್ದೇನೆ. ಶ್ರೀಮಾನ್ ನಾಣಯ್ಯನವರು ಸಂಸದೀಯ ಸಚಿವರು ಹೇಳಿದರು, ನೀವು ಹಾಕಿದ ಪರಂಪರೆಯನ್ನು ನಾವು ನೋಡಿಕೊಂಡು ಬರುತ್ತಿದ್ದೇವೆಂದು. ಸ್ವಲ್ಪ ಅವರು ತಮ್ಮ ಶಾಸಕಾಂಗದ ಕಾರ್ಯಾಲಯದಲ್ಲಿ ಕೇಳಿ ಶಾಸನ ಸಭೆಗಳು ಎಷ್ಟೇಷ್ಟು ದಿನ ನಡೆದುಕೊಂಡು ಬಂದಿದೆಯೆಂದು, 92 ದಿನ, 90ದಿನ, 75ದಿನ ಈ ರೀತಿ ಶಾಸನಸಭೆ ನಡೆದಿದೆ. ಒಂದೊಂದು ಬೇಡಿಕೆಯ ಮೇಲೆ ಮೂರು ದಿವಸ ಚರ್ಚೆಯಾಗಿರುವುದುಂಟು. ಒಂದು ಇಲಾಖೆಯ ಬೇಡಿಕೆಯ ಬಗ್ಗೆ ಮೂರು ದಿನ ಸಮಗ್ರವಾಗಿ ಚರ್ಚೆಯಾಗಿರುವುದುಂಟು ಇದು ಹೊಸ ಸಂಪ್ರದಾಯವೇನೂ ಅಲ್ಲ. ಇದು ಆಗಿರುವುದುಂಟು. ವಿಷಯ ಸಮಿತಿಯ ವ್ಯವಸ್ಥೆಗೆ ಅವೆಲ್ಲವನ್ನು ನಾಳೆ ಒಪ್ಪಿಸುತ್ತೀರಿ. ಅಂದರೆ ಒಂದು ಕತ್ತಲೆಯ ಮನೆಗೆ ಹೋಗುತ್ತೀರಿ ಬೆಳಕು ಚೆಲ್ಲುವುದೇನು, ಆ ಕತ್ತಲೆಯ ಮನೆಯಲ್ಲಿ ನಾವು ಕುಳಿತು ಕೊಳ್ಳಬೇಕು. ಅಲ್ಲಿ ಏನು ನಡೆದಿದೆ ಬಿಟ್ಟಿದೆಯೆಂದು ಯಾರಿಗೂ ಗೊತ್ತಾಗುವುದಿಲ್ಲ. ಕೊನೆಯ ದಿವಸ ತಾವು ಸಭೆ ಕರೆದ ದಿವಸ ವರದಿಯನ್ನು ಮಂಡಿಸುತ್ತಾರೆ. ಆ ವರದಿ ಚರ್ಚೆಗೆ ಬರತಕ್ಕದ್ದು ಪ್ರಚಾರಕ್ಕೆ ಬರತಕ್ಕದ್ದು ಬಹಳ ಕಡಿಮೆ. ಅದು ಇರಲಿ, ಅದರ ಬಗ್ಗೆ ಪರ ವಿರೋಧ ಎರಡೂ ಇದೆ. ಸಮಗ್ರವಾಗಿ ಚರ್ಚೆ ಮಾಡುವುದಕ್ಕೆ ಅವಕಾಶವಿದೆ. ಪ್ರಭುದ್ಧವಾಗಿ ಪೂರ್ಣವಾಗಿ ಪಾತಾಳಕ್ಕೆ ಕೈಹಾಕಿ ಚರ್ಚೆ ಮಾಡತಕ್ಕ ವ್ಯವಸ್ಥೆಯಿದೆ. ಈಗ ಮಸೂದೆಗಳು ಇವೆ. ಅದಕ್ಕಾದರೂ ಕಾಲಾವಕಾಶ ಬೇಕು. ಸುದೀರ್ಘವಾಗಿ ಚರ್ಚೆ ಮಾಡುವುದಕ್ಕೆ ಕಾಲಾವಕಾಶ ಬೇಕು. ಸಲಹಾ ಸಮಿತಿಯಲ್ಲಿ ಏನು ನಿರ್ಧಾರವಾಯಿತು ಆ ಪ್ರಕಾರ ನಡೆದುಕೊಂಡರೆ ಒಳ್ಳೆಯದೆಂದು ಮಾನ್ಯ ಗೃಹಮಂತ್ರಿಗಳು ಹೇಳಿದರು. ಸಲಹಾ ಸಮಿತಿ ತಮಗೆ ಗೊತ್ತಿದೆ, ನೀವು ಒಂದು ಡಜನ್ ಜನ ಬರುತ್ತೀರಿ, ನಾವೆಲ್ಲ ನಾಲ್ಕೈದು ಜನ. ಪಾಪ ಅಧ್ಯಕ್ಷರು ಕುಳಿತಿರುತ್ತಾರೆ. ಅವರು ಯಾವ ಕಡೆಗೆ ಹೋಗಬೇಕು. ಅವರ ತಕ್ಕಡಿ ಯಾವ ಕಡೆಗೆ ಹೋಗಬೇಕು. ಅವರು ಕಷ್ಟದ ಇಕ್ಕಟ್ಟಿಗೆ ಸಿಕ್ಕಿ ನೀವು ಏನು ಮಾಡುತ್ತೀರಿ ಅದೆಲ್ಲ ಆಗುವುದಿಲ್ಲ, ನಾಳೆ ಮುಗಿಸಬೇಕು ಏನೇ ಆಗಲಿ ಈ ತರಹ ಒತ್ತಡ ತರುತ್ತೀರಿ. ಸದನದ ಕಾರ್ಯಕಲಾಪ ಸಮಿತಿಯಲ್ಲಿ ಒತ್ತಡ ತರುತ್ತೀರಿ. ಇವೆಲ್ಲದರಿಂದ ನಾವು ಒಂದು ರೀತಿಯಲ್ಲಿ ಇಕ್ಕಟ್ಟಿಗೆ ಸಿಕ್ಕುತ್ತೇವೆ. ಆದರೆ ಸದನದ ಕಾರ್ಯಕಲಾಪ ಸಮಿತಿಯ ಕಾರ್ಯದಂತೆ ನಡೆಯುತ್ತದೆಂದು ನಾನು ಅಂದುಕೊಂಡಿಲ್ಲ. ಅದು ತಮಗೂ ಗೊತ್ತಿದೆ ಅದು ನಡೆಯುವುದಿಲ್ಲ. ಅನೇಕ ಸಂದರ್ಭಗಳಲ್ಲಿ ಅನೇಕ ವಿಚಾರಗಳನ್ನು ಚರ್ಚೆ ಮಾಡಬೇಕಾಗುತ್ತದೆ. ಆದ್ದರಿಂದ ತಮಗೆ ನಾನು ಹೇಳುತ್ತೇನೆ, ಈ ಸದನದ ಸಾರ್ವಭೌಮತ್ವಕ್ಕೆ ಕಳಂಕ ತರತಕ್ಕ ಕೆಲಸವನ್ನು ನಾವಾಗಲೀ ನೀವಾಗಲೀ ಮಾಡುವುದು ಬೇಡ. ಇದಕ್ಕೆ ಎಷ್ಟು ಶಕ್ತಿಯನ್ನು ಕೊಡಬೇಕೋ ಅಷ್ಟು ಶಕ್ತಿಯನ್ನು ಕೊಡುವುದಕ್ಕೆ ನಾವು ಪ್ರಾಮಾಣಿಕವಾಗಿ ಪ್ರಯತ್ನವನ್ನು ಮಾಡಬೇಕು. ಕಾಲಕಾಲಕ್ಕೆ ಲೋಕಸಭೆಯಲ್ಲಿ ಸಭೆಯನ್ನು ಕರೆಯುತ್ತಾರೆ. ನಾವೂ ಸಹ ಆಯಾಯ ಕಾಲಕ್ಕೆ ಸಭೆಯನ್ನು ಕರೆಯತಕ್ಕ ವ್ಯವಸ್ಥೆಯನ್ನು ಮಾಡುವುದಕ್ಕೆ ಸಾಧ್ಯವೆ ಎನ್ನತಕ್ಕ ಮಾತನ್ನು

ಈ ಸಂದರ್ಭದಲ್ಲಿ ಹೇಳುತ್ತೇನೆ. ಇಲ್ಲಿ ಯಾವುದೇ ರಾಜ್ಯ ಪ್ರಗತಿ ಹೊಂದಲು ಕಾನೂನು ಶಾಂತಿ ಪಾಲನೆ-ಇದು ಬಹಳ ಅತಿ ಮುಖ್ಯ ಎನ್ನತಕ್ಕ ಮಾತನ್ನು ಮಾನ್ಯ ರಾಜ್ಯಪಾಲರು ಹೇಳಿದ್ದಾರೆ. ನಾನು ಅದನ್ನು ಒಪ್ಪುತ್ತೇನೆ. ಪೋಲಿಸ್ ಇಲಾಖೆ ಬಹಳ ಅತ್ಯಂತ ಪ್ರಮುಖವಾದಂತಹ ಇಲಾಖೆ. ಈ ಇಲಾಖೆಗೆ ಸಮಗ್ರವಾಗಿ ಕಾಯಕಲ್ಪ ಆಗಬೇಕು. ಈ ಇಲಾಖೆಯಲ್ಲಿ ಯಾವುದೋ ಓಬಿರಾಯನ ಕಾಲದ ವ್ಯವಸ್ಥೆಯಿದೆ. ಅದಕ್ಕೆ ಈ ವ್ಯವಸ್ಥೆ ಬದಲಾವಣೆಯಾಗಬೇಕೆಂದು ಮಾಜಿ ರಾಜ್ಯಪಾಲರಾದ ಧರ್ಮವೀರರವರ ನೇತೃತ್ವದಲ್ಲಿ ಒಂದು ಸಮಿತಿ ನೇಮಕವಾಯಿತು. ಈ ಸಮಿತಿ ತನ್ನ ವರದಿಯನ್ನು ಕೊಟ್ಟು ಎಷ್ಟು ವರ್ಷಗಳಾಗಿದೆ ? ನನಗನಿಸುತ್ತದೆ ಸುಮಾರು 15 ವರ್ಷಗಳಾಗಿರಬಹುದು. ಧರ್ಮವೀರರವರು ಈ ರಾಜ್ಯದ ರಾಜ್ಯಪಾಲರಾಗಿದ್ದರು, ನಂತರ ಅವರ ಏಕಸದಸ್ಯತ್ವ ಸಮಿತಿಯಲ್ಲಿ ಪೋಲೀಸ್ ಇಲಾಖೆ ಸಮಗ್ರವಾಗಿ ಬದಲಾವಣೆಯಾಗಬೇಕೆಂದು ಒಂದು ವರದಿಯನ್ನು ಕೊಟ್ಟರು. ಅವರು ಅತ್ಯಂತ ಒಳ್ಳೆಯ ವರದಿಯನ್ನು ಕೊಟ್ಟಿದ್ದಾರೆ. ಆ ವರದಿ ನಮ್ಮ ಸರ್ಕಾರಕ್ಕೆ ತಲುಪಿ ಎಷ್ಟು ವರ್ಷವಾಗಿದೆ ? ಸ್ವಲ್ಪ ಹೆಚ್ಚು ಕಡಿಮೆ ಎರಡು ದಶಕಗಳಾಗಿರಬಹುದು. ಆ ವರದಿ ಏನಾಯಿತು ? ಆ ವರದಿ ಎಲ್ಲಿದೇ ? ಆ ವರದಿಯ ಬಗ್ಗೆ ತಾವು ಪ್ರಾಮಾಣಿಕವಾಗಿ ಚಿಂತನೆ ಮಾಡಿ ಆ ವರದಿಯನ್ನು ಜಾರಿಗೆ ತರಬೇಕಾದರೆ ನಿಮಗೆ ಎಷ್ಟು ಕಾಲಬೇಕು ? ಎಷ್ಟು ನಿಮಗೆ ಹಣಬೇಕು ಇದನ್ನೆಲ್ಲ ಸ್ವಲ್ಪ ಚಿಂತನೆ ಮಾಡಬೇಕು. ಇತ್ತೀಚಿನ ದಿವಸಗಳಲ್ಲಿ ಏನಾಗಿದೆ ಅಂದರೆ ಆಯೋಗಗಳ ನೇಮಕ, ಆಯೋಗಗಳ ವರದಿ ಕಸದ ಬುಟ್ಟಿಗೆ ಹೋಗುತ್ತಿವೆ. ಆಯೋಗಗಳ ನೇಮಕ ಸಿಕ್ಕಾಪಟ್ಟೆಯಾಗಿದೆ. ನೇಮಕವಾದಂತಹ ಆಯೋಗಗಳು ಸರ್ಕಾರಕ್ಕೆ ವರದಿಗಳನ್ನು ಕೊಟ್ಟಿವೆ. ನಾನಾ ಸಂದರ್ಭಗಳಲ್ಲಿ ಸುಮಾರು 50 ಆಯೋಗಗಳು ರಚನೆಯಾಗಿ ಆಯೋಗಗಳ ವರದಿಗಳು ಮೂಲೆ ಗುಂಪಾಗಿ ಬಿದ್ದಿವೆ. 100 ಆಯೋಗಗಳ ರಚನೆಯಾಗಿದ್ದರೂ ಆಗಿರಬಹುದು. ಈ ಆಯೋಗಗಳ ರಚನೆ ಮಾಡತಕ್ಕ ಉದ್ದೇಶ ಅದರ ಹಿಂದೆ ಎಷ್ಟು ಪ್ರಾಮುಖ್ಯತೆ ಪ್ರಾರಂಭದಲ್ಲಿರುತ್ತದೆ, ಕೊನೆಗೆ ಆಯೋಗದ ವರದಿ ಕಾಲು ಕಸವಾಗಿ ಮೂಲೆಗೆ ಬಿದ್ದಿದೆ. ಆಯೋಗಕ್ಕೆ ಬರತಕ್ಕಂಥವರ ಗೌರವವೇನು ? ನ್ಯಾಯಾಂಗ ತನಿಖೆಗೆಂದು ಆಯೋಗವನ್ನು ರಚನೆ ಮಾಡಿ ಅವರು ಕೊಡತಕ್ಕ ವರದಿಗಳಿಗೆ ನಾವು ಗೌರವ ಕೊಡುವುದಿಲ್ಲವೆಂದರೆ, ನಿಜವಾಗಲೂ ಈ ಆಯೋಗಕ್ಕೆ ಬರತಕ್ಕಂಥವರು ಇನ್ನು ಮುಂದೆ ಕರ್ನಾಟಕದೊಳಗೆ ಯಾವುದೇ ಸಂದರ್ಭದಲ್ಲಿ ಆಯೋಗವನ್ನು ರಚನೆ ಮಾಡಿದಾಗ ಉಚ್ಚನ್ಯಾಯಾಲಯ ನ್ಯಾಯಾಧೀಶರನ್ನು ಕೊಡಿಯೆಂದು ಕೇಳಿದಾಗ ಈ ಸದನದ ಮೂಲಕ ನ್ಯಾಯಾಧೀಶರಲ್ಲಿ ಕೈಮುಗಿದು ಪ್ರಾರ್ಥನೆ ಮಾಡುತ್ತೇನೆ, ಮೊದಲು ಆಯೋಗಗಳು ಕೊಟ್ಟಂತಹ ವರದಿಗಳನ್ನು ಏನು ಮಾಡಿದ್ದೀರಿ ಎಂದು ನೇರವಾಗಿ ಕೇಳಿ. ಆ ವರದಿಗಳನ್ನು ಚಾಚೂ ತಪ್ಪದೆ ಒಪ್ಪಿದ್ದೀರಾ ಎಂದು ಕೇಳಬೇಕು. ನೀವು ಒಪ್ಪಿದ್ದರೆ ನಾವು ಒಪ್ಪಿ ನೀವು ಒಪ್ಪಲಿಲ್ಲವೆಂದರೆ ಕೇಳತಕ್ಕ ಆಯೋಗಗಳಿಗೆ ಅವರು ಬರತಕ್ಕದ್ದು ಒಳ್ಳೆಯ ಸಂಪ್ರದಾಯವಲ್ಲವೆನ್ನುವ ಮಾತನ್ನು ಘಂಟಾಘೋಷವಾಗಿ ನಾನು ಹೇಳುತ್ತಿದ್ದೇನೆ. ಬ್ರಿಟಿಷರ ಸಾಮ್ರಾಜ್ಯಶಾಹಿಯ ಕಾಲದಲ್ಲಿದ್ದಂತಹ ಪದ್ಧತಿ ಇವತ್ತೂ

ಇದೆ. ನನಗನಿಸುತ್ತದೆ, ಪೋಲೀಸ್‌ಸ್ಟೇಶನ್‌ಗಳಿಗೆ ತಾವೊಂದು ಸಾರಿ ಸಂದರ್ಶನ ಮಾಡಬೇಕು. ಅದು ನಿಮ್ಮ ತಾಲ್ಲೂಕಿನಲ್ಲಾಗಲೀ ಅಥವಾ ನನ್ನ ತಾಲ್ಲೂಕಿನಲ್ಲಾಗಲೀ, ಅದು ಏನೂ ಬೇಡ ನೇರವಾಗಿ ವಿಧಾನಸೌಧದ ಹೊರಗಡೆ ಇರತಕ್ಕ ಪೋಲೀಸ್‌ಸ್ಟೇಶ್‌ನ್‌ಗೆ ತಾವು ಸಂದರ್ಶನ ಮಾಡಬೇಕು. ಆ ಬಂದೂಕುಗಳು ಸ್ಟೇಶನ್‌ಗಳಲ್ಲಿ ಹೇಗಿವೆ ಅಂದರೆ ಜನರಿಗೆ ರಕ್ಷಣೆ ಕೊಡಬೇಕಾದ ಸ್ಟೇಶನ್‌ನಲ್ಲಿ ವ್ಯವಸ್ಥೆ ಹೇಗಿದೆಯೆಂದು ಒಂದು ವಿಶ್ಲೇಷಣೆ. ಯಾವುದೋ ಓಬಿರಾಯನ ಕಾಲದ ಬಂದೂಕುಗಳು. ಅವು ಟಿಪ್ಪುಸುಲ್ತಾನ್ ಮತ್ತು ಹೈದರಾಲಿಖಾನ್ ಕಾಲದ ಬಂದೂಕುಗಳು. ಅವುಗಳಲ್ಲಿ ಹೊಡೆದರೂ ಗುಂಡುಗಳು 2 ಅಡಿ ಮುಂದೆ ಹೋಗುವುದಿಲ್ಲ. ಆ ಬಂದೂಕುಗಳಿಗೆ ಸರಪಳಿಯನ್ನು ಹಾಕಿ ಅವು ಇದ್ದಹಾಗೆ ಇವೆ. ಬೀಗ ಹಾಕಿ ಅವುಗಳನ್ನು ಬಂಧಿಸಿದ್ದಾರೆ. ಅದು ತಮಗೆ ಗೊತ್ತು. ಚಳುವಳಿ ಯಾಯಿತು ಅಂದರೆ ಒಬ್ಬ ಕಳ್ಳನನ್ನು ಹಿಡಿಯಬೇಕೆಂದರೆ ಅವುಗಳಿಗೆ ಬೀಗ ಹಾಕಿರುವವನು ಎಲ್ಲಿಯೋ ಹೋಗಿರುತ್ತಾನೆ, ಅವನನ್ನು ಹುಡುಕುವುದರೊಳಗೆ ಕಳ್ಳ ಓಡಿಹೋಗಿರುತ್ತಾನೆ. ಆ ಬಂದೂಕುಗಳ ಗತಿಯೇನು ? ಅವುಗಳು ಹೆಚ್ಚು ಕಡಿಮೆ ತೂಕ ಎಷ್ಟಿರಬಹುದೆಂದರೆ ಮೂರು ಮಣ ಇರಬಹುದು. ಪೋಲೀಸ್‌ನವರಿಗೆ ಇದೊಂದು ಶಿಕ್ಷೆ. ಅದರಲ್ಲಿ ಹೊಡೆದರೆ ಗುಂಡು ಹಾರುವುದಿಲ್ಲ ನೋಡುವುದಕ್ಕೆ ಬಂದೂಕು ಅದು. ಪೋಲೀಸರಿಗೆ ನೀವು ಕೊಡತಕ್ಕ ಪರಮ ಶಿಕ್ಷೆ. ಹೊಸ ಶಸ್ತ್ರಾಸ್ತ್ರಗಳನ್ನು ಕೊಂಡುಕೊಳ್ಳತಕ್ಕ ವ್ಯವಸ್ಥೆಯಿಲ್ಲ. ಹಳೆಯ ಕಾಲದ ಬಿದಿರಿನ ದೊಣ್ಣೆ ಟಿಪ್ಪು ಹೈದರಾಲಿ ಕಾಲದ ಬಂದೂಕುಗಳನ್ನು ಕೊಟ್ಟು ನೀವು ಶಾಂತಿ ಪಾಲನೆ ಮಾಡಲಿಕ್ಕೆ ಸಾಧ್ಯವೇ ಇಲ್ಲ. ಇತ್ತೀಚೆಗೆ ಒಂದು ಪ್ರಯೋಗ ಮಾಡಿದರು ಜನಗಳ ಮೇಲೆ ನೀರು ಬಿಡುವುದು. ರಾಜಭವನದ ಹತ್ತಿರ ಮಾಡಿದರು ಎಂದು ಕಾಣುತ್ತದೆ. ಹೋದ ವರ್ಷ ಅದರ ಆಚೆ ವರ್ಷ.

ಶ್ರೀ. ಜಿ.ವಿ. ಶ್ರೀರಾಮರೆಡ್ಡಿ : ನಾವೇ ಅದಕ್ಕೆ ಪ್ರಥಮ ಬಲಿಪಶುಗಳು. ನಮ್ಮ ಮೇಲೆ ರಾಜಭವನದ ಹತ್ತಿರ ಮೊದಲು ಪ್ರಯೋಗ ಮಾಡಿದರು.

10.50 ಎ.ಎಂ.

ಶ್ರೀ ವಾಟಾಳ್ ನಾಗರಾಜ್ : ನಿಜ, ಪಾಪ. ಅದು ಹೊಸ ಪ್ರಯೋಗ. ಈ ಹೈದರಾಲಿ ಕಾಲದ ಬಂದೂಕುಗಳನ್ನು ಹಿಡಿದುಕೊಂಡು ನಿಯಂತ್ರಣ ಮಾಡುತ್ತೇವೆ ಎಂದರೆ ಅದು ಸಾಧ್ಯವೇನು ? ಇವರು ಏನು ಮಾಡಿದ್ದಾರೆ ಎಂದರೆ ಪ್ರಾಯೋಗಿಕವಾಗಿ ನಮ್ಮ ಸ್ನೇಹಿತರಾದಂಥ ಕಮ್ಯುನಿಸ್ಟ್ ಪಾರ್ಟಿಯವರ ಮೇಲೆ ರಾಜಭವನದ ಮುಂದೆ ನೀರನ್ನು ಹಾಯಿಸಿ ನಿಯಂತ್ರಣ ಮಾಡುವುದಕ್ಕೆ ಪ್ರಯತ್ನಿಸಿದರು. ನಾನು ಹೇಳುತ್ತೇನೆ. ಇದು ಅತ್ಯಂತ ಪಾಶವೀ ಕೃತ್ಯ. ಜನರು ಆದರಲ್ಲೂ ಹೆಣ್ಣುಮಕ್ಕಳು ದಿಕ್ಕಾಪಾಲಾಗಿ ಓಡಿದರು. ಅದನ್ನು ಎಂದಿಗೂ ನೆನೆಸಿಕೊಳ್ಳಲೂಬಾರದು. ಇದು ನಾನು ಕಣ್ಣಾರೆ ನೋಡಿದ್ದುದು. ಹೆಣ್ಣು ಮಕ್ಕಳ ಮೈಮೇಲೆ ನೀರು ಎರೆಚಿದಾಗ ಅವರ ಸೀರೆಯೆಲ್ಲ ನೆನೆದುಹೋಯಿತು. ಇಂತಹ ವ್ಯವಸ್ಥೆಯನ್ನು ಇಟ್ಟುಕೊಂಡು, ಈ ಬಂದೂಕುಗಳನ್ನು ಹಿಡಿದುಕೊಂಡು ನೀವು ಶಾಂತಿ ಪಾಲನೆ ಮಾಡುವುದಕ್ಕೆ ಸಾಧ್ಯವೇ ? ನೀವು

ಸಾಧ್ಯವೆಂದರೆ ಅದು ನಿಮ್ಮ ಹಣೆಬರಹ. ನಾನು ಅದನ್ನು ಒಪ್ಪುವುದಿಲ್ಲ. ಇನ್ನು, ಈ ಪೋಲೀಸ್ ನಾಯಿಗಳು ಏಕೆ ಬೇಕು ? ಅವುಗಳಿಗಾಗಿ ಲಕ್ಷಾಂತರ ರೂಪಾಯಿ ಖರ್ಚಾಗುತ್ತಿದೆ. ಈ ನಾಯಿಗಳಿಂದಾಗಿ ಎಷ್ಟು ಕೊಲೆಪಾತಕರನ್ನು, ಅಪರಾಧಿಗಳನ್ನು ಪತ್ತೆ ಹಚ್ಚಿದ್ದೀರಿ ಸ್ವಾಮಿ ?

ಶ್ರೀ ಪಿ.ಜಿ.ಆರ್. ಸಿಂಧ್ಯ : ದಯಮಾಡಿ ಒಂದು ನಿಮಿಷ ಕುಳಿತುಕೊಳ್ಳಿ. ಸನ್ಮಾನ್ಯ ಅಧ್ಯಕ್ಷರೇ, ಮೊದಲನೆಯದಾಗಿ ವಾಟಾಳ್‌ನಾಗರಾಜ್ ಅವರು ಏನು ಹೇಳುತ್ತಿದ್ದಾರೆ ಎಂದರೆ ಹೈದರಾಲಿ ಕಾಲದ ಗುಂಡು, ಓಬಿರಾಯಕಾಲದ ದೊಣ್ಣೆ ಎಂದು. ನಮ್ಮ ಜನತಾದಳದ ನೀತಿ ನಮ್ಮ ಸರ್ಕಾರದ ತತ್ವ ಏನಪ್ಪ ಎಂದರೆ ಆದಷ್ಟು ಗುಂಡು ಹೊಡಯುವುದನ್ನು ಮಾಡಬಾರದು, ಗುಂಡೇ ಹೊಡಯಬಾರದು ಎನ್ನುವುದು. ಗುಂಡು ಹೊಡೆದು ಶಾಂತಿ ಪಾಲನೆ ಮಾಡುವುದರ ಅರ್ಥ ಏನು? ಆದಷ್ಟು ಅವುಗಳನ್ನು ಕಡಿಮೆ ಉಪಯೋಗಿಸಬೇಕು ಎನ್ನುವುದು ನಮ್ಮ ತತ್ವ. ಎರಡನೆಯದಾಗಿ, ಮಾನ್ಯ ವಾಟಾಳ್ ನಾಗರಾಜ್ ಅವರು ನಮ್ಮ ಜೊತೆ ಬಂದರೆ ತೋರಿಸುತ್ತೇನೆ. ತಾವೇನು ಈಗ ಆಧುನಿಕತೆ ಇಲ್ಲವೆಂದು ಹೇಳುತ್ತಿದ್ದೀರಲ್ಲ, ಅದು ನಿಜವಲ್ಲ. ನಾವು ಎಷ್ಟೊಂದು ಮುಂದುವರೆದಿದ್ದೇವೆ ಎಂದರೆ ಮೂರು ದಿವಸಗಳ ಹಿಂದೆ ನಾನು ಸೆಂಟ್ರಲ್ ರಿಸರ್ವ್ ಪೊಲೀಸ್ ಪೋರ್ಸ್‌ನ ಪೇರೇಡ್‌ನ್ನು ವೀಕ್ಷಣೆ ಮಾಡುವುದಕ್ಕೆ ಹೋಗಿದ್ದೆ. ನಮ್ಮ ದೇಶದಲ್ಲಿ ಇಂತಹ ದುಷ್ಕರ್ಮಿಗಳು, ಸಮಾಜಬಾಹಿರ ಕೃತ್ಯಗಳನ್ನು ನಡೆಸುತ್ತಿರುವ ಇವರು ಇಡತಕ್ಕಂಥ ಬಾಂಬುಗಳು ಹೇಗಿರುತ್ತವೆ ಎಂದರೆ ಎಲ್ಲೋ ಒಂದುಕಡೆ ಬಾಂಬ್ ಇಡುತ್ತಾರೆ. ಎಷ್ಟೋ ದೂರದಲ್ಲಿ ಕುಳಿತುಕೊಂಡು ಅವನು ಚಪ್ಪಾಳೆ ಹೊಡೆದರೆ ಬಾಂಬ್ ಸಿಡಿಯುತ್ತದೆ. ಯಾರೋ ಒಬ್ಬ ನಿರ್ಧಿಷ್ಟವಾದ ವ್ಯಕ್ತಿ ಇಂತಹ ಕಡೆ, ಇಷ್ಟು ಹೊತ್ತಿಗೆ ಮನೆಯಲ್ಲಿ ಕುಳಿತುಕೊಂಡೇ ಟ್ರಾನ್ಸಿಸ್ಟರ್‌ನ್ನು ಆನ್ ಮಾಡುತ್ತಾನೆ. ಅವನು ಆನ್ ಮಾಡಿದತಕ್ಷಣ ಬಾಂಬ್ ಬ್ಲಾಸ್ಟ್ ಆಗುತ್ತದೆ. ಇನ್ನು ನಾಯಿಗಳ ಬಗ್ಗೆ ನೀವು ಹೇಳುತ್ತಿದ್ದೀರಿ. ನಾನು ಅಲ್ಲಿ ಕೇಂದ್ರಸರ್ಕಾರದ ಸೆಂಟ್ರಲ್ ರಿಸರ್ವ್ ಪೋಲೀಸ್ ಅಧಿಕಾರಿಗಳು ಬಂದಾಗ ಅವರನ್ನು ಕೇಳಿದ್ದೆ, ಇಂತಹ ವಸ್ತುಗಳನ್ನು ಪ್ರದರ್ಶನ ಮಾಡಿದ್ದುದು ಸರಿ, ಇದನ್ನು ಕಂಡುಹಿಡಿಯಲಿಕ್ಕೆ ಏನಾದರೂ ಕಂಡುಹಿಡಿದಿದ್ದೀರಾ ಎಂದು ಕೇಳಿದಾಗ ಅವರು ಹೇಳಿದರು ಅದೇನೆಂದರೆ ಇವತ್ತು ಬಾಂಬ್‌ಸ್ಫೋಟ್ ದುಷ್ಕೃತ್ಯಗಳನ್ನು ಕಂಡುಹಿಡಿಯುವುದಕ್ಕೆ ಒಂದೇ ಒಂದು ಸಾಧನೆ ಇರುವುದೆಂದರೆ, ಅದು ಶ್ವಾನದಳದ ನಾಯಿಗಳು. ಇದನ್ನು ಬಿಟ್ಟರೆ ಇನ್ನು ಯಾವುದರ ಮೂಲಕವೂ ನಾವು ಪತ್ತೆ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಅವರು ಹೇಳುತ್ತಾರೆ ಸ್ವಾಮಿ.

ಶ್ರೀ ವಾಟಾಳ್ ನಾಗರಾಜ್ : ಇದು ವಾಸನೆಯನ್ನು ಕಂಡುಹಿಡಿದು ಮಾಡತಕ್ಕಂಥ ವ್ಯವಸ್ಥೆ. ಇದು ಸ್ವಲ್ಪ ತಡವಾದರೆ ಈ ನಾಯಿಗಳು ಹೋಗಿ ಯಾರನ್ನೋ ಹಿಡಿದುಬಿಡುತ್ತವೆ. ತಮ್ಮ ಗಮನಕ್ಕೆ ಒಂದು ಉದಾಹರಣೆಯನ್ನು ಹೇಳುತ್ತಿದ್ದೇನೆ. ಬಹಳ ಹಿಂದೆ ಬೆಂಗಳೂರಿನಲ್ಲಿ ಬೇಲೂರು ಶ್ರೀನಿವಾಸ ಅಯ್ಯಂಗಾರ್ ಎನ್ನುವವರ ಕೊಲೆಯಾಯಿತು. ಆಗ ಈ ಪೋಲೀಸ್ ನಾಯಿಗಳನ್ನು ಊರೆಲ್ಲ ಬಿಟ್ಟರು. ಅದು ಹೋಗಿ ದೊಡ್ಡಬಳ್ಳಾಪುರದ ಹತ್ತಿರ ಯಾರೋ ಮರ ಕಡಿಯುತ್ತಿದ್ದ ಒಡ್ಡರನ್ನು

ಮೂಸಿ ನೋಡಿತು. ಪೋಲೀಸರು ಹೋಗಿ ಅವರಲ್ಲಿ ಒಬ್ಬನನ್ನು ಹಿಡಿದುಕೊಂಡು ಬಂದು ಹಿಗ್ಗಾಮುಗ್ಗ ಒದ್ದರು. ಇವನು ಏನು ಮಾಡುತ್ತಾನೆ? ಕೊಲೆ ಮಾಡಿದವನು ಇನ್ನು ಯಾರೋ. ಈ ತರಹ ನಾಯಿಗಳು ಟೈಮ್ ಮೀರಿದರೆ ನಮ್ಮನ್ನು ಅಥವಾ ನಿಮ್ಮನ್ನು ಮೂಸಿ ನೋಡುತ್ತವೆ. ಆಗ ಪರಿಸ್ಥಿತಿ ಯದ್ವಾತದ್ವಾ ಆಗುತ್ತದೆ. ನೀವು ಪೋಲೀಸ್ ವ್ಯವಸ್ಥೆಯಲ್ಲಿ ನಾಯಿಗಳನ್ನು ಮುಂದಿಟ್ಟುಕೊಂಡು ಈ ವ್ಯವಸ್ಥೆಯನ್ನು ನಡೆಸಬೇಡಿ. ಅದು ನಿಮ್ಮ ವ್ಯವಸ್ಥೆ ಸರಿ ಇರಬೇಕು. ನಮ್ಮ ನಾಯಿಗಳೇ ಅಪರಾಧಿಗಳನ್ನು ಹಿಡಿಯುತ್ತವೆ ಎಂದು ಬಿಟ್ಟರೆ ಕಷ್ಟ. ಕೆಲವು ಸಲ ಇವುಗಳು ನ್ಯಾಯಾಧೀಶರನ್ನೇ ಮೂಸಿ ನೋಡುವುದಕ್ಕೆ ಹೋಗುತ್ತವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಸ್ವಾಮಿ, ವಾಟಾಳ್ ನಾಗರಾಜ್‌ರವರು ನಮ್ಮ ನಾಯಿಗಳಿಗೆಲ್ಲ ಅವಮಾನ ಮಾಡುತ್ತಿದ್ದಾರೆ. ಇವತ್ತು ಅಂತರರಾಷ್ಟ್ರ ಮಟ್ಟದಲ್ಲಿ ಮತ್ತು ರಾಜ್ಯ ಮಟ್ಟದಲ್ಲಿ ಕರ್ನಾಟಕದ ಶ್ವಾನದಳವೆಂದು ಶ್ಲಾಘನೆ ಮಾಡಿ ಸಾವಿರಾರು ಜೀವಿಗಳನ್ನು ರಕ್ಷಣೆ ಮಾಡಿರುವಂಥಾದ್ದು ಇವರ ಗಮನಕ್ಕೆ ಬಂದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನನಗೆ ನಾಯಿಗಳ ಬಗ್ಗೆ ಅಪಾರವಾದ ಗೌರವ ಇದೆ. ನಾನು ಅದನ್ನು ತಳ್ಳಿಹಾಕುವುದಕ್ಕೆ ಹೋಗುವುದಿಲ್ಲ. ನಾನು ಬೆಳಿಗ್ಗೆ ವಿಧಾನಸೌಧವನ್ನು ಸುತ್ತು ಹಾಕುವುದಕ್ಕೆ ಬರುತ್ತೇನೆ. ಕೆಲವರು ನಾಯಿಗಳ ಜೊತೆಗೆ ಇಂಗ್ಲೀಷಿನಲ್ಲಿ ಮಾತನಾಡುತ್ತಾ ಮಮ್ಮಿ ಡ್ಯಾಡಿ ಎನ್ನುತ್ತಾರೆ. ನಾಯಿಗಳ ಬಗ್ಗೆ ಇಷ್ಟು ಪ್ರೀತಿಯಿಂದ ಇಂಗ್ಲೀಷಿನಲ್ಲಿ ಮಾತನಾಡಿಸುತ್ತಾರೆ. ನನಗೆ ನಾಯಿಗಳ ಬಗ್ಗೆ ಪ್ರೀತಿ, ಗೌರವ ಇದೆ. ಆದರೆ ನೀವು ನಾಯಿಗಳನ್ನು ಇಟ್ಟುಕೊಂಡು....

ಡಾ. ಎಚ್. ಸಿ. ಮಹದೇವಪ್ಪ : ಸನ್ಮಾನ್ಯ ಅಧ್ಯಕ್ಷರೇ, ಮನುಷ್ಯರಿಗಿಂತ ನಾಯಿಗಳಿಗೆ ವಾಸನೆಯನ್ನು ಕಂಡುಹಿಡಿಯತಕ್ಕಂಥ ಸಾಮರ್ಥ್ಯ ಹೆಚ್ಚು ಇರುವುದರಿಂದ ಕ್ರಿಮಿನಲ್ ಇನ್ವೆಸ್ಟಿಗೇಶನ್‌ಗೆ ನಾಯಿಗಳನ್ನು ಹೆಚ್ಚು ಉಪಯೋಗಿಸುತ್ತಾರೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್: ನಾಯಿಗಳನ್ನು ಇಂಗ್ಲೀಷಿನಲ್ಲಿ ಮಮ್ಮಿ ಡ್ಯಾಡಿ ಎನ್ನುತ್ತಾರೆ ಎಂದು ಮಾನ್ಯ ಸದಸ್ಯರು ಹೇಳಿದರು. ಇವುಗಳನ್ನು ಸ್ವಲ್ಪ ದಿವಸ ವಾಟಾಳ್ ನಾಗರಾಜ್‌ರವರ ಹತ್ತಿರ ಕಳಿಸಿಕೊಟ್ಟರೆ ಅಮ್ಮ, ಅಮ್ಮ, ಅಪ್ಪ, ಅಪ್ಪ ಅನ್ನುತ್ತವೆಯೋ ಏನೋ!

ಅಧ್ಯಕ್ಷರು : ಒಂದು ಗಂಟೆ ಮುಗಿಯಿತು.

ಒಬ್ಬರು ಮಾನ್ಯ ಸದಸ್ಯರು : ಮಾನ್ಯ ಗೃಹಮಂತ್ರಿಗಳು ನಾಯಿಗಳಿಗೆ ಅವಮಾನ ಆಗುತ್ತಿದೆ ಎನ್ನುವ ಮಾತನ್ನು ಹೇಳಿದರು. ಇಡೀ ರಾಜ್ಯದೊಳಗೆ ಎಷ್ಟು ಜನ ಪೋಲೀಸರು ಸಾವಿರಾರು ರೂಪಾಯಿ ಸಂಬಳ ತೆಗೆದುಕೊಂಡು ನಮ್ಮ ಅಧಿಕಾರಿಗಳ ಮನೆಗಳಲ್ಲಿ ಹೆಣ್ಣುಮಕ್ಕಳ ಬಟ್ಟೆ ಒಗೆಯುತ್ತಿದ್ದಾರೆ ಎಂಬುದು ಅವರಿಗೆ ಗೊತ್ತೇ? ಇನ್ನೂ ಆರ್ಡರ್ಲಿ ಸಿಸ್ಟಮ್ ಈ ರಾಜ್ಯದಲ್ಲಿ ಗುಲಾಮಗಿರಿ ಮೇಯಂಟೇನ್ ಮಾಡಿದ್ದೀರಿ. ಸಾವಿರಾರು ರೂಪಾಯಿ ಸಂಬಳ ಕೊಟ್ಟು ಒಬ್ಬ ಅಧಿಕಾರಿಯ ಮನೆಯ ಹೆಂಡತಿ ಮಕ್ಕಳ ಬಟ್ಟೆ ಒಗೆಯತಕ್ಕಂಥ ದೈನ್ಯಸ್ಥಿತಿಗೆ ಪೋಲೀಸ್ ಕಾನ್‌ಸ್ಟೇಬಲ್‌ಗಳನ್ನು ತೆಗೆದುಕೊಂಡುಬಂದಿದ್ದೀರಿ. ನಾವು ಪ್ರಶ್ನೆ ಕೇಳಿದರೆ 'ಇಲ್ಲ' ಎಂದು ಉತ್ತರ ಕೊಡುತ್ತಾರೆ. ಈ ಆರ್ಡರ್ಲಿ ಸಿಸ್ಟಮ್ ಇದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಪೋಲೀಸ್ ಇಲಾಖೆಯನ್ನು ಡಿಮಾರಲೈಸ್ ಮಾಡುವುದಕ್ಕೆ ಆಗುವುದಿಲ್ಲ. ಗೌರವನ್ವಿತ ಸದಸ್ಯರು ಪೋಲೀಸ್ ಪೇದೆಗಳು ಅಧಿಕಾರಿಗಳ ಮನೆಯಲ್ಲಿ ಅವರ ಮನೆಯವರ ಬಟ್ಟೆ ಒಗೆಯುತ್ತಾರೆ ಎಂದರೆ, ಒಳ್ಳೆಯ ಅಧಿಕಾರಿಗಳೂ ಇಲ್ಲವೇನು? ಹಾಗಾದರೆ ಎಲ್ಲರೂ ಇದನ್ನೇ ಮಾಡುತ್ತಾರೋ ? ಮಾತನಾಡತಕ್ಕಂಥ ಸಂದರ್ಭದಲ್ಲಿ ಯಾವುದಾದರೂ ನಿರ್ಧಿಷ್ಟವಾದ ವಿಷಯ ಇದ್ದರೆ ದಯವಿಟ್ಟು ಅದನ್ನು ನನ್ನ ಗಮನಕ್ಕೆ ತಂದರೆ ಎಸ್.ಪಿ. ಯಾಗಿರಲಿ ಡಿ.ಸಿ. ಯಾಗಿರಲೀ , ಒಬ್ಬ ಅಧಿಕಾರಿಗೆ ಬೇಕಾದಷ್ಟು ಕೆಲಸವನ್ನು ಮಾಡುತ್ತಾರೆ. ಸೂಕ್ಷ್ಮವಾದ ಕೆಲಸವನ್ನು ಕೊಡಬೇಕಾಗುತ್ತದೆ. ದಯಮಾಡಿ ಮಾನ್ಯ ಮಂಜುನಾಥ್ ಅವರಲ್ಲಿ ನಾನು ವಿನಂತಿ ಮಾಡಿಕೊಳ್ಳುವುದು ಏನೆಂದರೆ, ನಿರ್ಧಿಷ್ಟವಾದ ಮಾಹಿತಿ ಇದ್ದರೆ ಹೇಳಿ. ಅದನ್ನು ನಾನು ಎನ್‌ಕ್ವೈರಿ ಮಾಡಿಸುತ್ತೇನೆ, ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು : ಈಗಾಗಲೇ ಒಂದು ಗಂಟೆಯಾಯಿತು. ಸಭಾನಾಯಕರು ಬೇರೆ ಉತ್ತರ ಕೊಡುತ್ತಾರೆ. ಇನ್ನು ಶ್ರೀ ಖರ್ಗೆಯವರು ಮಾತನಾಡಬೇಕು. ತಾವು ಯೀಲ್ಡ್ ಆದರೆ ವೈಯಕ್ತಿಕವಾಗಿ ತಮ್ಮ ಸಮಯ ಹೋಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ನಾನು ಸೌಜನ್ಯಕ್ಕೆ ಕಟ್ಟುಬಿದ್ದು ನನ್ನ ಪರಿಸ್ಥಿತಿ ಎಡವಟ್ಟಾಗುತ್ತಿದೆ. ಮಾನ್ಯ ಅಧ್ಯಕ್ಷರೇ, ಈ ವ್ಯವಸ್ಥೆಯನ್ನೇ ಸರಿಪಡಿಸುವಂಥ ಒಂದು ಪರಿಣಾಮಕಾರಿಯಾದಂಥ ಕ್ರಮವನ್ನು ಇವರು ಅನುಸರಿಸಬೇಕು ಎಂದು ಹೇಳುತ್ತಿದ್ದೇನೆ. ಈಗ ತಮಗೆ ಗೊತ್ತಿದೆ, ಈ ಪೋಲೀಸ್ ಸ್ಟೇಷನ್‌ಗಳ ಬಗ್ಗೆ ಈಗಾಗಲೇ...

ಅಧ್ಯಕ್ಷರು: ಇನ್ನು ಎಷ್ಟು ಹೊತ್ತು ನಿಮಗೆ ಬೇಕಾಗುತ್ತದೆ ಅಂದಾಜು?

ಶ್ರೀ ವಾಟಾಳ್ ನಾಗರಾಜ್ : ಒಂದು ಮೂವತ್ತು ನಿಮಿಷ.

ಅಧ್ಯಕ್ಷರು : ಬಹಳ ಲೇಟಾಯಿತು. ಈಗಾಗಲೇ ಒಂದು ಗಂಟೆ ಐದು ನಿಮಿಷ ಆಯಿತು. ತಮ್ಮದಾದ ಮೇಲೆ ಕಾಂಗ್ರೆಸ್ ಪಕ್ಷದ ಮುಖಂಡರಾದ ಶ್ರೀ ಖರ್ಗೆಯವರು ಮಾತನಾಡಲಿದ್ದಾರೆ. ಎಲ್ಲರೂ ಕೈಯೆತ್ತಿದ್ದರೆ ನಾನು ಏನು ಮಾಡುವುದಕ್ಕಾಗುತ್ತದೆ? ದಯಮಾಡಿ ನನ್ನ ಪರಿಸ್ಥಿತಿಯನ್ನೂ ನೀವು ಅರ್ಥಮಾಡಿ ಕೊಳ್ಳಬೇಕು. ಒಂದು ಗಂಟೆ ಐದು ನಿಮಿಷ ಆಗಿದೆ. ಇನ್ನೂ ಒಬ್ಬರದ್ದೇ ಮುಗಿಸುವುದಕ್ಕೆ ಆಗಿಲ್ಲ. ಇನ್ನು ಶ್ರೀಮಾನ್ ಖರ್ಗೆಯವರು ಮಾತನಾಡಬೇಕಾಗಿದೆ. ಸಭಾನಾಯಕರು ಇವತ್ತೇ ಉತ್ತರ ಕೊಡಬೇಕೆಂದು ತೀರ್ಮಾನ ಮಾಡಿದ್ದಾರೆ. ಎಲ್ಲರೂ ಕೈ ಎತ್ತಿದರೆ ನಿಮಗೆಲ್ಲರಿಗೂ ಸಹಕರಿಸಬೇಕೆಂದು ನನಗೆ ಆಸೆ ಇದೆ. ಆದರೆ ಅವಕಾಶ ಇಲ್ಲ. ಮತ್ತೆ ಸಾಯಂಕಾಲದ ಹೊತ್ತು ಮಾತನಾಡಿ ಎಂದರೆ ಎಲ್ಲರೂ ಎದ್ದುಹೋಗಿ ಬಿಡುತ್ತೀರಿ, ನಾಳೆ ನಾಳೆ ಎಂದು ಹೇಳುತ್ತೀರಿ.

ಒಬ್ಬರು ಮಾನ್ಯ ಸದಸ್ಯರು : ಸ್ವಾಮಿ, ನಮಗೂ ಅವಕಾಶ ಕೊಡಿ.

ಅಧ್ಯಕ್ಷರು : ಮುಂದಿನ ಸಲ ರಾಜ್ಯಪಾಲರ ಭಾಷಣದಲ್ಲಿ ಅವಕಾಶ ಕೊಡೋಣ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಪೋಲಿಸ್ ಸ್ಟೇಷನ್‌ಗಳ ಬಗ್ಗೆ ತಮ್ಮ ಗಮನಹರಿಸಬೇಕೆಂದು ಹೇಳಿದೆ. ತಾವೇನೋ ಸ್ವಲ್ಪ ಈ ಟೈಮಿನ ಗೊಂದಲದಲ್ಲಿದ್ದೀರಿ. ಇದರಿಂದ, ತಮ್ಮ ಮನಸ್ಸಿಗೆ ನೋವಾಗುವುದಾದರೆ ನಾನು ಮುಂದುವರಿಸುವುದಕ್ಕೆ ಹೋಗುವುದಿಲ್ಲ.

ಅಧ್ಯಕ್ಷರು : ನೀವು ಮಾತನಾಡಿ ನಿಮ್ಮ ಸಮಯದಲ್ಲಿ ಅರ್ಧ ಭಾಗವನ್ನು, ಬೇರೆಯವರು ತೆಗೆದುಕೊಂಡಿದ್ದಾರೆ ಅದಕ್ಕೆ ಬೇಗ ಮುಗಿಸಿ.

ಒಬ್ಬ ಮಾನ್ಯ ಸದಸ್ಯರು : ತಮಗೆ ವಾಟಾಳ್ ನಾಗರಾಜ್‌ರವರನ್ನು ನೋಡಿದ ತಕ್ಷಣ ತುಂಬಾ ಸಂತೋಷವೆಂದು ಕಾಣುತ್ತದೆ.

ಅಧ್ಯಕ್ಷರು : ನನಗೆ ಒಳ್ಳೆಯವರನ್ನು ಕಂಡರೆ, ಯಾವಾಗಲೂ ಪ್ರೀತಿ.

ಶ್ರೀ ವಾಟಾಳ್ ನಾಗರಾಜ್ : ತಮಗೆ ಅಭಿನಂದನೆಗಳು. ನಾನು ತಮಗೆ ಹೇಳುತ್ತೇನೆ, ಈ ಸಾಮಾಜಿಕ ವ್ಯವಸ್ಥೆಯಲ್ಲಿ, ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ, ಎಲ್ಲಾ ಪೋಲೀಸ್ ಸ್ಟೇಷನ್ ವಿಚಾರ ಮಾತನಾಡುತ್ತಾರೆ ಎಂದಲ್ಲ. ಇದು ಸಾಮಾನ್ಯ ಜನಗಳಿಗೆ ಬೇಕಾಗಿರತಕ್ಕಂಥ, ಅತ್ಯಂತ ಪ್ರಾಮುಖ್ಯವಾದ ವಿಚಾರ. ಈ ವಿಚಾರವನ್ನು ಹೇಳಲೇಬೇಕು. ಪೋಲೀಸ್ ಸ್ಟೇಷನ್ ವಿಚಾರವಾಗಿ ಮೊದಲನೆಯದು, ಈ ಪೋಲಿಸ್ ಇಲಾಖೆಯ ಹೆಸರನ್ನು ಬದಲಾವಣೆ ಮಾಡಿರುವುದರಿಂದ, ನಿಮಗೆ ಆ ಶಕ್ತಿ ಕುಂದಿದೆ. ಈ '''ಆರಕ್ಷಕ'' ಎಂಬುದನ್ನು ತೆಗೆದುಹಾಕಿ. ಆಮೇಲೆ, '' ನಿರೀಕ್ಷಕ'' ಮತ್ತೆ ಸರ್ಕಲ್ ಇನ್‌ಸ್ಪೆಕ್ಟರ್ ಎನ್ನುವುದಕ್ಕೆ ''ವೃತ್ತ ನಿರೀಕ್ಷಕರು'' ಎಂದು ಏನೇನೋ ಬಹಳವಾಗಿದೆ. ಆದರೆ, ಈ ಅರಕ್ಷಕ ಎನ್ನುವ ಪದವನ್ನು ತೆಗೆದು ಪೋಲಿಸ್ ಎನ್ನುವುದನ್ನೇ ಇಡಿ. ಇದರಿಂದ ತಪ್ಪೇನೂ ಆಗುವುದಿಲ್ಲ. ಇದು ನಿಮ್ಮಿಂದಲೇ ಪ್ರಾರಂಭವಾಗಲಿ. ಪೋಲಿಸ್ ಎನ್ನತಕ್ಕಂತಾದ್ದು ಕನ್ನಡ ಪದವೇ, ಅದನ್ನು ಕನ್ನಡಕ್ಕೆ ಅಳವಡಿಸಿಕೊಳ್ಳೋಣ. ಏಕೆಂದರೆ ಇದು ಜನಸಾಮಾನ್ಯರ ಆಡುಭಾಷೆ, ಇದನ್ನು ಕನ್ನಡಕ್ಕೆ ಅಳವಡಿಸಿಕೊಳ್ಳೋಣ. ಇಲ್ಲದಿದ್ದರೆ, ಏನಾಗುತ್ತದೆ, ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ಶಬ್ಧಕೋಶದಲ್ಲಿ, ನಮಗೆ ಅರ್ಥವಾಗದೇ ಇರತಕ್ಕ ಅನೇಕ ವಿಚಾರಗಳು ಇದ್ದು ಅವುಗಳಲ್ಲಿ ಮಾನ್ಯ ಅಧ್ಯಕ್ಷರ ಗಮನಕ್ಕೆ ಒಂದು ವಿಚಾರವನ್ನು ತರುತ್ತಿದ್ದೇನೆ. ''ಪ್ರಾರೂಪಕಾರ'' ಎನ್ನುವುದು ಎಷ್ಟು ಜನರಿಗೆ ಅರ್ಥವಾಗುತ್ತದೆ? ಇದು ಬಹಳ ಕಷ್ಟವಾದ ಪದ. ಈ ಪ್ರಾರೂಪಕಾರ ಎಂಬುದು ''ಪರೋಪಕಾರ'' ಎಂದ ಹಾಗೆ ಆಗುತ್ತದೆ. ಡ್ರಾಫ್ಟ್‌ಮೆನ್‌ಗೆ ಪ್ರಾರೂಪಕಾರ ಎಂಬುದು, ನೆಗದುಬಿದ್ದುಹೋಯಿತು, ಅದೇನೆಂದು ಅರ್ಥವೇ ಆಗುವುದಿಲ್ಲ. ಮತ್ತು ''ವಾದೇಕ್ಷಕರು'' ಅವರು ಯಾರು? ನಾನು ತಮಗೆ ಏಕೆ ಹೇಳುತ್ತಿದ್ದೇನೆಂದರೆ, ಕನ್ನಡ ಶಬ್ಧಕೋಶ ಶ್ರೀಮಂತವಾಗಬೇಕು. ಇಂಗ್ಲೀಷಿನ ಆಡುಭಾಷೆಗಳೇನಿವೆ, ಇದನ್ನು ಬಹಳ ಮಡಿವಂತಿಕೆ ಮಾಡಿಕೊಂಡು, ತಪ್ಪಿಸಿಕೊಂಡು ಹೋಗತಕ್ಕ ವ್ಯವಸ್ಥೆಗೆ ಹೋಗಬಾರದು. ಕೆಲವು ಪದಗಳನ್ನು ಪ್ರಾಮಾಣಿಕವಾಗಿ ಇಟ್ಟುಕೊಳ್ಳಬೇಕು. ಈಗ ರೈಲ್ವೆ ಎಂದರೆ ಏನು, ರೈಲ್ವೆ ಬಂಡಿ ಎಂದರೆ ಏನು, ಗೂಡ್ಸ್ ಎಂದರೆ ಏನು, ಗೂಡ್ಸ್ ಚೀಲ ಎಂದರೆ ಏನು ಇವುಗಳಿಗೆಲ್ಲಾ ಹೇಳಬೇಕಾದರೆ, ಬಹಳ ತಾಪತ್ರಯವಾಗುತ್ತದೆ. ಆದ್ದರಿಂದ ನಮ್ಮ ಭಾಷೆಯನ್ನು ಶ್ರೀಮಂತಗೊಳಿಸಬೇಕಾದರೆ ಮೊದಲನೆಯದಾಗಿ ಈ ಆಡುಭಾಷೆಗಳನ್ನು ಉಳಿಸಿಕೊಳ್ಳಬೇಕು. ಈ ಪೋಲೀಸ್ ಎನ್ನತಕ್ಕಂತಾದ್ದು ಸಾಮಾನ್ಯ ಜನರಿಗೆ ಅರ್ಥವಾಗತಕ್ಕ ಭಾಷೆ. ಈ ಭಾಷೆಯನ್ನು ತಾವು ಆರಕ್ಷಕ ಎಂದರೆ ಅರ್ಥವಾಗುವುದು ಕಷ್ಟವಾಗುತ್ತದೆ. ಅಂದರೆ, ಒಂದೊಂದು ಸಾರಿ ಇದು ಆರಕ್ಷಕ ಅಲ್ಲದವನೇನೋ ಎಂಬ ಅರ್ಥ ಬರುತ್ತದೆ. ಈ ಆರಕ್ಷಕ-

ರಕ್ಷಕ, ಕೆಲವರು ನನ್ನನ್ನು ಬೈದರೂ ಬೈಯ್ದುಕೊಳ್ಳಬಹುದು. ವಾಟಾಳ್ ನಾಗರಾಜ್‌ರು ನಮಗೆ ಯಾವುದೋ ಭಾಷೆಯನ್ನು ತಿರುಚಿ, ಮುರಿಚಿ ಹೇಳುತ್ತಿದ್ದಾರೆ ಎಂದು. ಇಲ್ಲಿ ಪ್ರಶ್ನೆ ಅದಲ್ಲ. ಜನರಿಗೆ ಅರ್ಥವಾಗತಕ್ಕ ರೀತಿಯಲ್ಲಿ ಮಾಡತಕ್ಕಂಥಾದ್ದು ನಮ್ಮ ಕರ್ತವ್ಯ ಅದರ ಜೊತೆಗೆ ಪೋಲೀಸ್ ಸ್ಟೇಷನ್‌ಗಳ ಬಗ್ಗೆ ಮಾನ್ಯ ಗೃಹಮಂತ್ರಿಗಳಿಗೆ ಹೇಳುತ್ತೇನೆ. ಈ ಪೋಲಿಸ್ ಸ್ಟೇಷನ್ ಎಂದರೆ ಏನು? ಮೊದಲು ಜನಸಾಮಾನ್ಯರು ಅಥವಾ ಯಾರೇ ನಾಗರೀಕರು ಸ್ಟೇಷನ್‌ಗೆ ಹೋದಾಗ, ಮೊದಲು ಅವರಿಗೆ ಗೌರವವನ್ನು ಕೊಡುವುದನ್ನು ಪೋಲೀಸಿನವರು ಕಲಿಯಬೇಕು, ಇದು ಅವರ ಕರ್ತವ್ಯ. ಇವತ್ತು ಪೋಲೀಸರು ಎಲ್ಲರನ್ನೂ ಒಂದೇ ರೀತಿಯಿಂದ ಕಾಣಬಾರದು. ಲಾಕಪ್ಪಿನಲ್ಲಿ ಯಾರನ್ನು ಇಡುತ್ತಾರೆ, ಅದೇ ರೀತಿಯಲ್ಲಿ ಬೇರೆ ಯಾರೇ ನಾಗರೀಕರನ್ನು ಕಾಣಬಾರದು. ಮತ್ತು ಈ ಲಾಕಪ್ ವ್ಯವಸ್ಥೆಯಿದೆಯಲ್ಲ, ಇದನ್ನು ತಾವು ದಯಮಾಡಿ ನೋಡಬೇಕು. ಇದು ಬದಲಾವಣೆಯಾಗಬೇಕು. ಈ ಲಾಕಪ್ ಎಂದರೆ, ಅತ್ಯಂತ ಕಠೋರವಾದ ಸ್ಥಳ. ಎಲ್ಲಾ ವ್ಯವಸ್ಥೆಯೂ ಅಲ್ಲಿಯೇ. ಇದರ ಬದಲಾವಣೆ ಆಗಲೇಬೇಕು. ಮತ್ತು ಪೋಲೀಸ್ ಸ್ಟೇಷನ್‌ನಲ್ಲಿ, ಒಂದು ಸ್ಟೇಷನ್ ಎಂದರೆ ಏನು? ಸ್ವಾಮಿ, ಆ ಊರಿನಲ್ಲಿರತಕ್ಕ ಎಲ್ಲಾ ಹಳೆಯ ಸಾಮಾನುಗಳನ್ನು ತುಂಬುತ್ತಾರೆ. ಕಳ್ಳಭಟ್ಟಿ, ಹಂಡೆ, ಮತ್ತು ಕಳ್ಳಭಟ್ಟಿ ರಬ್ಬರ್ ಕೊಳವೆ, ಗಡಿಯಾರ ಮತ್ತು ವಾಚ್‌ಗಳು ಈ ತರಹ ಸಾಮಾನುಗಳು ತುಂಬಿರುತ್ತವೆ. ನನಗನಿಸುತ್ತದೆ, ಒಂದು ಪೋಲೀಸ್ ಸ್ಟೇಷನ್ ಎಂದರೆ, ಅದರ ವ್ಯವಸ್ಥೆ ಹೇಗಿರಬೇಕೆಂದರೆ, ನೋಡಿದವರು ಬಹಳ ಚೆನ್ನಾಗಿದೆ ಎಂದು ಹೇಳಬೇಕು. ನಾಗರೀಕರು ಪೋಲೀಸ್ ಸ್ಟೇಷನ್‌ಗೆ ಹೋದರೆ, ಚೆನ್ನಾಗಿದೆ ಎಂದು ಮಾತನಾಡಿಕೊಳ್ಳಬೇಕು. ಒಂದು ಕಡೆ ಇದೊಂದು ಕೆಟ್ಟ ದೃಶ್ಯ, ಮತ್ತೊಂದು ಕಡೆ ಈ ಪೋಲೀಸ್ ಭಾಷೆ ಇದೆಯಲ್ಲ, ಈ ಭಾಷೆಯ ಬಗ್ಗೆಯೂ ಸ್ವಲ್ಪ ಬದಲಾವಣೆ ಮಾಡಬೇಕು. ಪೋಲೀಸರು ಮಂತ್ರಿಗಳ ಎದುರುಗಡೆ ನಮಸ್ಕಾರ ಹಾಕುವುದು, ನಿಮ್ಮ ಜೊತೆ ನಡೆ ನುಡಿ ಮತ್ತು ನಮ್ಮ ಜೊತೆ ನಡೆ ನುಡಿ ಚೆನ್ನಾಗಿರಬೇಕು, ಇದು ಅಲ್ಲ. ಇದು ಜನಸಾಮಾನ್ಯರ ಜೊತೆಯಲ್ಲಿ ಇರಬೇಕು. ಒಳ್ಳೆಯ ಭಾಷೆ ಜನಸಾಮಾನ್ಯರ ಜೊತೆಯಲ್ಲಿ ಇರಬೇಕಾದ್ದು ಕರ್ತವ್ಯ. ಆ ರೀತಿ ಇರಲಿಲ್ಲವೆಂದರೆ, ನನಗನ್ನಿಸುತ್ತದೆ, ಅದು ಒಳ್ಳೆಯ ಸಂಪ್ರದಾಯ ಅಲ್ಲ, ಇದು ಒಳ್ಳೆಯ ಮಾರ್ಗದರ್ಶನ ಅಲ್ಲ ಇನ್ನು ತಮಗೆ ಗೊತ್ತಿರುವ ಹಾಗೆ ಈ ಕನ್ನಡ ಕವಿಗಳ ವಿಚಾರ ನನಗನ್ನಿಸುತ್ತದೆ, ಅನೇಕ ಜನ ಚಿತ್ರ ಸಾಹಿತಿಗಳು ಇದ್ದಾರೆ. ಉದಾಹರಣೆಗೆ, ಖರೀಂಖಾನ್‌ರನ್ನು ತಮ್ಮ ಗಮನಕ್ಕೆ ತರುತ್ತೇನೆ. ಈ ತರಹ ಸಾವಿರಾರು ಜನ ಚಿತ್ರ ಸಾಹಿತಿಗಳು ಈ ನಾಡಿನಲ್ಲಿದ್ದಾರೆ. ಮತ್ತು ಕನ್ನಡ ಚಿತ್ರರಂಗಕ್ಕೆ ಅಪಾರವಾದ ಸೇವೆಯನ್ನು ಮಾಡಿರುವವರಿಗೆ ಸರ್ಕಾರದವರು ವಿಶೇಷ ಗೌರವಧನವನ್ನು ಕೊಡಬೇಕು, ಕೊಡತಕ್ಕ ವ್ಯವಸ್ಥೆಯಾಗಬೇಕು ನಾನು ನೇರವಾಗಿ ಖರೀಂಖಾನರನ್ನು ಕುರಿತು ಈ ಸಂದರ್ಭದಲ್ಲಿ ಮಾತನಾಡುತ್ತೇನೆ. ಕನ್ನಡ ಚಿತ್ರರಂಗಕ್ಕೆ ಅವರು ಕೊಟ್ಟಂಥ ಕೊಡುಗೆ ಅಪಾರವಾದುದು. ಖರೀಂಖಾನರಿಗೆ ಸುಮಾರು 80-81 ವರ್ಷ ಮೇಲಾಗಿದೆ. ಇಂಥಹವರನ್ನು ಸರ್ಕಾರದವರು ಆಸ್ತಿ ಎಂದು ಮಾಡಿಕೊಳ್ಳಬೇಕು. ಮತ್ತು ಅವರಿಗೆ ಎಲ್ಲಾ ರೀತಿಯ, ಸಂಪೂರ್ಣವಾದ ಸೌಲಭ್ಯವನ್ನು ಕೊಡಬೇಕೆಂಬ ಮಾತನ್ನು ಹೇಳುತ್ತೇನೆ. ಮತ್ತೊಂದು,

ಕೊನೆಯದಾಗಿ ನಾನು ಮುಗಿಸಿಬಿಡುತ್ತೇನೆ. ಈ ಕುಟುಂಬ ಕಲ್ಯಾಣ, ಇದು ಒಂದು ರೀತಿ ಪ್ರಚಾರ ವಸ್ತುವಾಗಿದೆಯೇ ಹೊರತು, ಪ್ರಾಮಾಣಿಕತೆ ಇಲ್ಲ. ''ಒಂದು ಮಗು ಬೇಕು ಮತ್ತು ಎರಡು ಮಗು ಸಾಕು '' ಎಂದು ಎಲ್ಲಾ ಕಡೆ ಬರೆಯುತ್ತಾರೆ. ಲಾರಿಗಳ ಹಿಂದೆ, ಕಾರುಗಳ ಹಿಂದೆ, ಗೋಡೆಯ ಮೇಲೆ ರಸ್ತೆಯ ಮೇಲೆ ಎಲ್ಲೆಲ್ಲಿಯೂ ಬರೆಯುತ್ತಾರೆ. ಇದು ಬರವಣಿಗೆ ರೂಪದಲ್ಲಿ ಇದೆ. ಇದರ ಬಗ್ಗೆ ನನ್ನದೊಂದು ಸಲಹೆ ಇದೆ. ಇದು ಚುನಾವಣೆಯ ಕಾಯಿದೆಯಲ್ಲಿಯೂ ಕೂಡ ತಿದ್ದುಪಡಿಯಾಗಬೇಕು. ಮಂತ್ರಿಯಾಗುವವರು, ಪ್ರಧಾನ ಮಂತ್ರಿಯಾಗುವವರು, ಲೋಕಸಭಾ ಸದಸ್ಯರಾಗುವವರು, ಶಾಸಕರಾಗುವವರು, ಗ್ರಾಮ ಪಂಚಾಯಿತಿ ಅಧ್ಯಕ್ಷರಾಗುವವರು ಹೀಗೆ ಎಲ್ಲಾ ವರ್ಗದ ಜನರು, ಎರಡು ಮಕ್ಕಳ ಮೇಲೆ, ಮೂರನೇ ಮಗುವಾದರೆ, ಅವರು ಚುನಾವಣೆಗೆ ನಿಲ್ಲುವುದಕ್ಕೆ ಅಧಿಕಾರ ಇಲ್ಲ ಎಂಬುದನ್ನು ತರಬೇಕು. ಇದು ನಿಮ್ಮಿಂದಲೇ ಪ್ರಾರಂಭವಾಗಬೇಕು. ಇದು ಬಿಟ್ಟು ದೇಶಕ್ಕೆಲ್ಲಾ ವೇದಾಂತ ಹೇಳುತ್ತೀರಿ. ನೀವು ವೇದಾಂತ ಹೇಳುವುದರಿಂದ ಅರ್ಥವಿಲ್ಲ, ಪ್ರಾಮಾಣಿಕತೆ ಇಲ್ಲ. ಸುಮ್ಮನೆ, ಗೋಡೆ ಮೇಲೆ ಬರೆಯುವುದು, ಲಾರಿ ಮೇಲೆ ಬರೆಯುವುದು, ಇನ್ನೊಬ್ಬರಿಗೆ ಪುರಾಣ ಹೇಳುವುದು, ಬದನೇಕಾಯಿ ತಿನ್ನವುದು ಇದು ಬೇಡ. ನಿಮ್ಮಲ್ಲಿ ಪ್ರಾಮಾಣಿಕತೆ ಇದ್ದರೆ, ''ನಾವಿಬ್ಬರು , ನಮಗಿಬ್ಬರು'' . . . .

ಒಬ್ಬ ಸದಸ್ಯರು : ಈಗ ನಾವಿಬ್ಬರು ನಮಗೊಬ್ಬರು ಎಂದು ಬರೆಯುತ್ತಿದ್ದಾರೆ. ನೀವು ಹೇಳುತ್ತಿರುವುದು ಬಹಳ ಮುಖ್ಯವಾದ ಪ್ರಶ್ನೆ.

ಶ್ರೀ ವಾಟಾಳ್ ನಾಗರಾಜ್: ಇದು ಹಾಸ್ಯವಾಗಿ ತೆಗೆದುಕೊಳ್ಳುವಂಥಾದ್ದಲ್ಲ. ಪ್ರಾಮಾಣಿಕತೆ ಇಲ್ಲದಿದ್ದರೆ, ಇದನ್ನು ಮಾಡುವುದಕ್ಕಾಗುವುದಿಲ್ಲ. ನೀವು ಇದು ಸರಿ ಇಲ್ಲವೆನ್ನತಕ್ಕ ರೀತಿ ಹೇಳುವುದಾದರೆ ಬಿಡಿ. ಅದರ ಬಗ್ಗೆ ನಾನು ತಕರಾರು ಎತ್ತುವುದಕ್ಕೆ ಹೋಗುವುದಿಲ್ಲ. ಇದು ನನ್ನ ಸಲಹೆ. ಸ್ವಾಮಿ ಒಂದು ಮಾತು ಹೇಳುವುದಾದರೆ ಕನ್ನಡ ವಿಶ್ವವಿದ್ಯಾನಿಲಯವನ್ನು ಪ್ರಾರಂಭ ಮಾಡಿದವರು ಶ್ರೀಮಾನ್ ವೀರಪ್ಪಮೊಯಿಲಿಯವರು. ಹಂಪಿಯಲ್ಲಿ ಕನ್ನಡ ವಿಶ್ವವಿದ್ಯಾನಿಲಯವನ್ನು ಪ್ರಾರಂಭ ಮಾಡಲಿಕ್ಕೆ ಸವಲತ್ತುಗಳನ್ನು ಒದಗಿಸಿಕೊಟ್ಟರು. ಆದರೆ ಹೊಸ ಸರ್ಕಾರ ಬಂದ ನಂತರ ಒಂದು ಸಮಾರಂಭ ಮಾಡಿದ್ದರು. ತಮಗೆ ನಾನು ಹೇಳುತ್ತೇನೆ ಸಮಾರಂಭ ಮಾಡಿದವರು ಅವರನ್ನು ಕರೆಯತಕ್ಕಂಥ ಒಂದು ಸೌಜನ್ಯ ಕೂಡ ತೋರಿಸಲಿಲ್ಲ. ಹೊಸ ಸರ್ಕಾರ ಬಂದ ತಕ್ಷಣ ಯಾವ ರೀತಿ ಅಧಿಕಾರಿಗಳ ಧೋರಣೆ ಬದಲಾವಣೆಯಾಗುತ್ತದೆ ಎನ್ನುವುದಕ್ಕೆ ಒಂದು ಉದಾಹರಣೆ. ಹಂಪಿ ವಿಶ್ವವಿದ್ಯಾನಿಲಯವನ್ನು ಮಾಡುವಾಗ ಅವರನ್ನು ಹಗಲು ರಾತ್ರಿ ಕರೆದುಕೊಂಡು ಹೋಗಿ ಮೆರವಣಿಗೆಯನ್ನು ಮಾಡಿದ್ದೇ ಮಾಡಿದ್ದು. ಹೊಸ ಸರ್ಕಾರ ಹೊಸ ಮುಖ್ಯಮಂತ್ರಿಗಳು ಬಂದ ಕೂಡಲೇ ಅವರಿಗೆ ಬೇಕಾದವರನ್ನೆಲ್ಲಾ ಕರೆಯಲಿ ಬೇಡ ಎಂದು ಹೇಳುವುದಿಲ್ಲ ಆದರೆ ಅವರನ್ನು ಕೂಡ ಕರೆದು ಮುಖ್ಯ ಅತಿಥಿಗಳೆಂದು ಸೌಜನ್ಯಕ್ಕಾದರೂ ಕರೆಯಬೇಕಾಗಿತ್ತು. ಅದೂ ಮಾಡಲಿಲ್ಲ. ನಾನು ಈ ಮಾತನ್ನು ಬಹಳ ನೋವಿನಿಂದ ಹೇಳಬೇಕಾಗಿದೆ. ಮಾನ್ಯ ಅಧ್ಯಕ್ಷರೇ ನಾನು ತಮ್ಮ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡಿದ್ದೇನೆ. ಏಕೋ ಏನೋ ಇವತ್ತು ನಾನು ನನ್ನ ಭಾಷಣ ಶುರು ಮಾಡಿದ ಗಳಿಗೆ ಸರಿ ಇಲ್ಲ ಅಂತ ಕಾಣುತ್ತದೆ

ನಕ್ಷತ್ರ ಸರಿ ಇಲ್ಲ ಎಂದು ಕಾಣುತ್ತದೆ. ನಾನಂತೂ ನಿಮ್ಮ ಮೇಲೆ ಜಗಳ ಮಾಡುವುದಿಲ್ಲ ತಾವು ನನಗೆ ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

* ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : (ಗುರುಮಿಠಕಲ್) ಮಾನ್ಯ ಅಧ್ಯಕ್ಷರೇ, ಮಾನ್ಯ ವಾಟಾಳ್ ನಾಗರಾಜ್‌ರವರ ಮೇಲೆ ತಮಗೆ ಸಾಕಷ್ಟು ಪ್ರೀತಿ ಇದೆ ಅಷ್ಟೇ ಪ್ರೀತಿ ಬೇರೆ ಸದಸ್ಯರ ಮೇಲೆ ಇಲ್ಲದಿದ್ದರೂ ಸ್ವಲ್ಪ ಕಡಿಮೆ ಎನ್ನತಕ್ಕಂಥಾದ್ದು ನನ್ನ ಭಾವನೆ ಇದೆ ಈಗಾಗಲೇ ವಾಟಾಳ್ ನಾಗರಾಜ್‌ರವರು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಈ ಹಿಂದೆ ಮಾತನಾಡಿದಂತಹ ಅನೇಕ ಜನ ಮಾನ್ಯ ಸದಸ್ಯರುಗಳು ರಾಜ್ಯಪಾಲರ ಭಾಷಣದ ಮೇಲೆ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ತಮ್ಮ ಅಭಿಪ್ರಾಯಗಳನ್ನು ಕೂಡ ವ್ಯಕ್ತ ಮಾಡಿದ್ದಾರೆ. ರಾಜ್ಯಪಾಲರು ತಮ್ಮ ಭಾಷಣದಲ್ಲಿ ಈ ಸದನದ ಮುಂದೆ ಬಂದು ಓದುವಾಗ ಮೊದಲನೇ ಪ್ಯಾರಾದಲ್ಲಿಯೇ ಹೇಳಿದ್ದಾರೆ. ಅನೇಕ ಸಲ ಮಾನ್ಯ ನಾಗೇಗೌಡರು ಇನ್ನೂ ಅನೇಕ ಜನ ಮಾನ್ಯ ಸದಸ್ಯರು ರಾಜ್ಯಪಾಲರ ಭಾಷಣದ ಪರವಾಗಿ ಮಾತನಾಡುವಾಗ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಮತ್ತು ಹಿಂದಿನ ಸರ್ಕಾರದ ಬಗ್ಗೆ ಕಠೋರವಾದ ಟೀಕೆಗಳನ್ನು ಮಾಡಿದ್ದಾರೆ. ಆ ಕಡೆಯ ಮಾನ್ಯ ಸದಸ್ಯರು ಕೂಡ ಅದೇ ರೀತಿಯಲ್ಲಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಆದರೆ ರಾಜ್ಯಪಾಲರು ತಮ್ಮ ಭಾಷಣದ ಮೊದಲನೇ ಪ್ಯಾರಾದಲ್ಲಿ ಏನು ಹೇಳಿದ್ದಾರೆ ಎನ್ನುವುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಅದೇನೆಂದರೆ ನಾಲ್ಕು ವರ್ಷಗಳಿಂದ ಈ ಪ್ರಗತಿಶೀಲ ರಾಜ್ಯದ ರಾಜ್ಯಪಾಲನಾಗಿ ಪ್ರಜೆಗಳ ಸೇವೆಯನ್ನು ಮಾಡುವ ಸದವಕಾಶ ನನಗೆ ದೊರಕಿದೆ. ಈ ರಾಜ್ಯದ ಪ್ರಜಾಸತ್ತಾತ್ಮಕ ಸಂಘಸಂಸ್ಥೆಗಳು ಅತ್ಯಂತ ಯುಕ್ತ ಮತ್ತು ದಕ್ಷ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿರುವುದನ್ನು ಗಮನಿಸುವುದರಲ್ಲಿ ನನಗೆ ಹೆಚ್ಚಿನ ಸಂತೋಷವೆನಿಸಿದೆ. ಅಂದರೆ ಕಳೆದ 4 ವರ್ಷಗಳಲ್ಲಿ ಈ ರಾಜ್ಯದಲ್ಲಿ ಪ್ರಜಾಸತಾತ್ಮಕ ಸಂಸ್ಥೆಗಳು ಅಂದರೆ ಶಾಸಕಾಂಗ ಇರಬಹುದು, ಕಾರ್ಯಾಂಗ ಇರಬಹುದು ನ್ಯಾಯಾಂಗ ಇರಬಹುದು, ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿ ಇರಬಹುದು ಎಲ್ಲವೂ ಬಹಳ ಸಮರ್ಪಕವಾಗಿ ನಡೆದಿದೆ ಎಂದು ಹೇಳಿದ್ದಾರೆ. ಅದೂ ರಾಜ್ಯಪಾಲರ ಮೂಲಕ ಸರ್ಕಾರ ಈ ಮಾತನ್ನು ಹೇಳಿಸಿದ್ದಾರೆ. ಆದರೂ ಕೂಡ ತಾವು ಪದೇ ಪದೇ ಟೀಕೆ ಮಾಡುವುದನ್ನು, ಚುಚ್ಚಿ ಮಾತನಾಡತಕ್ಕಂಥಾದ್ದನ್ನು ಬಿಡಲಿಲ್ಲ. ಎಲ್ಲಿ ಸ್ವಲ್ಪ ತಪ್ಪಾಗಿದೆ ಅದನ್ನು ಎತ್ತಿ ಹಿಡಿದು ಹೇಳಿದರೆ ಅಡ್ಡಿಯಿಲ್ಲ. ಆದರೆ ತಾವು ಸಾರಾಸಗಟಾಗಿ ಹಿಂದಿನ ಸರ್ಕಾರ ಮಾಡಿದಂತಹ ಯಾವುದೇ ಕೆಲಸ ಇರಲಿ ಅದು ಸರಿ ಇಲ್ಲ ಎನ್ನತಕ್ಕಂಥ ಮಾತು ಏನು ಹೇಳಿದ್ದೀರಿ ಅದು ಸರಿ ಇಲ್ಲ ಅದಕ್ಕೆ ಈ ಸರ್ಕಾರ ಹೊಸದಾಗಿ ಏನೋ ಸೃಷ್ಟಿ ಮಾಡುತ್ತೇವೆ ಮತ್ತು ಸಾಕಷ್ಟು ಸವಲತ್ತುಗಳನ್ನು ಕೊಡುತ್ತೇವೆ ಮತ್ತು ನಾವು ಬಂದ ಮೇಲೆ ಎಲ್ಲ ವ್ಯವಸ್ಥಿವಾಗಿ ದೇಶವನ್ನು ಆಳುತ್ತಿದ್ದೇವೆ ಎಂಬ ಮಾತನ್ನು ಹೇಳಿಕೊಂಡು ಬಂದಿದ್ದೀರಿ ಈಗ ಇದರಲ್ಲಿ ಕಾನೂನು ವ್ಯವಸ್ಥೆ ಬಗ್ಗೆ ಕೂಡ ತಾವು ಮಾತನಾಡಿದ್ದೀರಿ. ನಾನು ಕೇಳುತ್ತೇನೆ ಈಗ ತಾವು ಅಧಿಕಾರ ವಹಿಸಿಕೊಂಡು ಈ 11ನೇ ತಾರೀಖು ಬಂದರೆ 4 ತಿಂಗಳಾಯಿತ್ತು. ಈ 4 ತಿಂಗಳಲ್ಲಿ

ಎಷ್ಟು ಗಲಭೆಗಳು ಆದವು? ಎಷ್ಟು ಖೂನಿಗಳು ಆದವು. ಎಷ್ಟು ದರೋಡೆಗಳು ಆಗಿವೆ. ಎಷ್ಟು ಕಳ್ಳತನಗಳು ಆಗಿವೆ ಎಷ್ಟು ಲೂಟಿಗಳು ಆಗಿವೆ ಎನ್ನತಕ್ಕಂಥಾದ್ದರ ಬಗ್ಗೆ ಒಂದು ಸಲ ಅಲ್ಲ 10 ಸಲ ಇದೇ ಸದನದಲ್ಲಿ ನಮ್ಮ ಅನೇಕ ಜನ ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ. ಅಷ್ಟೇ ಅಲ್ಲ ಕಾನೂನು ವ್ಯವಸ್ಥೆ ಬಗ್ಗೆ ಕಾನೂನು ಸುವ್ಯವಸ್ಥೆ ಬಗ್ಗೆ ಆಡಳಿತದ ಬಗ್ಗೆ ಇಲ್ಲಿ ಒಂದು ದಿವಸ ಚರ್ಚೆ ಆಯಿತು. ಕಾನೂನು ಸುವ್ಯವಸ್ಥೆ ಅಷ್ಟು ಸಮರ್ಪಕವಾಗಿ ಸರಿಯಾಗಿಲ್ಲ ಎನ್ನತಕ್ಕಂಥಾದ್ದು ಇದರಿಂದ ತೋರಿಸುತ್ತದೆ ಇದರ ಬಗ್ಗೆ ತಾವು ಏನೇನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ಎಂದು ಹೇಳುವುದಕ್ಕೆ ಪದೇ ಪದೇ ತಾವು ವಿಫಲರಾಗಿದ್ದೀರಿ. ತಾವು ಪದೇ ಪದೇ ಹೇಳುವುದು ಏನೆಂದರೆ ಹುಬ್ಬಳ್ಳಿಯ ಈದ್ಗಾ ಸಮಸ್ಯೆಯನ್ನು ಬಹಳ ಶಾಂತ ರೀತಿಯಿಂದ ಬಿಡಿಸಿದ್ದೇವೆ ಇದರಿಂದ ಪೂರ್ಣ ಪ್ರಮಾಣದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಮೈಂಟೆನ್ ಮಾಡಿದ್ದೇವೆ ಎನ್ನುವ ಅಭಿಪ್ರಾಯವನ್ನು ಇಡೀ ರಾಜ್ಯಕ್ಕೆ ದೇಶಕ್ಕೆ ಕೊಟ್ಟಿರಿ. ಅದು ಆದ ಮೇಲೆ ಮತ್ತೆ ಅಲ್ಲಿ ಗಲಭೆ ನಡೆಯಿತು. ಆಗ ಸುಮಾರು 4-5 ಜೀವಗಳು ಹೋದವು. ಅನೇಕ ಕಡೆ ಅಂಗಡಿಗಳ ಲೂಟಿ ಆದವು. ಅನೇಕ ಜನರ ಅಂಗಡಿಗಳನ್ನು ಸುಟ್ಟರು. ಅನೇಕ ಜನರಿಗೆ ಗಾಯಗಳಾಗಿ ಆಸ್ಪತ್ರೆಗಳಲ್ಲಿ ಇದ್ದಾರೆ. ತಾವು ಒಂದು ಸೂಕ್ಷ್ಮವಾದ ಸಮಸ್ಯೆಯನ್ನು ಬಿಡಿಸಿದ್ದೇವೆಂದು ಹೇಳಿ ಸುಮ್ಮನೇ ನಿದ್ದೆ ಮಾಡುತ್ತಾ ಕುಳಿತರೇ ಅದರ ಪ್ರತಿಫಲ ಮೊನ್ನೆ ಹೋಳಿ ಹಬ್ಬದಲ್ಲಿ 4 ಜನ ಸತ್ತರು. ಒಬ್ಬರೋ ಇಬ್ಬರೋ ಗುಂಡೇಟಿನಿಂದ ಸತ್ತರು. ಇನ್ನಿಬ್ಬರು ಚೂರಿ ಇರಿತದಿಂದ ಸತ್ತರು. ಇಂತಹ ಪರಿಸ್ಥಿತಿ ಕೇವಲ ಹುಬ್ಬಳ್ಳಿಯಲ್ಲಿ ಅಷ್ಟೇ ಅಲ್ಲ. ಚುನಾವಣೆಗಳು ಆದ ಮೇಲೆ ಅನೇಕ ಕಡೆ ನಡೆಯಿತು. ತುಮಕೂರಿನಲ್ಲಿ ಆಗಿದೆ, ಹಾಸನದಲ್ಲಿ ಆಗಿದೆ ಕೋಲಾರದಲ್ಲಿ ಆಗಿದೆ, ಗುಲ್ಬರ್ಗ ಭಾಗದಲ್ಲಿ ಆಗಿದೆ. ಇಲ್ಲಿ ಮಾನ್ಯ ಸದಸ್ಯರಾದ ಬಿ.ಎಸ್. ಯಡಿಯೂರಪ್ಪನವರು ಒಂದು ಪ್ರಶ್ನೆ ಕೇಳಿದಾಗ ನೀವೇ ಅಂಕಿ ಅಂಶಗಳನ್ನು ಕೊಟ್ಟಿದ್ದೀರಿ. ಎಲ್ಲೆಲ್ಲಿ ಕಳ್ಳತನಗಳು ಎಷ್ಟು ಆಗಿವೆ, ದರೋಡೆಗಳು ಎಷ್ಟು ಆಗಿವೆ ಎಂದು ಅದಕ್ಕೆ ಅವರು ಬೇರೆ ರೀತಿ ಅಂಕಿ ಅಂಶಗಳನ್ನು ಕೊಟ್ಟರು. ಅವರು ಕೊಟ್ಟಂತಹ ಅಂಕಿಅಂಶಗಳನ್ನು ತೆಗೆದುಕೊಂಡರೆ ತಾವು ಕೊಟ್ಟಂತಹ ಅಂಕಿಅಂಶಗಳು ಬೇರೆ. ಇವತ್ತು ತಮ್ಮಲ್ಲಿರತಕ್ಕಂಥ ಅಂಕಿಅಂಶ ಒಂದಾದರೆ ಅವರು ಕೊಟ್ಟಂತಹ ಅಂಕಿಅಂಶಗಳು ಬೇರೆ. ಇದನ್ನೇ ತಾವು ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸರಿಯಾಗಿಲ್ಲ. ಅದಕ್ಕೆ ಯಾವುದೇ ಒಂದು ಕಾರ್ಯಕ್ರಮ ಕೂಡ ತಾವು ಹಾಕಿಕೊಂಡಿಲ್ಲ ತಾವು ಎಲ್ಲವೂ ಸರಿಯಾಗಿದೆ ಎಂದು ಹೇಳಿಕೊಳ್ಳುತ್ತೀರಿ. ಬಹುಶಃ ನಾವು ಏನಾದರೂ ಸಲಹೆ ಕೊಟ್ಟರೆ ಅದರ ಕಡೆ ತಾವು ಗಮನ ಕೊಡುವುದಿಲ್ಲ ಎನ್ನತಕ್ಕಂಥ ಒಂದು ನಂಬಿಕೆ ನನಗೆ ಇದೆ.

11.20 ಎ.ಎಂ

ಏಕೆಂದರೆ ಹೋದ ಸಾರಿಯೇ ಕಾನೂನು ವ್ಯವಸ್ಥೆ ಮೇಲೆ ಮಾತನಾಡುವಾಗ ಕೆಲವು ಸಲಹೆಗಳನ್ನು ಕೊಟ್ಟಿದ್ದೆವು. ಕೊನೆಗೆ ಅದರ ಬಗ್ಗೆ ಸದನ ಸಮಿತಿಯನ್ನಾದರೂ ಮಾಡಿ ಎಂದರೂ ತಾವು ಒಪ್ಪಿಕೊಳ್ಳಲಿಲ್ಲ. ಈಗ ಕಾನೂನು ವ್ಯವಸ್ಥೆ ಕೂಡ

ಸರಿಯಾಗಿಲ್ಲ ಇವತ್ತು ಹಳ್ಳಿಗಳ ಜನ ಭಯಭೀತರಾಗಿ ಜೀವನ ಮಾಡತಕ್ಕಂಥ ಪರಿಸ್ಥಿತಿ ಬಂದಿದೆ. ಇದಕ್ಕೆಲ್ಲಾ ಹೊಸ ಸರ್ಕಾರದ ಕುಮ್ಮಕ್ಕು ಇದೆಯೇನೋ ಎನ್ನುವ ರೀತಿಯಲ್ಲಿ ನಮಗೆ ಸಂಶಯ ಬರುತ್ತಿದೆ, ಏಕೆಂದರೆ, ಹಳ್ಳಿಗಳಲ್ಲಿ ಕೆಲವು ಜನ ದೌರ್ಜನ್ಯ ಮಾಡತಕ್ಕಂಥಾದ್ದನ್ನು ನೋಡಿದಾಗ, ಕೆಲವು ತಾಲ್ಲೂಕುಗಳಲ್ಲಿ ಜನಗಳೇ ಕಾನೂನನ್ನು ಕೈಗೆ ತೆಗೆದುಕೊಂಡಿರುವುದನ್ನು ನೋಡಿದಾಗ ಪೋಲೀಸ್ ಹಾಗೂ ಇತರ ಅಧಿಕಾರಿಗಳ ಜೊತೆಯಲ್ಲಿ ಅವರು ವರ್ತನೆ ಮಾಡುವುದನ್ನು ನೋಡಿದಾಗ ಇಂಥ ಕೆಲಸಕ್ಕೆ ಸರ್ಕಾರದ ಕುಮ್ಮಕ್ಕು ಮತ್ತು ಬೆಂಬಲವು ಪ್ರತ್ಯೇಕ್ಷ ಮತ್ತು ಅಪ್ರತ್ಯಕ್ಷವಾಗಿ ಇದೆಯೇನೋ ಎನ್ನತಕ್ಕಂಥ ಸಂಶಯ ಬರುವುದಕ್ಕೆ ಕಾರಣವಾಗಿದೆ. ಇದರ ಬಗ್ಗೆ ನಾವು ಮುಖ್ಯಮಂತ್ರಿಗಳು ಹಾಗೂ ಮಾನ್ಯ ಸಿಂಧ್ಯಾರವರನ್ನು ಕೇಳಿದ್ದಕ್ಕೆ ಅವರು ನಮಗೆ ತೃಪ್ತಿಕರವಾದ ಉತ್ತರವನ್ನು ಕೊಡಲಿಲ್ಲ. ಆಮೇಲೆ ಪಂಚಾಯತ್ ರಾಜ್ಯ ವ್ಯವಸ್ಥೆ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದೀರಿ. ಈಗಾಗಲೇ ಚುನಾವಣೆಗಳು ಮುಗಿದು ಜನ ನಿಮ್ಮ ಪರವಾಗಿ ತೀರ್ಮಾನ ಕೊಟ್ಟಿದ್ದಾರೆ. ಅದರ ಬಗ್ಗೆ ನಮ್ಮ ಅಭ್ಯಂತರವೇನೂ ಇಲ್ಲ, ಸಂತೋಷ ಆದರೆ ಪಂಚಾಯತ್ ರಾಜ್ಯದ ವ್ಯವಸ್ಥೆಯಲ್ಲಿ ಮಾಡಲಾಗಿರುವ ರಿಸರ್ವೇಷನ್ ಬಗ್ಗೆ ನಿನ್ನೆಯೂ ಕೂಡ ನಾವು ಮಾತನಾಡಿ ಅದರ ಬಗ್ಗೆ ಬದಲಾವಣೆ ಮಾಡಿ ಎಂದರೆ ಯಾವುದೇ ರೀತಿಯಲ್ಲೂ ತಾವು ಗಮನಕ್ಕೆ ತೆಗೆದುಕೊಳ್ಳಲಿಲ್ಲ. ಕೊನೆಗೆ ನಾವು ಏನೂ ಮಾಡುವುದಕ್ಕಾಗದೆ ವಾಕ್ ಔಟ್ ಮಾಡಿದೆವು. ನಿಮಗೆ ಪಂಚಾಯತ್ ರಾಜ್ಯ ವ್ಯವಸ್ಥೆ ಬಗ್ಗೆ ಆಸಕ್ತಿ ಇದ್ದಿದ್ದರೆ ಈ ತಿದ್ದುಪಡಿಯನ್ನು ತರಬಾರದಾಗಿತ್ತೆಂದು ನಾನು ಮೊದಲೂ ಹೇಳಿದ್ದೇನೆ ಪುನಃ ಪದೇ ಪದೇ ಹೇಳುವ ಅವಶ್ಯಕತೆ ಕೂಡ ಇದೆ. ಇನ್ನು ಎರಡನೆಯದಾಗಿ, ಇದು ತಮ್ಮ ಅನುಭವಕ್ಕೂ ಬಂದಿರಲೂಬಹುದು ಹಾಗೂ ಇಲ್ಲಿರತಕ್ಕಂಥ ಅನೇಕ ಮಾನ್ಯ ಸದಸ್ಯರ ಅನುಭವಕ್ಕೂ ಬಂದಿರಲೂಬಹುದು ಹಾಗೂ ಡೀಸೆಂಟ್ರಲೈಸೇಷನ್ ಆಫ್ ಪವರ್ ಮಾಡಿದ್ದೀರಿ, ಇದರ ಬಗ್ಗೆ ಎಲ್ಲರೂ ಒಪ್ಪಿದರು ನಮಗೂ ಇದರಲ್ಲಿ ಅನುಮಾನ ಏನೂ ಇಲ್ಲ, ನನಗೆ ಇದರಲ್ಲಿ ಆಸಕ್ತಿ ಮತ್ತು ಶ್ರದ್ಧೆ ಎರಡು ಇದೆ. ಡೀಸೆಂಟ್ರಲೈಸೇಷನ್ ಆಫ್ ಪವರ್‌ನ್ನು ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ತಂದಿರುವುದರಿಂದ ಕೆಲವು ಹಳ್ಳಿಗಳಲ್ಲಿ ಕೆಲವೇ ಜನ ಇದರ ಪ್ರಯೋಜನ ಪಡೆದುಕೊಳ್ಳುತ್ತಿದ್ದಾರೆ. ಇದು ಹೇಗೆಂದು ತಾವು ಕೇಳಬಹುದು. ನೀವು ಸೀಟುಗಳನ್ನು 'ಎ' ಕ್ಲಾಸ್‌ಗೆ ಕೊಡಬಹುದು, 'ಬಿ' ಕ್ಲಾಸ್‌ಗೆ ಕೊಡಬಹುದು, ಹರಿಜನರಿಗೆ ಕೊಡಬಹುದು, ಗಿರಿ ಜನರಿಗೆ ಕೊಡಬಹುದು ಆದರೆ ಆರಿಸಿ ಯಾರು ಬರುತ್ತಾರೆ? ಆ ಊರಿನಲ್ಲಿ ಯಾರು ಪ್ರಭಾವಶಾಲಿಗಳು ಇರುತ್ತಾರೇ ಅಂಥವರು ಮಾತ್ರ ಆರಿಸಿ ಬರುತ್ತಾರೆ. ಯಾರು ತನ್ನ ಹಕ್ಕಿನ ಬಗ್ಗೆ ಹೋರಾಟ ಮಾಡತಕ್ಕಂಥ ಮನುಷ್ಯ ಆರಿಸಿ ಬರತಕ್ಕಂಥಾದ್ದು ಅನೇಕ ಕಡೆ ಸಾಧ್ಯವಿಲ್ಲ. ಇವತ್ತು ನಮ್ಮ ರಾಜ್ಯದ ಲಿಟೆರೆಸಿ ಪರ್‌ಸೆಂಟೇಜ್ 50 ಪರ್‌ಸೆಂಟ್‌ಗಿಂತ ಕಡಿಮೆ ಇದೆ.

ಅಧ್ಯಕ್ಷರು : ತಮಗೆ ಗೊತ್ತಿದ್ದ ಹಾಗೆ the main source through which the local people yield power is the land. After the Enactment of the Land he forms Act do you feel still there is such type of harrasment?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಲ್ಯಾಂಡ್ ಲಾರ್ಡ್ಸ್ ಜೊತೆಗೆ ಬಿಸನೆಸ್ ಮ್ಯಾನ್‌ಗಳು ಸೇರಿಕೊಂಡಿದ್ದಾರೆ. money and power if they go together ನೀವು ಕೊಡುವಂಥ ರೀಸನ್ಸ್ ಅಪ್ಲಿಕಬಲ್ ಆಗುವುದಿಲ್ಲ. ಎಷ್ಟೇ ರಿಸರ್ವೆಷನ್ ಇರಲಿ, ಎಷ್ಟೇ ಕಮಿಟ್‌ಮೆಂಟ್ ಇರಲಿ ಎಷ್ಟೇ ಆಸಕ್ತಿ ಇರಲಿ, ಒಳ್ಳೆಯ ರಾಜ್ಯ ಕಟ್ಟಬೇಕು, ಒಳ್ಳೆಯ ಅಧಿಕಾರ ಕೊಡಬೇಕು, ಜನರಿಗೆ ಅದರ ಪ್ರತಿಫಲ ಸಿಗಬೇಕು ಎನ್ನತಕ್ಕಂಥ ಭಾವನೆ ನಿಮಗೆ ಎಷ್ಟೇ ಇದ್ದರೂ ಕೂಡಾ ಹಣ ಮತ್ತು ಅಧಿಕಾರ ಇವೆರಡೂ ಜೊತೆ ಜೊತೆಯಾಗಿ ಹೋಗುವುದರಿಂದ ಅನೇಕ ಹಳ್ಳಿಗಳಲ್ಲಿ ನಿಜವಾದ ನ್ಯಾಯ ಸಿಗುವುದಿಲ್ಲ.

ಅಧ್ಯಕ್ಷರು : ಹಳ್ಳಿಗಳಲ್ಲಿ ಯಾವ ಬಿಸನೆಸ್ ಮ್ಯಾನ್ ಕೋಟ್ಯಾಧೀಶ್ವರರು ಇದ್ದಾರೆ

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಹಳ್ಳಿಗಳ ಕಡೆ ಕಮಿಷನ್ ಏಜೆಂಟ್ಸ್ ಇದ್ದಾರೆ, ಎಕ್ಸೈಸ್ ಕಂಟ್ರಾಕ್ಟ್‌ದಾರರಿದ್ದಾರೆ ಅನೇಕ ಕಡೆ ಕಿರಾಣಿ ಅಂಗಡಿಯವರಿದ್ದಾರೆ, ಅವರೂ ಇವತ್ತು ರಾಜಕಾರಣದಲ್ಲಿ ಇಂಟರೆಸ್ಟ್ ತೋರಿಸುತ್ತಿದ್ದಾರೆ.

Mr. Speaker : After We have reduced the power of the land lord and local landed gentry by legislation, I think still, we have not been able to the influence and the local set drop and it is a reflection on all of us. We have failed to politicise the masses; and we have failed give the strength to retaliation for which I think all of us should feel guilty . Here I would like to know the view of Mr. Ghorpade. Could you concur with me or differ with me?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರೇ ಇದಕ್ಕೆ ಜವಾಬ್ದಾರರೆಂದು ನಾನು ಹೇಳುತ್ತಿಲ್ಲ.

ಅಧ್ಯಕ್ಷರು : ಇದರ ಬಗ್ಗೆ ಮಾನ್ಯ ಘೋರ್ಪಡೆಯವರು ಏನು ಹೇಳುತ್ತಾರೆ?

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಘೋರ್ಪಡೆಯವರು ಏನು ಹೇಳುತ್ತಾರೆ? ಐತಿಹಾಸಿಕ ಕಾರಣಗಳೂ ಇವೆ. ತಲತಲಾಂತರಗಳಿಂದ ವಿದ್ಯೆಯು ಕೇವಲ ಕೆಲವರ ಸ್ವತ್ತಾಗಿ, ಜಾತಿಯುತೆಯ ವರ್ಗೀಕರಣ ಮಾಡಿರುವುದರ ಪಳಿಯುಳಿಕೆಗಳು ನಾವಾಗಿರುವುದರಿಂದ ರಾಜಕೀಯ ಪ್ರಜ್ಞೆಯನ್ನು ದೊಡ್ಡ ಪ್ರಮಾಣದಲ್ಲಿ ತಕ್ಷಣದಲ್ಲಿ ಬೆಳೆಸುವುದಕ್ಕೆ ಸಾಧ್ಯವಾಗಲಿಲ್ಲ. ಅವರು ಹೇಳುವಂತೆ ಅಧಿಕಾರ ಮತ್ತು ಹಣ ಒಂದು ಕಾಲದಲ್ಲಿ ಜೊತೆಗೆ ಇದ್ದಿರಬಹುದು, ಆದರೆ ದೊಡ್ಡ ಪ್ರಮಾಣದ ಹಣ ಗ್ರಾಮಾಂತರ ಪ್ರದೇಶಗಳಲ್ಲಿ ಇಲ್ಲ. ಆ ಹಣ ಬೇರೆ ಕಡೆ ಇದೆ.

ಶ್ರೀ.ಜಿ.ವಿ. ಶ್ರೀರಾಮರೆಡ್ಡಿ : ಹಿಂದೆ ಇದ್ದಂಥ ದೊಡ್ಡ ಭೂ ಮಾಲೀಕರು ಇವತ್ತು ತಮ್ಮ ಸ್ವರೂಪವನ್ನು ಬದಲಾವಣೆ ಮಾಡಿಕೊಂಡು ನಿಯೋ ಲ್ಯಾಂಡ್ ಲಾರ್ಡ್ಸ್ ಆಗಿದ್ದಾರೆ. they have infiltrated in the form of new-agricul-

tural landlords. ಆಗಿದ್ದಾರೆ, ಅವರ ಹತ್ತಿರ ಹಣವೂ ಇದೆ, ಸಾರಾಯಿ ಇದೆ. ಮೊದಲಿನ ಭೂಮಾಲಿಕರು ದೊಣ್ಣೆ ಉಪಯೋಗಿಸುತ್ತಿದ್ದರು, ಈಗಿನ ಲ್ಯಾಂಡ್ ಲಾರ್ಡ್ಸ್ ರಿವಾಲ್ವಾರ್ ಮತ್ತು ಬಂದೂಕುಗಳನ್ನು ಉಪಯೋಗಿಸುತ್ತಿದ್ದಾರೆ. ಇವೆಲ್ಲವೂ ಇವತ್ತಿನ ದಿವಸವೂ ಇದೆ.

ಶ್ರೀ ಎಂ.ವೈ .ಘೋರ್ಪಡೆ : ಮಾನ್ಯ ಅಧ್ಯಕ್ಷರೆ, ತಾವು ಕೇಳಿರತಕ್ಕಂಥ ಪ್ರಶ್ನೆಗೆ ಉತ್ತರ ಹೇಳಬೇಕಾದರೆ ಲ್ಯಾಂಡ್ ರಿಫಾರ್ವರ್ಸ್ ಆ್ಯಕ್ಟ್ ಮುಖಾಂತರ ಯಾರು ಭೂಮಿಯನ್ನು ಉಳುತ್ತಾರೋ ಅಂಥವರಿಗೆ ಭೂಮಿ ಕೊಡುವಂಥ ಒಂದು ಕ್ರಾಂತಿಕಾರಕ ಬದಲಾವಣೆ ಹಿಂದೆ ನಡೆಯಿತು. ಬಡವರ ಮತ್ತು ಶ್ರೀಮಂತರ ವ್ಯತ್ಯಾಸಗಳನ್ನು ಕಡಿಮೆ ಮಾಡುವುದರಲ್ಲಿ ಇದು ಪರಿಣಾಮ ಬೀರಿದೆ. ಅದೇ ರೀತಿ ವಿದ್ಯಾವಂತರ ಸಂಖ್ಯೆ ಎಲ್ಲಾ ಜಾತಿ ಧರ್ಮಗಳಲ್ಲಿ ಜಾಸ್ತಿಯಾಗಿದೆ. 20 ವರ್ಷಗಳ ಹಿಂದೆ ಏನು ಪರಿಸ್ಥಿತಿ ಇತ್ತೋ ಅದಕ್ಕೆ ಹೋಲಿಸಿದರೆ ಇವತ್ತಿನ ಪರಿಸ್ಥಿತಿಯಲ್ಲಿ ಅಜಗಜಾಂತರ ವ್ಯತ್ಯಾಸವಿದೆ. ನನ್ನ ಅಭಿಪ್ರಾಯದಲ್ಲಿ ಜಾತಿಯತೆ ಭಾವನೆ ಬಹಳಷ್ಟು ಕಡಿಮೆಯಾಗಿದೆ. ಅದು ಅನಿವಾರ್ಯ. ಆಧುನಿಕತೆ ಆದಹಾಗೆಲ್ಲಾ ಮಡಿವಂತಿಕೆ ವಿಚಾರ ಕಡಿಮೆ ಯಾಗಲೇ ಬೇಕು, ಆಗಿದೆ. ಇನ್ನೂ ಬದಲಾವಣೆ ಮಾಡುವುದಕ್ಕೆ ಸಾಕಷ್ಟು ಅವಕಾಶ ಇದೆ. ಬಜೆಟ್ ಮೇಲೆ ಮಾತನಾಡುವಾಗ ನಾನು ಹೇಳಿದ್ದೇನೆ, ಇದಕ್ಕೆ ಮಟ್ಟದಲ್ಲಿ ಎಲ್ಲರಿಗೂ ಉದ್ಯೋಗಾವಕಾಶ ಕಲ್ಪಿಸಿದರೆ ಆಗ ಇನ್ನಷ್ಟು ವ್ಯತ್ಯಾಸ ಮತ್ತು ಅಂತರ ಕಡಿಮೆ ಮಾಡಲಿಕ್ಕೆ ಸಾಧ್ಯವಾಗುತ್ತದೆ. 20 ವರ್ಷಗಳ ಹಿಂದೆ ಇದ್ದಂಥ ಪರಿಸ್ಥಿತಿಗೆ ಇವತ್ತಿನ ಪರಿಸ್ಥಿತಿಯನ್ನು ಹೋಲಿಸಿಕೊಂಡೆ ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಕೂಡಾ ಬಹಳಷ್ಟು ವ್ಯತ್ಯಾಸ ಕಡಿಮೆಯಾಗಿದೆ ಎನ್ನುವುದೇ ನನ್ನ ಅಭಿಪ್ರಾಯ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಸನ್ಮಾನ್ಯ ಅಧ್ಯಕ್ಷರೆ, ನಾನೂ ಮುಂದಕ್ಕೆ ಅದನ್ನೇ ಹೇಳುತ್ತಿದ್ದೆ. ಭೂ ಸುಧಾರಣಾ ಕಾನೂನು ಡೆಟ್ ರಿಲೀಫ್ ಆ್ಯಕ್ಟ್ ಬರದೇ ಹೋಗಿದಿದ್ದರೆ ಬಹಳ ನಾವೂ, ನೀವೂ ಈ ಸದನಕ್ಕೆ ಬರುವುದಕ್ಕಾಗುತ್ತಿರಲಿಲ್ಲ. ನಾನು ಆರೇಳು ಸಾರಿ ಸತತವಾಗಿ ಆರಿಸಿ ಬರುವುದಕ್ಕೂ ಆಗುತ್ತಿರಲಿಲ್ಲ. ಹಳ್ಳಿಗಳ ಕಡೆ ಇನ್ನೂರು, ವೋಟರ್ಸ್‌ಗೆ, ನಾಲ್ಕು ನೂರು ವೋಟರ್ಸ್‌ಗೆ, ಸಾವಿರ ವೋಟರ್ಸ್‌ಗೆ ಸೀಮಿತವಾಗಿರುವುದರಿಂದ ಆ ಹಿಡಿತದಿಂದ ಬಹು ಜನ ಇನ್ನೂ ಹೊರಗಡೆ ಬಂದಿಲ್ಲ. ವಿಶಾಲವಾದ ಚುನಾವಣೆಗಳು ಅಂದರೆ, ಎಂ.ಎಲ್.ಎ, ಪಾರ್ಲಿಮೆಂಟ್ ಮತ್ತು ಜಿಲ್ಲಾಪರಿಷತ್ ಚುನಾವಣೆಗಳಲ್ಲಿ ಈ ವ್ಯತ್ಯಾಸ ಕಂಡು ಬರುವುದಿಲ್ಲ. ಆದರೆ, ತಾಲ್ಲೂಕು ಪಂಚಾಯತ್, ಮಂಡಲ ಪಂಚಾಯತ್ ಚುನಾವಣೆಗಳಲ್ಲಿ, ಅವರಿಗೆ ಇರತಕ್ಕಂಥ ಇನ್‌ಫ್ಲೂಯೆನ್ಸ್, ಪಕ್ಕದ ಹಳ್ಳಿ ಮೇಲೆ ಇರತಕ್ಕಂಥ ಇನ್‌ಫ್ಲೂಯೆನ್ಸ್, ಅವರು ಮಾಡತಕ್ಕಂಥ ಲೇವಾದೇವಿ ಇನ್‌ಫ್ಲೂಯೆನ್ಸ್, ಹಣದ ವ್ಯವಹಾರಗಳು, ಇವುಗಳನ್ನೆಲ್ಲಾ ನಾವು ಲೆಕ್ಕ ಮತ್ತು ಗಮನಕ್ಕೆ ತೆಗೆದುಕೊಂಡಾಗ ಇನ್ನೂ ಅದರ ಪ್ರಭಾವ ಮತ್ತು ವಾಸನೆ ಜನರ ಮೇಲೆ ಬೀರುತ್ತಿದೆ ಎನ್ನುವುದನ್ನು ನಾವು ಮರೆಯಬಾರದು. ಅಂಥ ಒಂದು ಸಂದರ್ಭಗಳಲ್ಲಿ ಇವೊತ್ತು ಚುನಾವಣೆಗಳು ನಡೆಯುತ್ತಿವೆ, ಹಿಂದೆಯೂ ಕೂಡ ನಡೆದಿದೆ. ಇದು ಪ್ರಯೋಗ. ಇದನ್ನು ಯಶಸ್ವಿಯಾಗಿ ನಾನು ಪ್ರಯತ್ನ ಮಾಡಬೇಕಾಗುತ್ತದೆ. ನಮ್ಮ ಪ್ರಜಾಪ್ರಭುತ್ವದ

ಇನ್‌ಸ್ಟಿಟ್ಯೂಶನ್‌ಗಳನ್ನು ನಾವು ದೂಷಣೆ ಮಾಡಿ ಇದು ಸರಿಯಾಗಿಲ್ಲ ಎಂದು ಹೇಳುವುದು ನನ್ನ ವಾದ ಅಲ್ಲ. ಆದರೆ ಇದರ ಹೆಚ್ಚಿನ ಪ್ರಯೋಜನವನ್ನು, ಅದು ಎಷ್ಟೋ ನೀವು ಕ್ಲಾಸಿಫಿಕೇಶನ್ ಮಾಡಿದರೂ ಕೂಡ ರಿಸರ್‌ವೇಶನ್ ಪ್ರೊಟೆಕ್ಷನ್‌ನ್ನು ಕೊಟ್ಟರೂ ಕೂಡ ಅದು ಎಂಥೆಂಥವರಿಗೋ ಹೋಗುತ್ತದೆ. 'ಎ' ಕ್ಲಾಸ್‌ನಲ್ಲಿಯೇ ಎಂಥವರಿಗೋ ಹೋಗುತ್ತದೆ. ಉದಾಹರಣೆಗೆ ಹಳ್ಳಿಗಳಲ್ಲಿ ಯಾರಿಗೋ ಒಬ್ಬರಿಗೆ ರಿಸರ್ವ್ಡ್ ಕ್ಯಾಟಗರಿ ಎಂದು ಚುನಾಯಿಸುತ್ತಾರೆ. ಅಲ್ಲಿ ಅವರ ಪ್ರಭಾವ ಇದ್ದರೆ, ಅವನ ಮಾತನ್ನು ಯಾರು ಕೇಳುತ್ತಾರೋ, ತನಗೆ ಯಾರು ಬೇಕೋ, ತನ್ನ ಕೈ ಚೀಲ ಹಿಡಿದುಕೊಂಡು ಹೋಗತಕ್ಕಂಥವರನ್ನು ಮಾತ್ರ ಆರಿಸುತ್ತಾರೆ. ಅದು ನಮ್ಮ ಮತ್ತು ನಿಮ್ಮ ಕಡೆಯಿಂದಲೂ ಆಗಿರಬಹುದು. ಇಲ್ಲಿ ಅಭ್ಯರ್ಥಿಯಾದವನು ತಮ್ಮ ಅಧೀನದಲ್ಲಿರಲಿ ಎಂಬ ದೃಷ್ಟಿಯಿಂದ ಇವೊತ್ತು ಈ ವ್ಯವಸ್ಥೆಯನ್ನು ಅನೇಕ ಕಡೆಗಳಲ್ಲಿ ಮಾಡುತ್ತಾ ಇದ್ದಾರೆ. ಕೆಲವು ಕಡೆಗಳಲ್ಲಿ ರಿಸರ್‌ವೇಶನ್ ಇದ್ದಲ್ಲಿ, ತಾಲ್ಲೂಕು ಮತ್ತು ಮಂಡಳ್ ಪಂಚಾಯತ್‌ಗೆ ನಾವು ಬಿಸಿಎಂ, ಎಸ್‌ಸಿ ಎಸ್‌ಟಿ – ಮುಂತಾಗಿ ಛೇರ್ಮನ್‌ಶಿಪ್ ಮಾಡುವಾಗ ಅಥವಾ ಜನರಲ್ 'ಬಿ' ಕ್ಯಾಟಗರಿ ಇತ್ಯಾದಿಗಳನ್ನು ಮಾಡುವಾಗಲೂ ಕೂಡ ತಮಗೆ ಅನುಕೂಲ ಇರತಕ್ಕಂಥ ಮನುಷ್ಯನು ಬರುತ್ತಾನೋ ಇಲ್ಲವೋ ಎಂಬುದನ್ನು ನೋಡಿ ಅಂಥವರನ್ನೇ ನಿಲ್ಲಿಸಿ ಅವರನ್ನು ಗೆಲ್ಲಿಸತಕ್ಕಂಥ ಪ್ರಯತ್ನವನ್ನು ಮಾಡುತ್ತಾರೆ. ಆ ಹಳ್ಳಿಯ ಆಡಳಿತವನ್ನು, ಆ ತಾಲ್ಲೂಕು ಪಂಚಾಯತ್‌ನ ಆಡಳಿತವನ್ನು ತಮ್ಮ ಕೈಯಲ್ಲಿಯೇ ಇರಿಸಿಕೊಳ್ಳುವ ದೃಷ್ಟಿಯನ್ನು ಇಟ್ಟುಕೊಂಡು ಚುನಾವಣೆಯ ಕಣದಲ್ಲಿ ಅಭ್ಯರ್ಥಿಗಳನ್ನು ಬಿಡುತ್ತಾರೆ. ಮತ್ತು ಅದೇ ದೃಷ್ಟಿಯಿಂದ ಚುನಾವಣೆಗಳನ್ನು ನಡೆಸುತ್ತಾರೆ. ಆದರೆ ಎಲ್ಲಿ ಇಂಥ ವರ್ಗದ ಅಭ್ಯರ್ಥಿಗಳು ವಿದ್ಯಾವಂತರಿರುತ್ತಾರೋ ಅಲ್ಲಿ ಮಾತ್ರ ಇದು ಸಾಧ್ಯವಾಗುವುದಿಲ್ಲ. ಎಲ್ಲಿ ಗ್ರಾಜುಯೇಟ್ಸ್ ಇದ್ದಾರೆ. ಎಲ್ಲಿ ಕೇಡರ್‌ಬೇಸ್ಡ್ ಪಾರ್ಟೀಸ್ ಇದ್ದಾವೆ, ಯಾವುದೇ ಪಕ್ಷದಲ್ಲಿ ವಿದ್ಯಾವಂತರು ಇದ್ದಾರೆ, ಅಂಥ ಕಡೆಗಳಲ್ಲಿ ಅವರು ಅಸರ್ಟ್ ಮಾಡಿಕೊಳ್ಳುತ್ತಾರೆ, ಅವರು ನಮಗೇ ಬೇಕೆಂದು ಕೇಳುತ್ತಾರೆ. ಹಾಗೆಯೇ ಮೊಬಲೈಸ್ ಮಾಡುತ್ತಾರೆ. ಅವರು ಆರಿಸಿ ಬರುವುದಕ್ಕೆ ಸಾಧ್ಯವಾಗುತ್ತದೆ. ಉಳಿದ ಕಡೆಗಳಲ್ಲಿ ಇದು ಸಾಧ್ಯವಾಗುವುದಿಲ್ಲ. ಇನ್ನು ನಿಮ್ಮ ಎಸ್‌ಜಿಪಿ ಅಮೌಂಟ್. ಇದು ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತ್‌ಗಳಿಗೆ ಹೋಗುತ್ತದೆ. ಆದರೆ ಅ ಹಣವನ್ನು ಖರ್ಚು ಮಾಡುವುದೇ ಇಲ್ಲ. ಅದನ್ನು ಕೇಳುವವರು ಕೂಡ ಇರುವುದಿಲ್ಲ ಏಕೆಂದರೆ ಕೇಳುವಂಥ ಜನರನ್ನು ನಾವು ಅಲ್ಲಿಗೆ ಆರಿಸಿ ಕಳುಹಿಸಿರುವುದಿಲ್ಲ. ಹೀಗೆ ಅಸರ್ಟ್ ಮಾಡತಕ್ಕಂಥ ಮನುಷ್ಯ ಮುಂದೆ ಬರುವುದಿಲ್ಲ. ಹೀಗಾಗಿ ಈ ವ್ಯವಸ್ಥೆಯು ಎಷ್ಟೋ ಒಳ್ಳೆಯದಾಗಿದ್ದರೂ ಕೂಡ ಅದರ ಪ್ರಯೋಜನ ಇಲ್ಲವಾಗಿದೆ. ಹಿಂದೆ ಡಾ: ಅಂಬೇಡ್ಕರ್ ಹೇಳಿದ್ದರು. ಕಾನೂನು ಎಷ್ಟೇ ಒಳ್ಳೆಯದಿದ್ದರೂ ಕೂಡ ಅದನ್ನು ನಡೆಸಿಕೊಂಡು ಹೋಗತಕ್ಕಂಥ ಜನರು ಸರಿಯಾಗಿಲ್ಲ ಅಂದರೆ ಆ ಕಾನೂನು ಕೂಡ ಕೆಟ್ಟದ್ದಾಗುತ್ತದೆ. ಹಾಗೆಯೇ ಈ ಒಂದು ಪಂಚಾಯತ್ ಆ್ಯಕ್ಟ್ ಎಷ್ಟೇ ಒಳ್ಳೆಯದಾಗಿದ್ದರೂ ಕೂಡ, ನಾವೆಲ್ಲರೂ ಇದನ್ನು ಮನಸಾರ ಒಪ್ಪಿಕೊಂಡು ಕೃತಿಯಲ್ಲಿ ಅದನ್ನು ತಂದರೂ ಕೂಡ ಒಳ್ಳೆಯವರ ಕೈಯಲ್ಲಿ ನಾವು ಅಧಿಕಾರವನ್ನು ಕೊಡದೇ

ಹೋದರೆ, ಅಲ್ಲಿಗೆ ಒಳ್ಳೆಯ ಅಧ್ಯಕ್ಷರು ಬಾರದೇ ಹೋದರೆ ಕೊನೆಗೆ ನಾವು ಕೊಟ್ಟಂಥ ಹಣವು ಕೂಡ ಪೋಲಾಗತಕ್ಕಂಥ ಸಾಧ್ಯತೆಗಳು ಇವೆ. ಇದು ಸ್ಟೇಟ್‌ಲೆವಲ್‌ನಲ್ಲಿ ಮಾನಿಟರ್ ಮಾಡಲೇಬೇಕು. ಯಾವರೀತಿಯಾಗಿ ಹಣವನ್ನು ಖರ್ಚು ಮಾಡುತ್ತಾ ಇದ್ದಾರೆ, ಯಾವ ರೀತಿಯಾಗಿ ಅವರ ಪ್ರಗತಿಯಾಗುತ್ತಾ ಇದೆ, ಫಿಸಿಕಲ್ ಪ್ರೋಗ್ರೆಸ್ ಆಗಲೀ, ಫೈನಾನ್ಶಿಯಲ್ ಟಾರ್ಗೆಟ್ ಆಗಲೀ, - ಅದನ್ನು ಅವರು ಅಚೀವ್ ಮಾಡುತ್ತಾ ಇದ್ದಾರೋ ಇಲ್ಲವೋ ಅದರ ಸದುಪಯೋಗವಾಗಿದೆಯೇ ಇಲ್ಲವೋ ಎಂಬುದನ್ನು ನೀವು ನೋಡದೆ ಹೋದರೆ ಖಂಡಿತವಾಗಿ ಇದೂ ಕೂಡ ನಾಳೆ ಕೆಲವೇ ಜನರ ಸ್ವತ್ತಾಗಿ ಒಬ್ಬೊಬ್ಬರು ಒಂದೊಂದು ತಾಲ್ಲೂಕಿಗೆ ಅಥವಾ ಹಳ್ಳಿಗೆ ದೇಶಪಾಂಡೆ, ಜಹಾಗೀರ್‌ದಾರ್, ದೇಶಮುಖ್‌ಗಳಾಗಿ ಕುಳಿತುಕೊಳ್ಳುತ್ತಾರೆ. ಆದ್ದರಿಂದ ದಯಮಾಡಿ ಈ ಕುರಿತು ಲಕ್ಷ್ಯ ಕೊಡಬೇಕು. ಹಾಗೆಯೇ ಕೊನೆಯ ಹಂತದಲ್ಲಿ ಎಸ್‌ಜಿಪಿ ಹಣ ಖರ್ಚಾಗಿಲ್ಲ, ಎಸ್‌ಸಿಎಸ್‌ಟಿಯವರಿಗೆ ಕೊಟ್ಟ ಹಣ ಖರ್ಚಾಗಿಲ್ಲ, ಹಿಂದುಳಿದವರಿಗೆ ಕೊಟ್ಟು ಹಣ ಖರ್ಚಾಗಿಲ್ಲ, ಎಂದು ಹೇಳಿಕೊಂಡು ನಾವಿಲ್ಲಿ ಭಾಷಣ ಮಾಡುವುದರಿಂದ ಯಾವ ಪ್ರಯೋಜನವೂ ಇಲ್ಲ. ಯಾವ ರೀತಿಯಾಗಿ ನಾವು ಅಧಿಕಾರದ ವಿಕೇಂದ್ರೀಕರಣ ಮಾಡಿದ್ದೇವೆ, ಮಾಡಿದ ಮೇಲೆ ಅದು ಸರಿಯಾಗಿ ನಡೆಯುತ್ತಿದೆಯೋ ಇಲ್ಲವೋ ಎಂಬುದನ್ನು ನೋಡಬೇಕು. ಮತ್ತು ಇದರ ಮೇಲೆ ಹೆಚ್ಚಿನ ನಿಗಾ ಇಡಬೇಕು. ಮೂರನೆಯದಾಗಿ ಭೂಸುಧಾರಣ ಕಾಯಿದೆಯನ್ನು ತಂದ ಮೇಲೆ ಹಳ್ಳಿಗಳಲ್ಲಿ ಸಾಕಷ್ಟು ಬದಲಾವಣೆಗಳನ್ನು ನೋಡಲಾಗಿದೆ ಎಂದು ಹೇಳಿದ್ದೀರಿ. ಅದೇ ರೀತಿಯಲ್ಲಿ ಪಟ್ಟಣಗಳಲ್ಲಿಯೂ ಬದಲಾವಣೆಯಾಗಿದೆ. ಅದೇ ರೀತಿಯಲ್ಲಿ ರಾಜಕೀಯ ಬದಲಾವಣೆಗಳನ್ನು ಕಾಣುವುದಕ್ಕೆ ಸಾಧ್ಯವಾಗಿದೆ ಎಂಬ ಮಾತನ್ನು ಕೂಡ ಹೇಳಿದ್ದೀರಿ. ಇಂಥ ಒಂದು ಪ್ರಗತಿಪರ ಕಾನೂನನ್ನು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ, ಮತ್ತು ಬಜೆಟ್‌ನಲ್ಲಿಯೂ ಹೇಳಿದ್ದಾರೆ. ನಾವು ಅನೇಕ ಬದಲಾವಣೆಗಳನ್ನು ಮಾಡುತ್ತೇವೆ, 79-ಬಿ ಅಂದರೆ ಸೀಲಿಂಗ್ಸ್‌ನ್ನು ಅಮೆಂಡ್‌ಮೆಂಟ್ ಮಾಡುತ್ತೇವೆ, ಹಾರ್ಟಿಕಲ್ಚರ್, ಫ್ಲೋರಿಕಲ್ಚರ್, ಮುಂತಾಗಿ ದೊಡ್ಡ ದೊಡ್ಡ ಇನ್‌ಸ್ಟಿಟ್ಯೂಶನ್ಸ್ ಬರುವಾಗ ಅವುಗಳಿಗೆ ಸಹಾಯ ಮಾಡಬೇಕಾಗುತ್ತದೆ. ಒಳ್ಳೆಯ ಕಾರ್ಖಾನೆಗಳು ಹೊರಗಿನಿಂದ ಬರುವಾಗ ಅವುಗಳಿಗೆ ನಾವು ಹೆಚ್ಚಿನ ಸವಲತ್ತುಗಳನ್ನು ಕೊಟ್ಟು ಇರುವ ಸೀಲಿಂಗ್ ಕಾನೂನನ್ನು ಅಮೆಂಡ್‌ಮೆಂಟ್ ಮಾಡಬೇಕಾಗುತ್ತದೆ ಎಂಬುದನ್ನು ತಾವು ವಾದದ ಮೂಲಕ ಇಡುತ್ತಾ ಇದ್ದೀರಿ. ಆದರೆ ನೀವು ಏನಾದರೂ ದುರಾದೃಷ್ಟವಶಾತ್ ಅದನ್ನು ಒಪ್ಪಿಕೊಂಡು ಅಮೆಂಡ್‌ಮೆಂಟ್ ಮಾಡಿದರೆ ಹಳ್ಳಿಯ ಜನರಿಗೆ, ರೈತರಿಗೆ, ನೀವು ಕೊಲೆ ಮಾಡಿದ ಹಾಗೆ ಆಗುತ್ತದೆ. ಆದರ ನೆಪದಲ್ಲಿ ಇವೊತ್ತು ಏನಾಗುತ್ತದೆ? ಇವೋತ್ತು ನೀವು ಹಾರ್ಟಿಕಲ್ಚರ್ ಮತ್ತು ಫ್ಲೋರಿಕಲ್ಚರ್‌ಗೆ ಕೊಡುತ್ತೀರಿ, ನಾಳೆ ಇನ್ನೊಬ್ಬರು ಬಂದು ಅಮೆಂಡ್‌ಮೆಂಟ್ ಮಾಡಿ ಇನ್ನೊಬ್ಬರು ಇಂಡಸ್ಟ್ರೀಗೆ ಕೊಡಿ ಎಂದು ಹೇಳುತ್ತಾರೆ. ಅದಕ್ಕಾಗಿ ಈಗಾಗಲೇ ನಮ್ಮಲ್ಲಿ ಲ್ಯಾಂಡ್ ಅಕ್ವಿಸಿಶನ್ ಆಕ್ಟ್‌ಗಳು ಇವೆ. ಇಂಡಸ್ಟ್ರೀಸ್‌ಗೆ ಇಂಡಸ್ಟ್ರಿಯಲ್ ಡೆವಲ್‌ಪ್‌ಮೆಂಟ್ ಬೋರ್ಡ್ ಇದೆ. ಅದರಂತೆ ಬೇರೆ ಲ್ಯಾಂಡ್ ಅಕ್ವಿಸಿಶನ್ ಆ್ಯಕ್ಟ್‌ಗಳು ಇವೆ, ಹೀಗೆ ಈಗಾಗಲೇ ಕಾನೂನುಗಳು ಇರುವಾಗ ಅವುಗಳನ್ನು ಪುನಃ ಸಡಿಲುಗೊಳಿಸಿದರೆ, ಇದರ

ಪ್ರಯೋಜನವನ್ನು ವೆಸ್ಟೆಡ್ ಇಂಟ್ರೆಸ್ಟ್ ಪಡೆದುಕೊಂಡು ಪುನಃ ಹೆಚ್ಚಿನ ಜಮೀನನ್ನು ಸಂಪಾದನೆ ಮಾಡಿಕೊಳ್ಳಲು ಅವರಿಗೆ ಅನುಕೂಲವಾಗುತ್ತದೆ. ಇನ್ನೊಂದು ಗುಣ ಏನಿದೆ ಅಂದರೆ ನಾನ್ ಅಗ್ರಿಕಲ್ಚರಿಸ್ಟ್ ಕೂಡ ಹೆಚ್ಚಿನ ಜಮೀನನ್ನು ಸಂಪಾದನೆ ಮಾಡಿಕೊಳ್ಳಬಾರದೆಂಬ ಉದ್ದೇಶ ಇದೆ. ಅದಕ್ಕಾಗಿ ಇನ್‌ಕಂ ಲಿಮಿಟ್ ಕೂಡ ಹಾಕಿದ್ದೀರಿ, ಆ ಇನ್‌ಕಂ ಲಿಮಿಟ್ 12 ಸಾವಿರ ಇದ್ದುದನ್ನು ನಾವು ತೆಗೆದು 50 ಸಾವಿರ ಎಂದು ಮಾಡಿದ್ದಾಯಿತು. ಅದರ ಉದ್ದೇಶ ಏನೆಂದರೆ, ನಾನ್ ಆಗ್ರಿಕಲ್ಚರಿಸ್ಟ್ ಈ ಆಗ್ರಿಕಲ್ಚರ್ ಲ್ಯಾಂಡ್‌ನ್ನು ಗ್ರ್ಯಾಬ್ ಮಾಡಬಾರದು, ಇಂಡಸ್ಟ್ರಿಯಲಿಸ್ಟ್ ಅಗ್ರಿಕಲ್ಚರ್ ಹೆಸರಿನಲ್ಲಿ ಸಂಪಾದನೆ ಮಾಡಬಾರದು, ಬಡವರಿಂದ, ರೈತರಿಂದ ಭೂಮಿಯನ್ನು ಕಿತ್ತುಕೊಳ್ಳಬಾರದು ಎಂಬ ಕಾರಣದಿಂದ ಆ ಕಾಲದಲ್ಲಿ ಅನೇಕ ಕಂಡೀಶನ್ಸ್‌ಗಳನ್ನು ಹಾಕಿ ಆ ಕಾನೂನು ಅಲ್‌ಪ್ರೂಫ್ ಕಾನೂನು ಆಗಿದೆ. ಆದ್ದರಿಂದ ದಯಮಾಡಿ ನೀವು ಅದನ್ನು ಬದಲಾವಣೆ ಮಾಡಲು ಹೋಗಬೇಡಿ. ಬದಲಾವಣೆ ಮಾಡಿದರೆ ಅದರಿಂದ ರೈತರಿಗೆ ತೊಂದರೆಯಾಗುತ್ತದೆ. ಬಡವರಿಗೆ ತೊಂದರೆಯಾಗುತ್ತದೆ. ನಾಳೆಗೆ ಟೆನೆಂಟ್‌ಗಳಿಗೆ ಇದೇ ಒಂದು ನೆಪದಲ್ಲಿ ಅವರ ಭೂಮಿಯನ್ನು ಕಸಿದುಕೊಳ್ಳುವ ವ್ಯವಸ್ಥೆಯಾಗುತ್ತದೆ. ಆದ್ದರಿಂದ ದಯಮಾಡಿ ಈ ಕುರಿತು ತಾವು ಗಮನಕೊಡಬೇಕೆಂದು ಹೇಳಿಕೊಳ್ಳುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೇ, ಇವೊತ್ತು ಪತ್ರಿಕೆಗಳಲ್ಲಿಯೂ ಬಂದ ವಿಚಾರವನ್ನು ತಾವು ನೋಡಿರಬಹುದು. ಫ್ಲೂರಿಕಲ್ಚರ್ ನಮ್ಮ ರಾಷ್ಟ್ರದಲ್ಲಿ ಬಹಳಷ್ಟು ಪ್ರಾಮುಖ್ಯತೆಯನ್ನು ಪಡೆದಿದೆ. ಕೋಟ್ಯಾಂತರ ರೂಪಾಯಿಗಳ ಹಣವನ್ನು ನಾವು ಇವೊತ್ತು ಎಕ್ಸ್‌ಪೋರ್ಟ್ ಮಾಡುತ್ತಾ ಇದ್ದೇವೆ. ಹೀಗೆ ನಾಲ್ಕು ಪ್ರಾಜೆಕ್ಟ್‌ಗಳನ್ನು ನಮ್ಮ ಕರ್ನಾಟಕದಲ್ಲಿ ಪ್ರಾರಂಭ ಮಾಡಬೇಕೆಂದು ಬಂದಾಗ ಇಲ್ಲಿ ನಮಗೆ ಜಮೀನು ಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ, ಇದನ್ನು ಅಕ್ವಾಯರ್ ಮಾಡಿಕೊಂಡು ತೆಗೆದುಕೊಳ್ಳಬೇಕಾದರೆ 2-3ವರ್ಷಗಳು ಆಗುತ್ತವೆ ಎಂದು ಹೇಳಿ ಆ ಪ್ರಾಜೆಕ್ಟ್‌ಗಳು ಪಕ್ಕದ ಹೊಸೂರಿಗೆ ಹೋಯಿತು. ಈಗ ಇಲ್ಲಿ ಎರಡು ಪ್ರಾಜೆಕ್ಟ್‌ಗಳು ಉಳಿದಿವೆ. ಒಂದು ಫರ್ಮ್‌ನವರು 240ಕೋಟಿ ರೂಪಾಯಿಗಳನ್ನು ಇನ್‌ವೆಸ್ಟ್ ಮಾಡುತ್ತಾ ಇದ್ದಾರೆ. ಇನ್ನೊಬ್ಬರು 70 ಕೋಟಿ ರೂಪಾಯಿಗಳನ್ನು ಇನ್‌ವೆಸ್ಟ್ ಮಾಡುತ್ತಿದ್ದಾರೆ. ಅದರ ಮೂಲಕ ಬೇಕಾದಷ್ಟು ಜನರಿಗೆ ಕೆಲಸವೂ ಸಿಗುತ್ತಾ ಇದೆ. ನಮ್ಮ ಅನಿಸಿಕೆ ಅಂದರೆ ನಾವು ಅಕ್ವಾಯ್‌ರ್ ಮಾಡಿಕೊಡುವುದು ಬೇಡ, ಅದರಂತೆ ವರ್ಷಗಟ್ಟಲೆ ಮಾಡಿ ಆಫೀಸರ್ಸ್‌ಗೆ ಕರಫ್ಟ್ ಮಾಡುವುದು ಬೇಡ, ಜೊತೆಗೆ ಅಕ್ವಿಸಿಶನ್ ಅಂದರೆ ಹೆದರಿ ರೈತರು ಕಡಿಮೆ ರೇಟ್‌ಗೆ ಜಮೀನನ್ನು ಕೊಡುತ್ತಾರೆ ಎಂಬ ದೃಷ್ಟಿಯಿಂದ ಅದು ಬೇಡ ಎಂದು ಮಾಡಿದ್ದೇವೆ. ಈಗಾಗಲೇ ಬೆಂಗಳೂರಿನ ಸುತ್ತಮುತ್ತಲು ನಡೆಯುತ್ತಾ ಇದೆ. ನಮ್ಮ ತಾಲ್ಲೂಕಿನಲ್ಲಿ ಜಿಪಿಎ ಮಾಡಿಕೊಂಡು ನೂರಾರು ಎಕರೆ ಮಾಡಿಕೊಂಡಿದ್ದಾರೆ. ಬೇರೆ ಬೇರೆ ಹೆಸರಿನಲ್ಲಿ ನೂರಾರು ಎಕರೆಗಳನ್ನು ಕೊಂಡುಕೊಂಡಿದ್ದಾರೆ. ಇದನ್ನು ತಪ್ಪಿಸಿ ನೇರವಾಗಿ ಡೀಲಿಂಗ್ ಇರಲಿ, ನಾಳೆ ರೈತರು ಅಕ್ವಿಸಿಶನ್‌ಗೆ ಒಂದೂವರೆ ಲಕ್ಷ ಎಂದು ಹೇಳುವವರು ಈಗ ನನ್ನ ಜಮೀನು ಕೊಡುವುದಿಲ್ಲ, ಅದಕ್ಕೆ ನಾಲ್ಕು ಲಕ್ಷ ಆಗುತ್ತದೆ ಎಂದು ಹೇಳುತ್ತಾನೆ. ಹೌಸ್‌ಬಿಲ್ಡಿಂಗ್‌ಗಾಗಲ್ಲಿ ಇಂಡಸ್ಟ್ರೀಸ್‌ಗೆ ಆಗಲಿ,

ಇಂಡಸ್ಟ್ರೀಸ್‌ಗೆ 2 ಯುನಿಟ್ಸ್ ಇದ್ದುದನ್ನು 10 ಯುನಿಟ್ಸ್ ಎಂದು ಮಾಡಬೇಕೆಂದಿದ್ದೇವೆ. ಇದರ ಉದ್ದೇಶ ಇಷ್ಟೇ ಇಲ್ಲಿಗೆ ಫ್ರೀಯಾಗಿ ಬಂದು ತಮ್ಮ ಇನ್‌ವೆಸ್ಟ್‌ಮೆಂಟ್‌ನ್ನು ಮಾಡಲಿ, ನಮ್ಮ ಟೌನ್ ಡೆವಲಪ್‌ಮೆಂಟ್ ಆಗಲಿ, ನಮ್ಮ ಜನಕ್ಕೆ ದುಡ್ಡು ಮತ್ತು ಉದ್ಯೋಗ ಸಿಗಲಿ ಮತ್ತು ಫಾರಿನ್ ಎಕ್ಸ್‌ಚೇಂಜ್ ಸಿಗಲಿ ಎಂಬ ಉದ್ದೇಶದಿಂದ ಮಾಡುತ್ತಾ ಇದ್ದೇವೆ. ಅದು ಬಿಟ್ಟರೆ ಬೇರೆ ಒತ್ತಾಯ ಮಾಡಿ ರೈತರ ಹತ್ತಿರ ಜಮೀನು ಕಿತ್ತುಕೊಳ್ಳುವುದು ಬೇಡ. ಅವನು ಇಷ್ಟ ಬಂದಷ್ಟು ಹೇಳಲಿ, 3 ಲಕ್ಷ ಹೇಳ್ತಾನೋ, 5 ಲಕ್ಷ ಹೇಳ್ತಾನೋ, ಹೇಳಲಿ. ಕೆಲವು ಜಮೀನುಗಳನ್ನು ಆಕ್ವೀಸಿಶನ್ ಮಾಡಿಕೊಡ್ತೀವಿ ಒಂದು ಲಕ್ಷ ಒಂದೂವರೆ ಲಕ್ಷಕ್ಕೆ. ಇವತ್ತು ಆ ಜಮಾನುಗಳು 20 ಲಕ್ಷ ರೂಪಾಯಿಗಳು. ಇದು ಆಗಬಾರದು ಎನ್ನುವ ಉದ್ದೇಶದಿಂದ ಅದನ್ನು ಯೋಚನೆ ಮಾಡುತ್ತಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ರೈತರಿಗೆ ಹೆಚ್ಚಿನ ಪ್ರೈಸ್ ಕೊಡಿ ಅದರ ಬಗ್ಗೆ ನಮ್ಮದೇನೂ ವಾದವಿಲ್ಲ. ಆದರೆ Basic structure of the Land Reforms Act ಚೇಂಜಾಗಬಾರದು. ಏಕೆಂದರೆ ಒಂದು ವೇಳೆ ನೀವು ಇಲ್ಲಿ ಸೀಲಿಂಗ್ ಮಾಡಿದರೆ ಬೇರೆ ಕಡೆ ಅದರ ಲಾಭ ತೆಗೆದುಕೊಳ್ಳುತ್ತಾರೆ.

ಶ್ರೀ ಆರ್. ಎಲ್. ಜಾಲಪ್ಪ : ಯಾರ ಪ್ರಾಜೆಕ್ಟ್ ಅಪ್ರೂವ್ ಆಗುತ್ತದೊ ಅವರಿಗೆ ಮಾತ್ರ ಜಮೀನು ಕೊಡುತ್ತೇವೆ. ಸಿಕ್ಕ ಸಿಕ್ಕಿದವರಿಗೆ ಜಮೀನು ಕೊಡುವುದಕ್ಕೆ ನಾವು ಹೋಗುತ್ತಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಒಂದು ಸಾರಿ 79 ನೀವು ರಿಲಾಕ್ಸ್ ಮಾಡಿದರೆ ಏನಾಗುತ್ತದೆ. ಇವತ್ತು ನೀವಿರುತ್ತೀರಿ ಹೋಗುತ್ತೀರಿ, ನಾಳೆ ಇನ್ನಾರೋ ಬರುತ್ತಾರೆ ಅಥವಾ ನಿಮ್ಮ ಖಾತೆ ಬದಲಾಗುತ್ತದೆ, ಉದ್ದೇಶ ಸರಿ ಇರಬಹುದು ಅಥವಾ ಒಂದು ಇಂಡಸ್ಟ್ರೀಗೆ ಕೊಡಬೇಕೆನ್ನುವ ಉದ್ದೇಶ ಬೇರೆ, ಇಡೀ ಸಮಾಜದ ಲೆಕ್ಕ ತೆಗೆದುಕೊಂಡು ಆ ಸಮಾಜಕ್ಕೆ ತೊಂದರೆಯಾಗುತ್ತದೆ ಎಂಬ ದೃಷ್ಟಿಯಿಂದ ಸೋಷಿಯೋ ಎಕನಾಮಿಕ್ಸ್ ಬೇಸಿಸ್ ಮೇಲೆ ಮಾಡಿದಂತಹ ಕಾನೂನು ಇದು. ಅದಕ್ಕಾಗಿ ಯೋಚಿಸಿ, ಬೇಕಾದರೆ ನೀವು ವಿಶೇಷವಾದ ಬೋರ್ಡ್ ಮಾಡಿ ಅಥವಾ ಇರುವ ಲ್ಯಾಂಡ್ ಅಕ್ವೀಸಿಶನ್‌ನಲ್ಲಿ ತಿದ್ದುಪಡಿ ತನ್ನಿ, ಎಮರ್ಜೆಂಟ್ ಕ್ಲಾಸಸ್ ಅನ್ನು ಅದರಲ್ಲಿ ಸೇರಿಸಿ. ಸೇರಿಸುವಾಗ ಒಂದು ತಿಂಗಳಿನಲ್ಲೇ ತೆಗೆದುಕೊಳ್ಳುವ ಹಾಗೆ ಮಾಡಿ. ಇಲ್ಲವೇ ನೀವು ಪ್ರೈಸ್ ಫಿಕ್ಸ್‌ಮಾಡಿ, ಇಷ್ಟು ಪ್ರೈಸಿಗೆ, ಇಂತಹ ಫ್ಲೋರಿಕಲ್ಚರ್‌ಗೆ, ಹಾರ್ಟಿಕಲ್ಚರ್‌ಗೆ ಇಂಡಸ್ಟ್ರಿಗೆ ಕೊಡಬೇಕೆಂದು ಮಾಡಿ. ನೀವು ಒಂದು ಸಾರಿ ಅದನ್ನು ಕಾನೂನಿನಲ್ಲಿ ಅಳವಡಿಸಿದರೆ, ತಿದ್ದುಪಡಿ ತಂದರೆ ಅದರ ಉಪಯೋಗವನ್ನು ಎಲ್ಲರೂ ಕೂಡ ಮಾಡಿಕೊಳ್ಳುತ್ತಾರೆ. ಮತ್ತು ತಮ್ಮ ಸ್ವಾರ್ಥ ಸಾಧಿಸಿಕೊಂಡು ಈ ಕಾನೂನಿನ ಉದ್ದೇಶ, ಹೋರಾಟ ಏನಿತ್ತು ಅದರ ಹಿಂದೆ ಅದೆಲ್ಲ ಹೋಗಿಬಿಡುತ್ತದೆ ಎಂಬುದನ್ನು ದಯವಿಟ್ಟು ಮರೆಯಬೇಡಿ. ಇದರಲ್ಲಿ ಪ್ರತಿಷ್ಠೆ ಪ್ರಶ್ನೆ ಇಲ್ಲ. ಪದೇಪದೇ ನಾನು ಏಕೆ ಇದನ್ನು ಒತ್ತಾಯ ಮಾಡುತ್ತೇನೆ ಎಂದರೆ, ಇದರ ಹಿಂದೆ ಹೋರಾಟ, ತ್ಯಾಗ ಇದೆ. ಅನೇಕರು ಹೋರಾಟ ಮಾಡಿ ಈ ಕಾನೂನನ್ನು ಅಸ್ತಿತ್ವಕ್ಕೆ ತಂದಿದ್ದಾರೆ. ನಾವೂ ನೀವು ಎಲ್ಲರೂ ಒಪ್ಪಿಕೊಂಡಿದ್ದೇವೆ.

ಮತ್ತು ಉದ್ದೇಶಪೂರ್ವಕವಾಗಿ ಇದಕ್ಕೆ ಸೀಲಿಂಗನ್ನು ಫಿಕ್ಸ್ ಮಾಡಿ ಅಮೌಂಟ್ ಕೂಡ ಫಿಕ್ಸ್ ಮಾಡಿತ್ತು. ಇಂಥವರು ತೆಗೊಳ್ಳಬಾರದು ಎಂಬ ಉದ್ದೇಶ ಏಕಿತ್ತು ? 12 ಸಾವಿರ ಇನ್‌ಕಂ ಇರುವ ಯಾರೇ ಆಗಲಿ, ಸರ್ಕಾರದ ಅನುಮತಿ ಇಲ್ಲದೆ ನಾನ್‌ಅಗ್ರಿಕಲ್ಚರಿಸ್ಟ್ ತೆಗೆದುಕೊಳ್ಳಬಾರದು ಎಂಬ ಉದ್ದೇಶ ಏನೆಂದರೆ ನಾನ್ ಅಗ್ರಿಕಲ್ಚರಿಸ್ಟ್‌ಗಳು ಕೃಷಿಕರ ಜಮೀನನ್ನು ತೆಗೆದುಕೊಳ್ಳಬಾರದು, ದೋಚಬಾರದೆಂಬ ದೃಷ್ಟಿಯಿಂದ ಈ ಕಾನೂನು ಆಗಿತ್ತು. ಆದ್ದರಿಂದ ದಯವಿಟ್ಟು ಇದನ್ನು ಪುನರ್ ಪರಿಶೀಲಿಸಿ. ಭೂಸ್ವಾಧೀನದಲ್ಲಿರಬೇಕಾದರೆ ಸುಧಾರಣೆ ತನ್ನಿ ಬೇರೆ ಕಾನೂನಿನಲ್ಲಿ ಬೇಕಾದರೆ ಸುಧಾರಣೆ ತನ್ನಿ ಎಂಬ ಮಾತನ್ನು ತಮಗೆ ಕಳಕಳಿಯಿಂದ ಹೇಳುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ : ಈಗಿರುವ ಕಾನೂನು ಜೇಡರಬಲೆ ಇದ್ದ ಹಾಗೆ. ಸಣ್ಣ ಸೊಳ್ಳೆಪೊಳ್ಳೆ ಹೋದರೆ ಸಿಕ್ಕಹಾಕಿಕೊಳ್ಳುತ್ತವೆ. ದೊಡ್ಡ ಹುಳು ಹೋದರೆ ಅದನ್ನೇ ಕಿತ್ತುಕೊಂಡು ಆಚೆಗೆ ಹೊರಟು ಹೋಗುತ್ತವೆ. ಹಾಗಾಗಿದೆ ಸಾವಿರಗಟ್ಟಲೆ ಎಕರೆಗಳು ಒಂದೊಂದು ಸಂಸಾರದಲ್ಲಿವೆ ಅಧ್ಯಕ್ಷರೇ, ಅದನ್ನು ನೋಡಿದಾಗ ನಮಗೆ ಆಶ್ಚರ್ಯವಾಗುತ್ತದೆ, ಹೇಗೆ ಈ ಕಾನೂನನ್ನು ಇವರು ವಯಲೆಟ್ ಮಾಡಲು ಸಾಧ್ಯವಾಯಿತು. ನಮ್ಮ ಅಧಿಕಾರಿಗಳು ಏನು ಮಾಡುತ್ತಿದ್ದರು, ನಾವೇನು ಮಾಡುತ್ತಿದ್ದೆವು ಅನಿಸುತ್ತದೆ. ಇದು ಒಂದೊಂದೇ ಬಿಚ್ಚಿದಾಗ ನಾವು ಸರ್ಕಾರ ನಡೆಸುತ್ತಿದ್ದೇವೆಯೇ ಎಂದು ನಮಗೆ ಅನುಮಾನ ಬರುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರನ್ನು ಹಿಡಿಯಬೇಡಿ, ಅವರನ್ನು ಮುಟ್ಟಬೇಡಿ ಎಂದು ಯಾರೂ ನಿಮಗೆ ಹೇಳುತ್ತಿಲ್ಲ. ನೀವು ಮಾಡಿ. ಎಲ್ಲೆಲ್ಲಿ ಇದೆ ಅದನ್ನು ಫೋರ್‌ಫಿಟ್ ಮಾಡಿಕೊಳ್ಳಿರಿ. ನಿಮ್ಮಲ್ಲಿ ಅನೇಕ ಕಾನೂನು ವ್ಯವಸ್ಥೆ ಇದೆ. ಅದರಲ್ಲಿ ಸಂಶೋಧನೆ ತಂದು ಬೇಕಾದರೆ ಏನು ಮಾಡುತ್ತೀರೋ ಮಾಡಿ. ಆದರೆ ಇರುವ, ಬಡವರಿಗೆ ಅಥವಾ ರೈತರಿಗೆ ಕೊಟ್ಟಂತಹ ಒಂದು ಬಿಗಿಯಾದ ಕಾನೂನನ್ನು ಸಡಿಲಗೊಳಿಸಬೇಡಿ ಎಂಬುದು ನನ್ನ ವಾದ. ಎರಡನೆಯದು, ರಾಜ್ಯಪಾಲರ ಭಾಷಣದಲ್ಲಿ ಸಾಲಬಡ್ಡಿ ಮನ್ನಾ ಬಗ್ಗೆ ಹೇಳಿದ್ದೀರಿ ಮತ್ತು ಮೇ ವರೆಗೆ ತಾವು ಎಕ್ಸ್‌ಟೆಂಡ್ ಮಾಡಿದ್ದೀರಿ. ಇದರಿಂದೇನಾಗಿದೆ ಎಂದರೆ, ಪರ್ಟಿಕುಲರ್ಲಿ ಶಾರ್ಟ್ ಟರ್ಮ್ ಕ್ರಾಪ್‌ಲೋನ್‌ನವರಿಗೆ ಮಾತ್ರ ಹೆಚ್ಚಿನ ಅನುಕೂಲವಾಗಿದೆ. ಲಾಂಗ್‌ಟರ್ಮ್ ಅಂದರೆ. ಕ್ಯಾಷ್‌ಕಾರ್ಡ್ ಬ್ಯಾಂಕಿನಿಂದ ಅಥವಾ ಪಿಎಲ್‌ಡಿ ಬ್ಯಾಂಕಿನಿಂದ ಸಾಲ ಪಡೆದು ಕೊಂಡವರಿಗೆ ಇದರ ಲಾಭ ಹೆಚ್ಚಿನ ರೀತಿಯಲ್ಲಿ ಆಗಿಲ್ಲ. ಮತ್ತು ರಿಕವರಿ ಕೂಡ ಆಗಿಲ್ಲ. ನಾನು ಬ್ಯಾಂಕಿನವರಿಗೆ ಫೋನ್ ಮಾಡಿ ಕೇಳಿದೆ, ಹಾರ್‌ಡ್ಲಿ 23 ಪರ್ಸೆಂಟ್ ಮಾತ್ರ ರಿಕವರಿಯಾಗಿದೆ ಈಗ ನೀವು 9 ಪರ್ಸೆಂಟ್ ಮಿನಿಮಂ ಇಂಟರೆಸ್ಟ್ ಕೊಡಬೇಕು ಎಂಬುದರಿಂದ. ಅದಕ್ಕಾಗಿ ನಾನು ಏನು ಹೇಳುತ್ತೇನೆಂದರೆ.

ಅಧ್ಯಕ್ಷರು : ಶಾರ್ಟ್‌ಟರ್ಮ್ ಲೋನ್ ಕೊಟ್ಟಿದ್ದೀರಲ್ಲ ಅಲ್ಲಿ ರಿಕವರಿ ಚೆನ್ನಾಗಿ ಆಗಿದೆಯೋ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಲ್ಲಿ ಸುಮಾರು 60-70 ಪರ್ಸೆಂಟ್‌ವರೆಗೆ ಬಂದಿದೆ. ಆದರೆ ಒಬ್ಬೊಬ್ಬರಿಗೆ ಬಹಳ ಅಂದರೆ 500-100 ಇದಕ್ಕಿಂತ ಜಾಸ್ತಿ ಸಿಗುವುದಿಲ್ಲ. ನೀವು ಆದ್ದರಿಂದ ಇಟ್ಟಂತಹ ಹಣದಲ್ಲಿ ಬಹಳ ಉಪಯೋಗ ಅಂದರೆ 40-50 ಕೋಟಿಗೆ ಬರಬಹುದು. ನೀವು ಕ್ಯಾಷ್‌ಕಾರ್ಡ್‌ಬ್ಯಾಂಕಿಗೆ

ಇರುವ ಸವಲತ್ತುನ್ನು ಎಕ್ಸ್‌ಟೆಂಡ್ ಮಾಡಿದರೆ ಬಹುಶಃ ನೂರು ಕೋಟಿ ಏನು ಇಟ್ಟಿದ್ದೀರಿ ಅಷ್ಟಾದರೂ ಖರ್ಚಾಗುತ್ತದೆ. ಮತ್ತು ನಿಮ್ಮ ಮನಸ್ಸಿಗೂ ತೃಪ್ತಿಯಾಗುತ್ತದೆ. ನಾವು ನೂರು ಕೋಟಿ ಅಂತ ಹೇಳಿಕೊಂಡೆವು ಅಷ್ಟಾದರೂ ಖರ್ಚಾಯಿತಲ್ಲ ಎಂದು. ಇಲ್ಲ, ಬರೀ ಬಜೆಟ್‌ನಲ್ಲಿ ನೂರು ಕೋಟಿ ಇತ್ತು 30-40 ಕೋಟಿ ಮಾತ್ರ ಕನ್ಸೆಸ್‌ಷನ್ ಕೊಟ್ಟರೆ ಇದರಿಂದ ಏನೂ ಪ್ರಯೋಜನವಾಗುವುದಿಲ್ಲ. ಯಾವ ಉದ್ದೇಶಕ್ಕಾಗಿ ನೀವು ಹಣ ಇಟ್ಟ ಮೇಲೆ ಅದಕ್ಕಾಗಿ ಖರ್ಚು ಮಾಡಿ, ಯಾವಾಗ ಜನ ಮುಂದೆ ಬರುವುದಿಲ್ಲವೋ ಎಕ್ಸ್‌ಟೆನಶನ್ ಕೊಟ್ಟು ಕ್ಯಾಷ್‌ಕಾರ್ಡ್ ಬ್ಯಾಂಕಿಗೂ ಕೂಡ ಈ ಸೌಲಭ್ಯವನ್ನು ಮೇ ವರೆಗೂ ಕೊಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಬಹುಶಃ ಜಾಲಪ್ಪನವರು ಇದನ್ನು ಒಪ್ಪುತ್ತಾರೆಂದು ಕಾಣುತ್ತದೆ. ಏಕೆಂದರೆ ಯಾವಾಗಲೂ ಅವರು ಸಾಲ ಮನ್ನಾ ಬಗ್ಗೆ ಬಹಳಷ್ಟು ಹೇಳುತ್ತಿರುತ್ತಾರೆ. ಅವರು ಸಹಕಾರಿ ಕ್ಷೇತ್ರದಿಂದ ಬಂದವರು. ಇದರಿಂದ ನಿಮ್ಮ ಕ್ಯಾಷ್‌ಕಾರ್ಡ್‌ಬ್ಯಾಂಕಿನವರಿಗೂ ಹೆಚ್ಚಿನ ಉಪಯೋಗವಾಗಿ ಹೆಚ್ಚಿನ ರೀತಿಯಲ್ಲಿ ರಿಕವರೀನೂ ಆಗುತ್ತದೆ. ಮತ್ತು ಅವರೇನು ಟಾರ್ಗೆಟ್ ಫಿಕ್ಸ್ ಮಾಡಿದ್ದರು 1000-1200 ಕೋಟಿ ಮುಂದೆ ಕೊಡುವುದು ಅದೂ ಕೂಡ ಸಾಧ್ಯತೆ ಇದೆ. ಏಕೆಂದರೆ ರಿಕವರಿ ಜಾಸ್ತಿಯಾದಾಗ ನೀವು ಹೇಳಿದ ಹಾಗೆ ಡಿಸ್‌ಬರ್ಸ್‌ಮೆಂಟ್ ಕೂಡ ಜಾಸ್ತಿಯಾಗುತ್ತದೆ. ಇಲ್ಲದಿದ್ದರೆ ಅದೂ ಕೂಡ ಸಾಧ್ಯವಿಲ್ಲ.

ಶ್ರೀ ಆರ್ ಎಲ್. ಜಾಲಪ್ಪ : ಸಾಲ ತಗೊಂಡವನಿಗೆ ಬಡ್ಡಿ ಏನೋ ಕಷ್ಟವಾಯಿತು ಅಂತ ಅದು ಬೇಡ ಅಂತ ಹೇಳಿದ್ದೇ. ಆದರೆ ನಮಗೆ ಫೈನಾನ್ಸ್ ಮಾಡುತ್ತಿರುವ ನಬಾರ್ಡ್ ಸಂಸ್ಥೆಯವರು, ನೀವು ಈ ಕನ್‌ಷೇಶನ್ ಕೊಡುವುದರಿಂದ ನಮ್ಮ ಆರ್ಥಿಕ ಶಿಸ್ತು ಹೋಗುತ್ತದೆ ಆದ್ದರಿಂದ ಫರ್ದರ್‌ಲೋನ್ ಕೊಡುವುದಿಲ್ಲ ಎಂದು ಹೇಳುತ್ತಿದ್ದಾರೆ. 8000-10000 ಕೋಟಿಗಳು ಬ್ಯಾಂಕ್‌ಸ್ಕಾರಿ, ಶೇರ್‌ಸ್ಕಾವರ್‌ಗಳಲ್ಲಿ ಹೋದರೆ ಪರವಾಗಿಲ್ಲ, ಅದೇ ನಾವು ಅಲ್ಲಿ ಇಲ್ಲಿ ವಸೂಲು ಮಾಡಿ 100 ಕೋಟಿ ಬರುತ್ತೇವೆ ರೈತರಿಗೆ ಬಿಜಿ ಎಂದರೆ ಅದು ಕೊಡುವುದಕ್ಕಾಗುವುದಿಲ್ಲ ಎನ್ನುತ್ತಾರೆ. ಆದ್ದರಿಂದ ದಯವಿಟ್ಟು ನಿಮ್ಮ ಸರ್ಕಾರಕ್ಕೆ ಹೇಳಿ ಸ್ವಲ್ಪ ಲಿಬರಲಾಗಿರಿ ಎಂದು ಹೇಳಿದರೆ ನಾವೂ ಸ್ವಲ್ಪ ಏನಾದರೂ ಬಡವರ ಸೇವೆ ಮಾಡಬಹುದು ಅಂತ. ತಮ್ಮ ಪ್ರಭಾವ ಉಪಯೋಗಿಸಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಬಾರ್ಡ್ ಸಂಸ್ಥೆಯವರು ನಮ್ಮ ಮಾತಿಗಿಂತಲೂ ಶ್ರೀ ವಿಶ್ವನಾಥ್, ಗುರುಪಾದಪ್ಪ ನಾಗಮರಪಲಳ್ಳಿ, ಜಾಲಪ್ಪ ಅವರ ಮಾತನ್ನೇ ಕೇಳುವುದು. ನಮ್ಮದು ನಡೆಯುವುದಿಲ್ಲ. ನಾವು ಫೈನಾನ್ಸ್ ಮಿನಿಸ್ಟರ್ ಹತ್ತಿರ ಹೋಗಿ ಕೇಳಿಕೊಳ್ಳಬಹುದು. ನಬಾರ್ಡ್‌ನವರ ಬಳಿ ನಾವು ಹೋದರೂ ಕೂಡ ಇಂಟರ್‌ವ್ಯೂ ಕೊಡುವುದಿಲ್ಲ. ಕೊನೆಗೆ ಇವರನ್ನೇ ಕಳಿಸಬೇಕು, ಅದಕ್ಕೇ ಮೊನ್ನೆ ಇವರೂ ನಾಣಯ್ಯನವರು ಎಲ್ಲಾ ಹೋಗಿಬಂದಿದ್ದಾರೆ. ಅದೇನೆ ಇರಲಿ. ಈಗ ಇದರ ಬಗ್ಗೆ ಕೂಡ ಮುಖ್ಯಮಂತ್ರಿಗಳು ಪುನಃ ಒಮ್ಮೆ ಯೋಜನೆ ಮಾಡಬೇಕು. ಮತ್ತು 100 ಕೋಟಿ ಸದುಪಯೋಗವಾಗಬೇಕಾದರೆ ಈ ಕ್ಯಾಷ್‌ಕಾರ್ಡ್ ಬ್ಯಾಂಕಿಗೆ ಹೆಚ್ಚಿನ ರಿಕವರಿ ಮಾಡುವುದಕ್ಕಾಗಿ ಬಡ್ಡಿ ಮನ್ನಾ ಸವಲತ್ತನ್ನು ಅವರಿಗೂ ಅಪ್ಲಿಕಬಲ್

ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ನಾಲ್ಕನೆಯಾದಾಗಿ ಕುಡಿಯುವ ನೀರಿನ ಬಗ್ಗೆ ಸಾಕಷ್ಟು ಚರ್ಚೆ ನಾವು ನಡೆಸಿದ್ದೇವೆ. ಆಗ ಶ್ರೀ ಪ್ರಕಾಶ್ ಅವರಿಗೆ, ಈ ಕುಡಿಯುವ ನೀರಿನ ಬಗ್ಗೆ ನಾನು ಒಂದು ನೋಟು ಕೊಟ್ಟಿದ್ದೇ ಶ್ರೀ ಪ್ರಕಾಶ್ ಅವರಿಗೆ, ಈ ಕುಡಿಯುವ ನೀರಿನ ಬಗ್ಗೆ ನನಗೆ ಬಂದ ಸುದ್ದಿ ಪ್ರಕಾರ ತಮ್ಮ ಇಲಾಖೆಯಲ್ಲಿ ಸಾಕಷ್ಟು ರಿಗ್ಸ್‌ಗಳಿವೆ ಆ ರಿಗ್ ಬಳಕೆಗೆ ಹಾಕಲು ಡೀಸೆಲಿಲ್ಲ ಮತ್ತು ಸ್ಪೇರ್‌ಪಾರ್ಟ್ಸ್ ಕೊಳ್ಳಲು ದುಡ್ಡಿಲ್ಲ ಎಂದು ಹೇಳಿ, ಮತ್ತು ವಿಶ್ವಬ್ಯಾಂಕಿನಿಂದ ನಿಮಗೆ ಸಾಲ ಕೂಡ ಕೊಟ್ಟು ಐದಾರು ರಿಗ್ಸನ್ನು ಪರ್ಚೇಸ್ ಮಾಡಲು, ಸಾಲಸಿಕ್ಕಿದೆ ಎಂಬುದು ನನಗೆ ಗೊತ್ತಾಗಿದೆ. ಇದೆಲ್ಲವನ್ನೂ ಬಿಟ್ಟು ಜಿಲ್ಲಾಧಿಕಾರಿಗಳು ಎಲ್ಲಾ ಕಡೆ ಖಾಸಗಿ ರಿಗ್ಸನ್ನೇ ಉಪಯೋಗ ಮಾಡುತ್ತಿದ್ದಾರೆ. ಈ ಖಾಸಗೀ ರಿಗ್ಸ್ ಉಪಯೋಗಿಸುವುದರಲ್ಲಿ ಒಂದು ಲಾಭ ಇದೆ. ಇನ್ನೊಂದು ಲುಕ್ಸಾನು ಇದೆ. ಲಾಭ ಏನೆಂದರೆ ತಕ್ಷಣ ನೂರಾರು ರಿಗ್ಸ್ ಅಲ್ಲಿ ಇಲ್ಲಿ ಓಡಾಡಬಹುದು, ಅದೂ ಹೆಚ್ಚಾಗಿ ತಮಿಳುನಾಡು ಆಂಧ್ರದವು. ಕರ್ನಾಟಕ ರಾಜ್ಯದಲ್ಲಿಯಂತೂ ಪ್ರೈವೇಟ್ ರಿಗ್ಸ್ ಬಹಳ ಕಡಿಮೆ. ಅವರೇನು ಮಾಡುತ್ತಾರೆ, ಅನೇಕ ಸಾರಿ 260 ಫೀಟ್ ಹಾಕಿದ್ದೇವೆ ಎಂದು ಹೇಳಿ 150 ಫೀಟ್ ಹಾಕುವುದು, ಅವರು ಅಧಿಕಾರಿಗಳು ಕೊಲ್ಯೂಡ್ ಆಗುತ್ತಾರೆ. ಅದಕ್ಕಾಗಿ ಯಾವಾಗ ನಿಮ್ಮ ಓನ್ ರಿಗ್ಸ್ ಇವೆ, ಮತ್ತು ಐದಾರು ರಿಗ್‌ನ್ನು ಪರ್ಚೇಸ್ ಮಾಡುವುದಕ್ಕೆ ನಿಮಗೆ ಪ್ರಾವಿಷನ್ ಇದೆ, ಅಂದಾಗ ಅದರ ಉಪಯೋಗವನ್ನು ಮಾಡಿಕೊಂಡು ನೀವು ಪ್ರೈವೇಟ್ ರಿಗ್‌ನ್ನು ಎನ್‌ಗೇಜ್ ಮಾಡಬೇಕೇ ಹೊರತಾಗಿ ಅದನ್ನು ಬಿಟ್ಟು ಅದಕ್ಕೆ ಡೀಸಲ್ ಹಾಕುವುದಕ್ಕೆ ದುಡ್ಡಿಲ್ಲ, ಸ್ಪೇರ್‌ಪಾರ್ಟ್ಸ್ ತೆಗೆದುಕೊಳ್ಳುವುದಕ್ಕೆ ದುಡ್ಡಿಲ್ಲ ಎಂದಾಗ ಮತ್ತೆ ಪ್ರೈವೇಟ್‌ನವರಿಗೆ ಎಲ್ಲಿಂದ ದುಡ್ಡು ಕೊಡುತ್ತೀರಿ ? ಆದಕ್ಕೆ ದಯವಿಟ್ಟು ಈ ಕಡೆ ಗಮನವನ್ನು ಕೊಟ್ಟು ಆ ಒಂದು ಕೆಲಸವನ್ನು ಮಾಡುತ್ತೀರಿ. ಮತ್ತು ಡಿಪಾರ್ಟ್‌ಮೆಂಟಲ್ ರಿಗ್ಸ್‌ನ್ನು ಉಪಯೋಗ ಮಾಡಿಕೊಂಡು ಎಲ್ಲಾ ಕಡೆ ಪ್ರತಿ ಜಿಲ್ಲೆಗಳಿಗೆ ಪರ್ಟಿಕ್ಯುಲರ್ಲಿ ಹೈಸ್ಪೀಡ್ ರಿಗ್ಸ್ ಕಳುಹಿಸುತ್ತೀರಿ ಎಂದು ಈ ಸಂದರ್ಭದಲ್ಲಿ ನಾನು ಸಲಹೆಯನ್ನು ಕೊಡುತ್ತೇನೆ.

11.50 ಎ.ಎಂ.

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೇ, ನಮ್ಮ ಜನಾರೋಗ್ಯ ಇಂಜಿನಿಯರಿಂಗ್ ವಿಭಾಗದಲ್ಲಿ ಇರುವ ರಿಗ್ಸ್‌ಗಳನ್ನು ಉಪಯೋಗಿಸಬೇಕು ಎಂದು ಮಾನ್ಯ ಸದಸ್ಯರ ಸಲಹೆ ಏನಿದೆ, ಅದು ಬಹಳ ಸ್ವಾಗತಾರ್ಹವಾದದ್ದು. ಮತ್ತೆ ಅವರು ನನಗೆ ಆ ವಿಚಾರದಲ್ಲಿ ಒಂದು ಟಿಪ್ಪಣಿಯನ್ನು ಕೂಡ ಕಳುಹಿಸಿಕೊಟ್ಟಿದ್ದರು. ನಮ್ಮಲ್ಲಿ 71 ಇಂಥ ರಿಗ್‌ಗಳು ಇದ್ದಾವೆ. ಈ 71 ರಿಗ್‌ಗಳಲ್ಲಿ ಸಾಧಾರಣವಾಗಿ 10-12 ರಿಗ್‌ಗಳು ಯಾವಾಗಲೂ ಒಂದಲ್ಲ ಒಂದು ದುರಸ್ತಿ ಕಾರಣಕ್ಕಾಗಿ ನಿಂತಿರುತ್ತವೆ. ಉಳಿದವುಗಳು ಕೆಲಸ ಮಾಡುತ್ತವೆ. ಜನವರಿ 10ನೇ ತಾರೀಖು ಈ ವರ್ಷದ ಪ್ರಾರಂಭದ ದಿವಸದಲ್ಲಿ ಅವರು ಎಷ್ಟು ಸಾಮರ್ಥ್ಯಕ್ಕೆ ಒಳಪಡುವ ರಿಗ್‌ಗಳನ್ನು ಕೊರೆಯಲಾಗುತ್ತಿದೆ. ಉಳಿದಿರುವ ಪಾಯಿಂಟ್‌ಗಳನ್ನು ನೀವು ಸರೆಂಡರ್ ಮಾಡಬೇಕೆನ್ನುವ ಒಂದು ಸುತ್ತೋಲೆ

ಇತ್ತು. ಅವರು ಮಾರ್ಚ್ ತಿಂಗಳೊಳಗಾಗಿ ನಾವು ಮಾಡಬೇಕು ಈ ಸಂವತ್ಸರದ ಕೊನೆಗೆ ಎನ್ನುವ ಲೆಕ್ಕಾಚಾರದ ಮೇಲೆ ಅವರು ಜನವರಿ 10ನೇ ತಾರೀಖು ಕೆಲವು ಪಾಯಿಂಟ್‌ಗಳನ್ನೆಲ್ಲ ಸರೆಂಡರ್ ಮಾಡಿದರು. ನಂತರ ಅದನ್ನು ರಿವ್ಯೂ ಮಾಡಿ ಪರಿವೀಕ್ಷಣೆಯ ನಂತರ ನಮಗೆ ಇರುವ ತಾವು ಹೇಳಿದಂತೆಯೇ 10-12 ರಿಗ್‌ಗಳಷ್ಟು ದುರಸ್ತಿಯ ಸಂದರ್ಭದಲ್ಲಿದ್ದರೂ ಕೂಡ ಕನಿಷ್ಟ ಪಕ್ಷ ಸಾವಿರ ಕೊಳವೆ ಬಾವಿಗಳನ್ನು ತೆಗೆಸುವ ಸಾಮರ್ಥ್ಯ ನಮಗಿದೆ. ಅದನ್ನು ಈಗಾಗಲೇ ನಮ್ಮ ಇಲಾಖೆಗಳ ಮುಖ್ಯಸ್ಥರಿಗೆ ತಿಳಿಸಿದ್ದೇವೆ. ಅವರೆಲ್ಲರನ್ನೂ ಉಪಯೋಗಿಸಬೇಕು ಎನ್ನುವ ಮಾತನ್ನು ಹೇಳಿದ್ದೇನೆ. ಇನ್ನೇನು ಡೀಸಲ್‌ಗಾಗಿ ದುಡ್ಡಿಲ್ಲ ಎಂದು ಪ್ರಾಯಶಃ ಯಾರೋ ಅಧಿಕಾರಿ ತಪ್ಪು ಅಭಿಪ್ರಾಯವನ್ನು ಕೊಟ್ಟಿರಬಹುದು. ಈಗ ಹೆಚ್ಚುವರಿ ಹಣವನ್ನು ಕೂಡ ನಾವು ಬಿಡುಗಡೆ ಮಾಡಿದ್ದೇವೆ. ತಮಗೆ ಗೊತ್ತಿರುವಂತೆ ಕೇಂದ್ರ ಮತ್ತು ರಾಜ್ಯವಲಯದಲ್ಲಿ 70 ಲಕ್ಷ ರೂಪಾಯಿಗಳು ಇರುವಂಥ ಹಣವನ್ನು ನಾವು ಹೆಚ್ಚುವರಿ ಹಣವಾಗಿ 104 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿರುವುದು ತಮಗೆ ಗೊತ್ತಿದೆ. ಮತ್ತೆ 20 ಕೋಟಿ 104 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಮೊನ್ನೆ ಮತ್ತೆ 20 ಕೋಟಿ ರೂಪಾಯಿಗಳನ್ನು ಹೊರತಾಗಿ ಜನವರಿ 31ನೇ ತಾರೀಖಿನ ದಿವಸ ಫೆಬ್ರವರಿ 28ನೇ ತಾರೀಖಿಗೆ ಬಿಡುಗಡೆ ಮಾಡಿದ್ದರಲ್ಲಿ ಎರಡು ಕೋಟಿ ರೂಪಾಯಿಗಳನ್ನು ಈ ದುರಸ್ತಿ ಕಾರ್ಯಕ್ಕಾಗಿ ಉಪಯೋಗಿಸಬೇಕು ಎಂದು ತಿಳಿಸಿದ್ದೇವೆ. ಈಗ ಹೆಚ್ಚು ರಿಗ್‌ಗಳನ್ನು ಕೊಳ್ಳಬೇಕು ಎನ್ನುವ ಮಾತು ಏನಿದೆ, ಅದಕ್ಕೆ ನನ್ನ ಒಪ್ಪಿಗೆ' ಇದೆ.

ಶ್ರೀ ಎಂ. ಘೋರ್ಪಡೆ : ಮಾನ್ಯ ಅಧ್ಯಕ್ಷರೇ, ಈ ಕುಡಿಯುವ ನೀರಿನ ಸಮಸ್ಯೆ ಬಹಳ ಗಂಭೀರವಾಗಿದೆ. ಮಾನ್ಯ ಮಂತ್ರಿಗಳು ನಮಗೆ ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಕರ್ನಾಟಕದಲ್ಲಿ ಹೆಚ್ಚು ಕಡಿಮೆ 50 ಸಾವಿರ ಹ್ಯಾಬಿಟೇಷನ್ಸ್ ಇವೆ. ಈಗ 50 ಸಾವಿರ ಹ್ಯಾಬಿಟೇಷನ್ಸ್‌ನಲ್ಲಿ ಎಷ್ಟು ಕಡೆ ನೀವು ನೀರನ್ನು ಟ್ರಾನ್ಸ್ ಪೋರ್ಟ್ ಟ್ರಕ್ಕಿಂದ ತೆಗೆದುಕೊಂಡು ಹೋಗುವ ಪರಿಸ್ಥಿತಿಯನ್ನು ನೀವು ಗುರುತು ಮಾಡಿದ್ದೀರಿ. ಇದು ಜಿಲ್ಲಾವಾರು ಎಷ್ಟು ಕಡೆ ಎಂದು ಸ್ಪಷ್ಟವಾಗಿ ಹೇಳಬೇಕು. ಅನಂತರ ಎಲ್ಲಿ ನೀರಿನ ಅಭಾವ ಇದೆ ನೀರೇ ಇಲ್ಲ, ಅಂಥದ್ದನ್ನು ಗುರುತು ಮಾಡಿ ನಿಮ್ಮ ಕಡೆ ಇರುವ ರಿಗ್‌ನ್ನು ಎರಡೇ ವಾರದಲ್ಲಿ ಅಂಥ ಹಳ್ಳಿಗಳಿಗೆ ನೇರವಾಗಿ ಹೋಗುವ ವ್ಯವಸ್ಥೆ ಏನು ಮಾಡಿದ್ದೀರಿ ಅದನ್ನು ಹೇಳಬೇಕು. ಏಕೆಂದರೆ ನಿಮ್ಮ ಕಡೆ ರಿಗ್ ಇದೆ, ಎಷ್ಟೋ ರಿಗ್ಸ್ ರಿಪೇರಿಯಲ್ಲಿ ಇಲ್ಲ. ಮತ್ತೆ ಪ್ರೈವೇಟ್ ರಿಗ್ಸ್‌ಗಳನ್ನು ಬಾಡಿಗೆ ಪಡೆದುಕೊಳ್ಳುವುದಕ್ಕೆ ನಿಮಗೆ ಅವಕಾಶದವಿದೆ. ಅವಶ್ಯಕತೆ ಏನಿದೆ ಎಂದರೆ, ಯಾವ ಜಿಲ್ಲೆಯಲ್ಲಿ ನೀರೇ ಸಿಕ್ಕಿಲ್ಲ ಅಂಥ ಕಡೆ ರಿಗ್ ಹೋಗಬೇಕು. ಆ ವ್ಯವಸ್ಥೆ ಎಷ್ಟರಮಟ್ಟಿಗೆ ಆಗಿದೆ, ಇದು ಎರಡನ್ನು ಪುನಃ ಹೇಳುತ್ತೇನೆ ಎಷ್ಟುಕಡೆ ನೀವು ಟ್ರಕ್ಕಿಂದ ನೀರನ್ನು ತೆಗೆದುಕೊಂಡು ಹೋಗುವ ಒಂದು ಪರಿಸ್ಥಿತಿ ಬಂದಿದೆ ಎಂದು ಮಾನ್ಯ ಮಂತ್ರಿಗಳ ಗಮನಕ್ಕೆ ಬರಬಹುದು. ಎಷ್ಟು ಗುರುತು ಮಾಡಿದ್ದೀರಿ. ಇದು ಹಣದ ಪ್ರಶ್ನೆಯಲ್ಲ. ಇದು ಪ್ರಯತ್ನದ ಪ್ರಶ್ನೆ. ಅನ್ ದಿ ಗ್ರೌಂಡ್, ಮತ್ತೆ ರಿಗ್ಸ್‌ನ್ನು ಅಂಥ ಕಡೆಯಲ್ಲಿ ಬೋರ್‌ವೆಲ್ ತೆಗೆದರೂ ಕೂಡ ನೀರು ಸಿಕ್ಕಿಲ್ಲ, ಅಂಥ ಕಡೆ ಹೊಸ ಪಾಯಿಂಟ್‌ನ್ನು ನೀವು ಏನು ಹುಡುಕಬೇಕಾಗುತ್ತದೆ, ಆ ಪ್ರಯತ್ನ ನೇರವಾಗಿ

ನಡೆಯಬೇಕು. ಇಲ್ಲದಿದ್ದರೆ ನಿಮ್ಮ ರಿಗ್ಸ್ ಕೆಪಾಸಿಟಿ ಏನು ಇದೆ, ಅದು ವ್ಯತ್ಯಾಸವಾಗುತ್ತದೆ. ಎಲ್ಲಿ ಅದರ ಮೇಲೆ ಪ್ರಭಾವ ಬರುತ್ತದೆ, ಅಂಥ ಕಡೆ ನಾಲ್ಕು ಕಡೆ ರಿಗ್‌ನ್ನು ಬೋರ್‌ವೆಲ್ ಇದ್ದ ಕಡೆ ರಿಗ್ ತೆಗೆದುಕೊಂಡು ಹೋದರೆ ಏನು ಪ್ರಯೋಜನ ? ಎಲ್ಲಿ ಒಂದೂ ಬೋರ್‌ವೆಲ್ ಯಶಸ್ವಿಯಾಗುವುದಿಲ್ಲ, ಅಥವಾ ಯಶಸ್ವಿಯಾಗಿದ್ದರೆ ನೀರು ಬತ್ತಿ ಹೋಗಿದೆ ಅಂಥ ಕಡೆ ಆ ರಿಗ್‌ನ್ನು ನೇರವಾಗಿ ಕಳುಹಿಸುವಂಥ ವ್ಯವಸ್ಥೆ ಏನು ಮಾಡಿದ್ದೀರಿ. ಅದನ್ನು ಸ್ವಲ್ಪ ದಯವಿಟ್ಟು ಹೇಳಬೇಕು.

ಶ್ರೀ ಎಂ. ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ 4340 ಗ್ರಾಮಗಳು ಸಮಸ್ಯಾತ್ಮಕ ಗ್ರಾಮಗಳು ಎಂದು ಹೇಳಿ ಗುರುತಿಸಿದ್ದಾರೆ. ಅವರು ಹೆಚ್ಚುಕಡಿಮೆ ಐದು ಸಾವಿರ ಎಂದು ಹೇಳಿದಂತೆ 4300 ಜನವಸತಿ ಗ್ರಾಮಗಳು ಏನಿವೆ, ಅವುಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ ಎಂದು ಈಗಾಗಲೇ ನನಗೆ ಗೊತ್ತಾಗಿದೆ. ಅವುಗಳನ್ನು ಗುರುತಿಸಿದ್ದೇವೆ. ಮತ್ತೆ ನಮ್ಮಲ್ಲಿರುವ ಜನಾರೋಗ್ಯ ಇಂಜಿನಿಯರಿಂಗ್ ವಿಭಾಗದಿಂದಲೇ 71 ರಿಗ್‌ನಿಂದಲೇ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಆಗುತ್ತಿಲ್ಲ. ತಾವು ಹೇಳಿದಂತೆ ಹಣ ಒಂದೇ ಪ್ರಶ್ನೆಯಲ್ಲ. ಅಂತರ್‌ಜಲದ ಬಳಕೆ ವಿಚಾರದಲ್ಲಿ ನಾವು ಮಾಡಬೇಕಾದಂಥ ಪ್ರಯತ್ನಗಳು ಇವೆ. ನಾವು ಹೇಗೆ ನೀರನ್ನು ಹೆಚ್ಚೆಚ್ಚು ಇಂಗಿಸುತ್ತೇವೆ, ಮತ್ತೆ ಅದನ್ನು ಹೇಗೆ ಉಪಯೋಗಿಸಿಕೊಳ್ಳುತ್ತೇವೆ ಎನ್ನುವುದರ ಮೇಲೂ ಕೂಡ ಇದು ಅವಲಂಬಿತವಾಗಿರುವ ಪ್ರಶ್ನೆ. ಇದಕ್ಕೆ ದೂರದೃಷ್ಟಿ ಇಟ್ಟುಕೊಂಡು ಕೆಲಸ ಮಾಡಬೇಕಾದಂಥದ್ದು ಕೂಡ ಇದೆ. ಇದರ ಜೊತೆಗೆ ನಾವು ಬೇರೆ ಖಾಸಗಿ ರಿಗ್‌ಗಳನ್ನು ಉಪಯೋಗಿಸಬೇಕೆನ್ನುವ ಸುತ್ತೋಲೆಯನ್ನು ಕಳುಹಿಸಿದ್ದೇವೆ. ಎಲ್ಲಿ ಸಮಸ್ಯಾತ್ಮಕ ಗ್ರಾಮಗಳು ಇವೆ, ಮೊದಲನೆಯದಾಗಿ ಅದಕ್ಕೆ ಆದ್ಯತೆಯನ್ನು ಕೊಡಬೇಕು. 100ಕ್ಕೆ 70-80 ರಷ್ಟು ಕೆಲಸ ಮುಕ್ತಾಯವಾಗಿರುವ ಕೆಲವು ಹಂತದ ನೀರು ಸರಬರಾಜು ಯೋಜನೆಗಳಿಗೆ ಮಾತ್ರ ಹೆಚ್ಚುವರಿ ಹಣವನ್ನು ಕೊಟ್ಟಿರುವುದನ್ನು ಉಪಯೋಗಿಸಬೇಕು. ಅದನ್ನು ತತ್‌ಕ್ಷಣದಲ್ಲಿಯೇ ಸರಬರಾಜಿಗೆ ವ್ಯವಸ್ಥೆ ಮಾಡಬೇಕು. ಇಲ್ಲದೆ ಹೋದರೆ ಹಳೆಯ ಕೆಲಸಗಳನ್ನು ಅಥವಾ ಯಾರದೋ ಒತ್ತಡಗಳಿಗಾಗಿ ಪ್ರಾರಂಭ ಮಾಡಿದ್ದಂಥಾದಕ್ಕಾಗಿ ಈ ಸಮರೋಪಾದಿಯಲ್ಲಿ ಮಾಡಬೇಕಾದ ಕೆಲಸದ ಹಣವನ್ನು ಬಳಸಬಾರದು ಎನ್ನುವ ಸುತ್ತೋಲೆಯನ್ನು ಕಳುಹಿಸಿಕೊಟ್ಟಿದ್ದೇವೆ. ಎರಡನೆಯದು ಖಾಸಗಿಯವರನ್ನು ಕರೆಸಿ ಮಾಡುವ ಸಂದರ್ಭದಲ್ಲಿ ಟೆಂಡರ್‌ಗಳನ್ನು ಕರೆಯಬೇಕು ಎನ್ನುವ ವಿಧಿನಿಯಮಗಳನ್ನು ಅದಕ್ಕೇನಾದರೂ ಅಡ್ಡಿ ಬರುವುದಾಗಿದ್ದರೆ ಆ ನಿಯಮಾವಳಿಗಳನ್ನು ಕೂಡ ನಾವು ಸಡಿಲ ಮಾಡಿದ್ದೇವೆ. ನಿಮ್ಮ ವಿವೇಚನೆಗೆ ಅನುಗುಣವಾದಂಥ ರೀತಿಯಲ್ಲಿ ನೀವು ಆ ಕೂಡಲೇ ಖಾಸಗಿಯವರಿಗೆ ಕೊಡಬಹುದು ಎನ್ನುವ ಮಾತನ್ನು ತಿಳಿಸಿದ್ದೇವೆ. ಮೂರನೆಯದ್ದು ಶಾಶ್ವತ ಜಲಮೂಲಗಳೇನಾದರೂ ಪಕ್ಕದಲ್ಲಿದ್ದರೆ ಅದಕ್ಕೆ ರಾಜೀವ್‌ಗಾಂಧಿ ಟೆಕ್ನಾಲಜಿಕಲ್ ಮೆಷಿನ್‌ನಿಂದ ಹಣವನ್ನು ಒದಗಿಸುವುದಾಗಲಿ ಅಥವಾ ಕೆಲವು ಗ್ರಾಮಗಳ ಸಮುಚ್ಚಯಗಳಿದ್ದರೆ ಅದೆಲ್ಲಕ್ಕೂ ಕಲೆತು ಶಾಶ್ವತ ಜಲಮೂಲಗಳಿಂದ ಕೊಳವೆ ಬಾವಿಗಳ ಮೂಲಕವಾಗಿ ಹೆಚ್ಚು ನೀರು ಸಂಗ್ರಹವಾಗಬೇಕೆನ್ನುವ ವ್ಯವಸ್ಥೆ

ಮಾಡಬೇಕು ಎಂದು ಹೇಳಿದ್ದೇವೆ. ಆದರೆ ಇದರಲ್ಲಿರುವ ಒಂದು ಪ್ರಶ್ನೆ ಏನೆಂದರೆ, ಮಾನ್ಯ ಸದಸ್ಯರು ಎತ್ತಿದಂತೆ, ನೀರಿನ ಜೊತೆ ಜೊತೆಗೂ ಕೂಡ ನಮ್ಮ ವಿದ್ಯುಚ್ಛಕ್ತಿ ಅಭಾವ ಕೂಡ ಈ ತೊಂದರೆಗೆ ಕಾರಣೀಭೂತವಾಗಿದೆ. ಅದರ ವೋಲ್ಟೇಜ್ ಕಡಿಮೆಯಾಗುವ ಕಾರಣಕ್ಕಾಗಿಯೇ ನೀರು ಎತ್ತುವ ತನ್ನ ಸಾಮರ್ಥ್ಯವನ್ನು ಪಂಪುಗಳು ಕಳೆದುಕೊಂಡಿರುವುದರಿಂದ ಕುಡಿಯುವ ನೀರಿನ ಸರಬರಾಜಿಗೆ ಆಗಿರುವ ತೊಂದರೆಯೂ ಕೂಡ ಬಹುಮಟ್ಟಿಗೆ ಈ ಉಲ್ಬಣದ ಸ್ಥಿತಿಗೆ ಕಾರಣಭೂತವೂ ಆಗಿದೆ. ಇನ್ನು ನಾಲ್ಕನೆಯದಾಗಿ ಯೋಜನೆ ಮಾಡುವುದು ಎಂದರೆ, ಎಲ್ಲಾ ಮೂಲಗಳಿಂದಲೂ ಸಾಧ್ಯವಾಗದಂಥ ಪರಿಸ್ಥಿತಿ ಬಂದಾಗ ನೀವು ಟ್ಯಾಂಕರ್‌ಗಳಿಂದ ನೀರನ್ನು ಒದಗಿಸಬೇಕು ಎನ್ನುವ ಮಾತನ್ನು ಹೇಳಿದ್ದೇವೆ. ಐದನೆಯದು ನೀವು ಜಲಮೂಲಗಳಿಗೆ ಸಂಬಂಧಪಟ್ಟಂತೆ ನಮ್ಮ ಕುಡಿಯುವ ನೀರು ಬಾವಿಯನ್ನು ತೆಗೆಸುವಂಥ ಸಂದರ್ಭದಲ್ಲಿ ಪಕ್ಕದವರು ಖಾಸಗಿಯವರು ಏನಾದರೂ ಬಾವಿಯನ್ನು ತೆಗೆಸುವ ಪ್ರಯತ್ನ ಮಾಡಿದರೆ ಅದನ್ನು ಯಾವ ರೀತಿಯಾಗಿ ನಿಲ್ಲಿಸಬೇಕು ಎನ್ನುವುದಕ್ಕೆ ಕಾನೂನಿನಲ್ಲಿ ತಿದ್ದುಪಡಿ ತರುವ ಯೋಚನೆಯನ್ನು ಕೂಡ ನಾವು ಈಗ ಮಾಡುತ್ತಿದ್ದೇವೆ. ಅದನ್ನು ತತ್‌ಕ್ಷಣದಲ್ಲಿ ತಂದಿಲ್ಲ. ಮಾನ್ಯ ಸದಸ್ಯರೆಲ್ಲರ ಅಭಿಮತವನ್ನು ಕೇಳಿ ಆ ಒಂದು ನಿರ್ಣಯವನ್ನು ತರಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಅದಕ್ಕೆ ನಾನು ಆಗಲೆ ಹೇಳಿದ್ದೇನೆ. ನನ್ನ ಉದ್ದೇಶ ಏನೆಂದರೆ ಮುಖ್ಯವಾಗಿ ನಿಮ್ಮಲ್ಲಿರುವ ರಿಗ್ಸ್‌ನ್ನು ಉಪಯೋಗ ಮಾಡಿಕೊಂಡು ತದನಂತರ ಪ್ರೈವೇಟ್‌ನವರನ್ನು ಉಪಯೋಗ ಮಾಡಿಕೊಳ್ಳುವುದು ಒಳ್ಳೆಯದು ಎಂದು ನಾನು ಹೇಳಿದುದ್ದು. ಆ ಕಡೆ ತಾವು ಸ್ವಲ್ಪ ಗಮನ ಕೊಡುತ್ತೀರಿ ಎಂದು ನಾನು ತಿಳಿದುಕೊಂಡಿದ್ದೇನೆ. ಈಗ ಐದನೇ ಪ್ರಶ್ನೆ ಏನೆಂದರೆ ರಾಜ್ಯಪಾಲರ ಭಾಷಣದಲ್ಲಿ ನೀರಾವರಿ ಬಗ್ಗೆ ಹೇಳಿದ್ದಾರೆ. ಮತ್ತೆ ಅದರ ಬಗ್ಗೆ ನಾಳೆ ದೀರ್ಘವಾದಂಥ ಚರ್ಚೆ ಸೋಮವಾರ ಇದೆ. 55 ಲಕ್ಷ ಹೆಕ್ಟೇರ್ಸ್ ನಮ್ಮ ಕರ್ನಾಟಕ ರಾಜ್ಯದಲ್ಲಿ ಪೊಟೆನ್ಷಿಯಾಲಿಟಿ ಇದೆ. ಆದರೆ ಇಲ್ಲಿಯವರೆಗೂ ಕುಮ್ಯುಲಿಟೀವ್ ಪೊಟೆನ್ಷಿಯಾಲಿಟಿ ಕ್ರಿಯೇಟ್ ಮಾಡಿದ್ದು ಸುಮಾರು 31 ಲಕ್ಷ 97 ಸಾವಿರ ಹೆಕ್ಟೇರ್ಸ್ ಮಾತ್ರ ಆಗಿದೆ. ಇನ್ನು ಉಳಿದಿರುವಂಥದ್ದು ನಾವು ಮಾಡಬೇಕಾಗಿದೆ. ಅದರ ಮೇಲೆ ಬಹಳಷ್ಟು ಬೆಳಕು ಚೆಲ್ಲುವುದಕ್ಕೆ ಸೋಮವಾರ ಸಾಧ್ಯ ಇದೆ. ಆದರೆ ಈ ಸಂದರ್ಭದಲ್ಲಿ ಇಷ್ಟು ಮಾತ್ರ ಹೇಳುತ್ತೇವೆ. ಮುಖ್ಯಮಂತ್ರಿಗಳು ತಮ್ಮ ಉತ್ತರದಲ್ಲಿ ಇದನ್ನು ಹೇಳುತ್ತಾರೆ ಎಂದು ನಾನು ಭಾವಿಸಿದ್ದೇನೆ. ಏಕೆಂದರೆ ಯುಕೆಪಿ ಬಗ್ಗೆ ನಮ್ಮ ಸಂಶಯವನ್ನು ವ್ಯಕ್ತಪಡಿಸಿದ್ದೇವೆ. ಯುಕೆಪಿ ಬಗ್ಗೆ ಈಗಾಗಲೇ ರಾಜ್ಯಪಾಲರ ಭಾಷಣದಲ್ಲೂ ಕೂಡ ಹೇಳಿದ್ದಾರೆ. ಬಜೆಟ್ ಸ್ಪೀಚ್‌ನಲ್ಲಿ ಹೇಳಿದ್ದಾರೆ. ಅದು ಯಾವ ರೀತಿಯಾಗಿ ವ್ಯವಸ್ಥೆ ಮಾಡುತ್ತಾರೆ ಎನ್ನುವ ಬಗ್ಗೆ ಸ್ಪಷ್ಟವಾದಂಥ ಚಿತ್ರ ಇನ್ನೂ ನಮ್ಮ ಮುಂದೆ ಅವರು ಇಟ್ಟಿಲ್ಲ. ಅದಕ್ಕಾಗಿ ಇವತ್ತು ಆ ಭಾಗದ ಜನರ ಒಂದು ಆತಂಕ ಏನೆಂದರೆ ಈ ಒಂದು ದೊಡ್ಡ ಯೋಜನೆಗೆ ನಿರ್ಲಕ್ಷ್ಯವಾಗುತ್ತಿದೆ ಎನ್ನುವ ಭಾವನೆ ಮೂಡುತ್ತಿದೆ. ಈ ಭಾವನೆ ಹೋಗಲಾಡಿಸಲು ಪ್ರಯತ್ನ ಮಾಡಬೇಕು. ಇದು ನಮ್ಮೆಲ್ಲರ ಕರ್ತವ್ಯ. ಬಚಾವತ್

ಅವಾರ್ಡ್ ಪ್ರಕಾರ ಎರಡು ಸಾವಿರ ಇಸವಿಯೊಳಗಾಗಿ ನಾವು ಏನು ನೀರಿನ ಬಳಕೆಯನ್ನು ಮಾಡಿಕೊಳ್ಳಬೇಕು ಅದನ್ನು ಮಾಡಿಕೊಳ್ಳಬಾರದು ಎನ್ನುವ ಅಭಿಪ್ರಾಯ ಯಾರಿಗೂ ಕೂಡ ಇಲ್ಲ. ಸರ್ಕಾರದ್ದು ಇಲ್ಲ, ವಿರೋಧ ಪಕ್ಷದವರದ್ದೂ ಇಲ್ಲ, ಈ ದೇಶದ ಜನತೆಯದಲ್ಲ. ಅದಕ್ಕೆ ನೀವು ಹೇಗೆ ಮಾಡುತ್ತೀರಿ? ಏಕೆಂದರೆ ಇದನ್ನು ಪದೇ ಪದೇ ನಾವು ಕೇಳಿದ್ದೇವೆ.

ಕೇವಲ 84 ಕೋಟಿ ರೂಪಾಯಿ ಮಾತ್ರ ಅದರಲ್ಲಿ ಒದಗಿಸಿಟ್ಟು, ನೂರು ಕೋಟಿ ರೂಪಾಯಿ ಅದು ಕೇವಲ ಈಕ್ವಿಟಿ ಶೇರ್ ಎಂದು ಹೇಳುತ್ತಾರೆ ಕಂಪನಿಗೋಸ್ಕರ. ಅದನ್ನು ಮಾತ್ರ ತಾವು ಇಟ್ಟಿದ್ದೀರಿ. ಆ ದುಡ್ಡನ್ನು ಖರ್ಚು ಮಾಡುವ ಹಾಗೆ ಇಲ್ಲ. ಖರ್ಚು ಮಾಡತಕ್ಕ ಹಣ 84 ಕೋಟಿ ರೂಪಾಯಿ ಮಾತ್ರ. ಆಮೇಲೆ ಬಾಂಡ್ಸ್‌ನಲ್ಲಿ ತೊಡಗಿಸಿದಂತಹ ಹಣವನ್ನು ಜನರು ತಿರುಗಿ ದುಡ್ಡನ್ನು ತೆಗೆದುಕೊಳ್ಳುತ್ತೇವೆ ಎಂದರೆ ಅವರಿಗೆ ಯಾವ ರೀತಿಯಾಗಿ ಕೊಡುತ್ತೀರಿ? ನಾನು ಮೊನ್ನೆ ಹೇಳಿದೆ. ಸ್ಮಾಲ್ ಸೇವಿಂಗ್ಸ್ ಕಲೆಕ್ಟ್ ಮಾಡಬೇಕಾದರೆ ನಮ್ಮ ಅಧಿಕಾರಿಗಳಿಗೆ ಸಾಧ್ಯತೆ ಇಲ್ಲ. ಮತ್ತು ಯಾವ ದೃಷ್ಟಿಯಿಂದ ಇವತ್ತು ಬೇರೆ ಜನ ಇದರಲ್ಲಿ ಹಣವನ್ನು ತೊಡಗಿಸುತ್ತಾರೆ? ಅದನ್ನು ಹೇಗೆ ಕಲೆಕ್ಟ್ ಮಾಡುತ್ತೀರಿ ಎನ್ನತಕ್ಕದ್ದರ ಬಗ್ಗೆ ಅವರು ಸವಿಸ್ತಾರವಾಗಿ ಬೆಳಕು ಚೆಲ್ಲುತ್ತಾರೆ ಮತ್ತು ಇದಕ್ಕೆ ಒಂದು ಪರಿಹಾರ ಕಂಡು ಹಿಡಿಯುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಇಲ್ಲದೇ ಇದ್ದರೆ ನಾವು ಕೊನೆಗೆ ಅದು ಕನ್ನಡಿಯೊಳಗಿನ ಗಂಟು ಇದೆ ಎಂದು ತಿಳಿದುಕೊಂಡು, ಇದಕ್ಕೆ ಏನೂ ಪ್ರೋತ್ಸಾಹ ಇಲ್ಲ, ಈ ಸಲ ಏನೂ ಈ ವಿಚಾರ ಮಾಡುವ ಹಾಗೆ ಇಲ್ಲ ಎನ್ನುವ ಅಭಿಪ್ರಾಯಕ್ಕೆ ನಾವು ಬರಬೇಕಾಗುತ್ತದೆ. ಏಕೆಂದರೆ ಈಗಾಗಲೇ ಕೆಲಸಗಳೆಲ್ಲಾ ಅಂದರೆ ಎಲ್ಲಾ ನೀರಾವರಿ ಯೋಜನೆಗಳು ಸ್ಲೋ ಡೌನ್ ಆಗಿವೆ. ಕೇವಲ ಯುಕೆಪಿ ಅಷ್ಟೇ ಅಲ್ಲ. ನಿಮ್ಮ ಕಾವೇರಿ ಬೇಸಿನಲ್ಲಿರತಕ್ಕ ಕೆಲಸಗಳು, ನಿಮ್ಮ ಕೃಷ್ಣಾ ಬೇಸಿನಲ್ಲಿರತಕ್ಕ ಕೆಲಸಗಳು, ಮೀಡಿಯಂ ಮತ್ತು ಮೈನರ್ ಇರಿಗೇಷನ್ ಕೆಲಸಗಳೂ ಕೂಡ ಇವತ್ತು ಕುಂಠಿತಗೊಂಡಿವೆ. ಏನೋ ಒಂದು ಪೀಸ್ ವರ್ಕ್ ಎನ್ನುವ ನೆಪದಲ್ಲಿ ಅಥವಾ ಎಕ್ಸಸ್ ಪೇಮೆಂಟ್ ಆಗಿದೆ ಎನ್ನುವ ನೆಪದಲ್ಲಿ ಕೆಲವು ಟೆಕ್ನಿಕಲ್ ಸ್ಯಾಂಕ್ಷನ್ ಆಗಿಲ್ಲ ಎನ್ನತಕ್ಕ ನೆಪದಲ್ಲಿ ಹೀಗೆ ಅನೇಕ ಕಾರಣಗಳನ್ನು ತೋರಿಸಿ ತಾವು ಕೆಲಸಗಳನ್ನು ನಿಲ್ಲಿಸಿದ್ದರು. ಈಗ ಏನು ಆಯಿತು? ಪ್ರಾಕ್ಟಿಕಲ್ ಆಗಿ ಆರು ತಿಂಗಳಿಂದ ಯಾವ ಕೆಲಸಗಳೂ ಕೂಡ ಇಲ್ಲ. ನಾಲ್ಕು ತಿಂಗಳು ನಿಮ್ಮ ರೆಜಿಮ್, ಎರಡು ತಿಂಗಳು ಚುನಾವಣೆ. ಅಂದಾಗ ಆರು ತಿಂಗಳು ಕೆಲಸ ಇಲ್ಲ, ಎಂದರೆ ಈಗ ವರ್ಕಿಂಗ್ ಸೀಸನ್ ಇರತಕ್ಕದ್ದು ಮೇ ತಿಂಗಳಲ್ಲಿ ಮಾತ್ರ. ಈ ಮೇ ತಿಂಗಳಲ್ಲಿ ಎಷ್ಟು ಕೆಲಸ ಆಗುತ್ತದೆ ? ಎಷ್ಟು ಖರ್ಚು ಮಾಡಲು ಸಾಧ್ಯ ಇದೆ ? ಮುಂದೆ ಮಳೆಗಾಲದಲ್ಲಿ ಕೆನಾಲ್ ವರ್ಕ್ಸ್ ಆಗಲಿ ಅಥವಾ ಡ್ಯಾಮ್ ವರ್ಕ್ ಆಗಲೀ ಯಾವುದೂ ಕೂಡ ನಡೆಯುವುದಿಲ್ಲ. ಅಂದರೆ ಪ್ರಾಕ್ಟಿಕಲಿ ಒಂದು ವರ್ಷ ಈ ಎಲ್ಲಾ ಕೆಲಸಗಳಿಗೆ ನಾವು ವಿರಾಮ ಕೊಟ್ಟ ಹಾಗೆ. ಸ್ಟಾಫ್, ಜೈಸೇ ಥೆ ಎಂದು.

ಸ್ಟೇಟಕ್‌ಕೋ ಎಂದು ಹೇಳುತ್ತಾರಲ್ಲ ಮೈಂಟೇನ್ ಮಾಡಿದ ಹಾಗೆಯೋ ಹೊರತು ನೀವು ಒಂದು ಡೆಕ್ಟೇರ್‌ನಲ್ಲಿ ಕೂಡ ಇರಿಗೇಷನ್ ಪೊಟೆನ್ಸಿಯಾಲಿಟಿ ಕ್ರಿಯೇಟ್ ಮಾಡುವುದಕ್ಕೆ ಆಗುವುದಿಲ್ಲ. ಇದು ಕೇವಲ ನಮಗೆ ಕನ್‌ವಿನ್ಸ್ ಮಾಡುವುದು ಅಷ್ಟೇ ಅಲ್ಲ. ಒಂದು ಆರ್ಗ್ಯುಮೆಂಟ್ ಮಾಡಿ ಒಬ್ಬರಿಗೊಬ್ಬರು ಕನ್‌ವಿನ್ಸ್ ಮಾಡತಕ್ಕ ಪ್ರಶ್ನೆ ಅಲ್ಲ. ಪ್ರಾಕ್ಟಿಕಲಿ ಆ ಸ್ಥಳದಲ್ಲಿ ಏನು ನಡೆದಿದೆ ಎಂದು ನೋಡಬೇಕು. ಹೇಮಾವತಿ ಕೆನಾಲ್‌ನ ಬಗ್ಗೆ ಸತ್ಯಾಗ್ರಹ ನಡೆಯುವುದು ತಮಗೆ ಗೊತ್ತಿದೆ. ಮಾರುಕಟ್ಟೆ ನಿಲುಗಡೆ ಆಗಿದೆ, ಬಸ್ ನಿಲ್ಲಿಸತಕ್ಕದ್ದು, ರಾಸ್ತಾ ರೋಕೋ ಮಾಡತಕ್ಕದ್ದು ಖೂನಿಗಳು, ಇವೆಲ್ಲವನ್ನೂ ತಾವು ನೋಡುತ್ತಿದ್ದೀರಿ. ಅಂದಾಗ ಎಲ್ಲೋ ಸರ್ಕಾರ ತಪ್ಪುತ್ತಿದೆ ಎನ್ನುವುದಕ್ಕೆ ಇದೊಂದು ಸೂಚನೆ. ಇಲ್ಲವೆಂದರೆ ಇದನ್ನು ನೀವು ಸಾಲ್ವ್ ಮಾಡಿ. ಇದನ್ನು ವೈಯಕ್ತಿಕವಾಗಿ ನಾವು ಯಾರೋ ಒಬ್ಬರು ಅಜಿಟೇಷನ್ ಮಾಡುತ್ತಿದ್ದಾರೆ. ಅದಕ್ಕೆ ನಾವು ಸಪೋರ್ಟ್ ಮಾಡಿದ ಹಾಗೆ ಆಗುತ್ತದೆ ಅಥವಾ ಕ್ರೆಡಿಟ್ ಅವರಿಗೆ ಹೋಗುತ್ತದೆ ಇವರಿಗೆ ಹೋಗುತ್ತದೆ ಎನ್ನುವ ಪ್ರಶ್ನೆ ಅಲ್ಲ. ಪ್ರಶ್ನೆ ಏನೆಂದರೆ ನಾವೂ ನೀವು ಸೇರಿ ಜನರಿಗೆ ಏನು ಸಹಾಯ ಮಾಡಿದ್ದೇವೆ ಎಂಬುದೇ ಪ್ರಶ್ನೆ. ನಾವೂ ನೀವು ಸೇರಿ ಜನರಿಗೆ ಎಷ್ಟರಮಟ್ಟಿಗೆ ನೀರು ಕೊಟ್ಟಿದ್ದೇವೆ ಎನ್ನತಕ್ಕ ಪ್ರಶ್ನೆ ನಾವೂ ನೀವು ಸೇರಿ ಇವತ್ತಿನ ದಿವಸ ಫಿಸಿಕಲ್ ಅಚೀವ್‌ಮೆಂಟ್ ಎಷ್ಟು ಆಗಿದೆ ಎನ್ನತಕ್ಕ ಪ್ರಶ್ನೆ. ಇದು ಬಹಳ ಮಹತ್ವವಾದ ಪ್ರಶ್ನೆ. ಅದಕ್ಕಾಗಿ ಈ ಆರು ತಿಂಗಳಲ್ಲಿ ಖರ್ಚು ಇಲ್ಲವೆಂದಾಗ ಹಣದ ಉಳಿತಾಯ ಕೂಡ ಆಗಿದೆಯಲ್ಲವೇ ? ಇದೆಲ್ಲಕ್ಕೂ ಕೂಡ ಅವರು ಉತ್ತರಿಸಬೇಕಾಗುತ್ತದೆ. ಬಹುಶಃ ಇದಕ್ಕೆ ಸ್ಪಷ್ಟವಾದ ಉತ್ತರವನ್ನು ಅವರು ಕೊಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಇನ್ನೊಂದು ವಿಷಯ ಏನೆಂದರೆ, ಮಾನ್ಯ ದೇಶಪಾಂಡೆಯವರು ಹೋದ ಕಡೆಯಲ್ಲೆಲ್ಲಾ ಬಹಳ ಜೋರಾಗಿ ಹೇಳುತ್ತಿದ್ದಾರೆ. ಈ ಎರಡು ತಿಂಗಳಲ್ಲಿ ನಾವು ನೂರು, ಇಂಡಸ್ಟ್ರಿಯನ್ನು ತಂದಿದ್ದೇವೆಂದು ಹೇಳುತ್ತಾರೆ. ತಮಗೆ ಗೊತ್ತಿದೆ, ಎರಡು ತಿಂಗಳಲ್ಲಿ ನೂರು ಇಂಡಸ್ಟ್ರಿಯನ್ನು ತಂದು ಎಂ.ಓ.ಯು. ಸೈನ್ ಮಾಡಿ ಅದನ್ನು ಕಾರ್ಯಗತ ಮಾಡಬೇಕೆಂದರೆ ಅದು ಸಾಧ್ಯ ಇದೆಯೇ ಇಂಟರ್‌ನ್ಯಾಷನಲ್ ಏರ್‌ಪೋರ್ಟನ್ನೂ ನಾವೇ ತಂದಿದ್ದೇವೆಂದು ಹೇಳುತ್ತಾರೆ. ಅಂದರೆ ನಾನು ಕೇಳಬೇಕಾಗುತ್ತದೆ. ಯಾವ್ಯಾವ ತಾರೀಖು ಯಾವ್ಯಾವ ಇಂಡಸ್ಟ್ರಿಗಳು ಹೈ ಪವರ್ ಕಮಿಟಿಯಲ್ಲಿ ಕ್ಲಿಯರ್ ಆದವು ? ಗವರ್ನಮೆಂಟ್ ಆರ್ಡರ್‌ಗಳು ಬಂತು? ಅದಾದ ಮೇಲೆ ಇವರೇನು ಸ್ಟೆಪ್ಸ್ ತೆಗೆದುಕೊಂಡರು ? ಈ ವಿಚಾರ ಈ ಸದನದಲ್ಲಿ ಅವರು ಇಡಲಿ ಅಥವಾ ತಮ್ಮ ಭಾಷಣದಲ್ಲಿ ಹೇಳಲಿ. ನಿಮ್ಮ ಹಿಂದಿನ ಸರ್ಕಾರ ಏನೇ ಒಳ್ಳೆಯದನ್ನು ಮಾಡಿದ್ದರೂ ಹೇಳಿ. ಕೆಟ್ಟದ್ದು ಮಾಡಿದ್ದು ಹೇಳಿ, ನೀವು ಕೆಟ್ಟದ್ದು ಮಾಡಿದ್ದೀರಿ ಅದಕ್ಕಾಗಿ ನಾವು ಟೀಕೆ ಮಾಡುತ್ತಿದ್ದೇವೆ, ಅದು ಸರಿಯಿಲ್ಲ ಎಂದು ಹೇಳಿ ನಾವು ಒಪ್ಪಿಕೊಳ್ಳೋಣ. ಆದರೆ ಏನೇನು ಒಳ್ಳೆಯ ಕೆಲಸಗಳನ್ನು ಮಾಡಿದ್ದೇವೆ ಅದರ ಬಗ್ಗೆ ನಿಮ್ಮ ಸ್ವರ ಅದೇ ಇದ್ದರೆ ಇದು ಸರಿಯಿಲ್ಲ. ಇವತ್ತು ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಇರಬಹುದು, ಇವತ್ತು ಜಿಂದಾಲ್ ಸ್ಟೀಲ್ ಪ್ಲಾಂಟ್ ಇರಬಹುದು ಅಥವಾ ಬೆಂಗಳೂರು ರಿಫೈನರಿ ವರ್ಕ್ಸ್ ಇರಬಹುದು. ಇಂತಹ ಅನೇಕ ಇಂಡಸ್ಟ್ರಿಗಳು ಸಾಕಷ್ಟು ಪ್ರಯತ್ನ ಪಟ್ಟು ಈ ಲಿಬರಲೈಸೇಷನ್ ಪಾಲಿಸಿಯಲ್ಲಿ ಅದರ

ಲಾಭವನ್ನು ಪಡೆದುಕೊಂಡು ಕರ್ನಾಟಕ ಸರ್ಕಾರ ಮೊದಲನೆಯದಾಗಿ ಹೋಗಿ ಅವರಿಗೆ ಸಾಕಷ್ಟು ಕನ್ಸೆಷನ್ಸ್‌ನ್ನು ಕೊಟ್ಟು, ಇಂಡಸ್ಟ್ರಿಗಳನ್ನು ಬೆಳೆಸುವುದಕ್ಕೆ ಕಾರಣೀ ಭೂತರು ನಾವಾಗಿದ್ದೇವೆ ಎನ್ನತಕ್ಕದ್ದು ಅವರು ಕೂಡ ಮರೆಯಬಾರದು. ಆದರೆ ಹೋದ ಕಡೆಯಲ್ಲಿ ಸರ್ಕಾರ ಏನೂ ಮಾಡಿಲ್ಲ, ಬರೀ ನಾವೇ ಮಾಡಿದ್ದೇವೆ, ನಾವು ಅದನ್ನು ತಂದಿದ್ದೇವೆ, ಇದನ್ನು ತಂದಿದ್ದೇವೆಂದು ಹೇಳಿಕೊಂಡು ಜನರನ್ನು ತಪ್ಪು ದಾರಿಗೆ ಎಳೆಯುವಂತಹ ಕೆಲಸವನ್ನು ಮಾಡುತ್ತಿದ್ದಾರೆ. ಇದು ಆಗಬಾರದು ಎಂದು ತಮ್ಮ ಮುಖಾಂತರ ನಾನು ಹೇಳಬಯಸುತ್ತಿದ್ದೇನೆ. ಇನ್ನೊಂದು ವಿಶೇಷವಾಗಿ ಮೊನ್ನೆ ಮಾತನಾಡುವಾಗ ನಮ್ಮ ಕೋಲಾರದ ಮಿತ್ರರು ಬಹಳ ಸವಿಸ್ತಾರವಾಗಿ ಮಾತನಾಡಿದರು. ಸೆಂಟ್ರಲ್‌ಗವರ್ನಮೆಂಟ್ ಮೇಲೆ ಮಾತನಾಡಿದರು. ಬಜೆಟ್ ಮೇಲೆ ಕೂಡ ಅವರು ಕೇಂದ್ರ ಸರ್ಕಾರವನ್ನು ದೂರಿದ್ದಾರೆ ಮತ್ತು ನಮ್ಮ ಅಧ್ಯಕ್ಷರ ಮೇಲೆ, ನಮ್ಮ ಪ್ರಧಾನಿ ಮಂತ್ರಿಗಳ ಮೇಲೆ ಕೂಡ ಒಂದೆರಡು ಮಾತುಗಳನ್ನು ಹೇಳಿದರು. ಈ ದೇಶವನ್ನು ಹಾಳು ಮಾಡುತ್ತಿದ್ದಾರೆ ಎಂದು ಹೇಳಿದರು. ಕೊನೆಗೆ ಎಲ್ಲಿಗೆ ಹೋದರು ಎಂದರೆ ನಮ್ಮ ಕಾಂಗ್ರೆಸ್ ಪಕ್ಷದ ಬಗ್ಗೆ ಹೇಳತಕ್ಕ ಗುತ್ತಿಗೆಯನ್ನು ಸಹ ಅವರೇ ತೆಗೆದುಕೊಂಡು ಬಿಟ್ಟರು. ಕಾಂಗ್ರೆಸ್ ಪಕ್ಷ ಅವರ ಅಧ್ಯಕ್ಷತೆಯಲ್ಲಿ ಲಿಕ್ವಿಡೇಟ್ ಆಗುತ್ತಿದೆ ಎಂದು ಹೇಳಿದರು. ಒಂದೆರಡು ಮಾತುಗಳನ್ನು ನಾನು ಅದರ ಬಗ್ಗೆ ಪ್ರಸ್ತಾಪ ಮಾಡಬೇಕಾಗುತ್ತದೆ. ಇಲ್ಲದೇ ಇದ್ದರೆ ನಾವು ಅವರಿಗೆ ಅನ್ಯಾಯ ಮಾಡಿದ ಹಾಗೆ ಆಗುತ್ತದೆ ಈ ಪ್ರಧಾನ ಮಂತ್ರಿಯವರು ತಮ್ಮ ಅಧಿಕಾರದ ಅವಧಿಯಲ್ಲಿ ಮತ್ತು ವಿಶೇಷವಾಗಿ ಯಾವಾಗ ಹಿಂದೆ ಜನತಾ ದಳದ ಸರ್ಕಾರ ಇತ್ತು ಅದು ಹೋದ ಮೇಲೆ 1991 ರಿಂದ ಇಲ್ಲಿಯವರೆಗೆ ಯಾವ ರೀತಿಯಾಗಿ ದೇಶದಲ್ಲಿ ಎಕನಾಮಿಕ್ ಗ್ರೋತ್ ಆಗಿದೆ, ಆರ್ಥಿಕ ಬೆಳವಣಿಗೆ ಆಗಿದೆ ಎನ್ನುವುದಕ್ಕೆ ನಾನು ಕೆಲವೇ ಉದಾಹರಣೆಗಳನ್ನು ಹೇಳುತ್ತೇನೆ. "The growth of our economy had fallen to less than 1% in 1991-92. We brought the economy back to the growth of 4.3% per year in 2 years thereafter and the growth has accelerated further to 5.3% in 94-95". 1991ರಲ್ಲಿ ಒಂದು ಪರ್ಸೆಂಟ್‌ಗಿಂತಲೂ ಕಡಿಮೆ ಇದ್ದಿದ್ದನ್ನು ಇವತ್ತು 5.3 ಪರ್ಸೆಂಟ್ ಗ್ರೋತ್ ರೇಟ್‌ಗೆ ತಂದಿದ್ದೇವೆ. ಇದನ್ನು ಯಾರೂ ಕೂಡ ಮರೆಯಬಾರದು. ಇದು ಕೇಂದ್ರ ಸರ್ಕಾರದ ಅಚೀವ್‌ಮೆಂಟ್ ಅಲ್ಲವೇ ? ನರಸಿಂಹ ರಾಯರ ಅಚೀವ್‌ಮೆಂಟ್ ಅಲ್ಲವೇ ? ಇಂಡಸ್ಟ್ರಿಯಲ್ ಗ್ರೋತ್ 1991-92ರಲ್ಲಿ 8.7 ಕ್ಕಿಂತ ಕಡಿಮೆ ಇದ್ದಿದ್ದು ಇವತ್ತು ಸುಮಾರು 9.2 ಆಗಿದೆ. ಅದೇ ರೀತಿಯಾಗಿ ಫುಡ್ ಗ್ರೇನ್ ಪ್ರೊಡಕ್ಷನ್ ಕೂಡ 168 ಮಿಲಿಯನ್ ಟನ್ 1991-92ರಲ್ಲಿ ಇದ್ದುದು ಇವತ್ತು ಅಲ್ ಟೈಮ್ ರೆಕಾರ್ಡ್ ಬ್ರೇಕ್ ಮಾಡಿ 185 ಮಿಲಿಯನ್ ಟನ್ ಫುಡ್ ಪ್ರೊಡಕ್ಷನ್ ಅನ್ನು ಈ ದೇಶದಲ್ಲಿ ಮಾಡಿದಾದರೆ. ಅದೇ ರೀತಿಯಾಗಿ ಫುಡ್‌ಗ್ರೇನ್ ಪಬ್ಲಿಕ್ ಸ್ಟಾಕ್ 1991-92ರಲ್ಲಿ ಸುಮಾರು 14.7 ಮಿಲಿಯನ್ ಟನ್ ಮೂರು ವರ್ಷಗಳ ಹಿಂದೆ ಇದ್ದರೆ ಇವತ್ತು ಅದು 31 ಮಿಲಿಯನ್ ಟನ್ಸ್ ಆಗಿದೆ, ಜನವರಿ 1-1995. ಇದು ಕೇಂದ್ರ ಸರ್ಕಾರದ, ಮಾನ್ಯ

ನರಸಿಂಹರಾಯರ ಅಚೀವ್‌ಮೆಂಟ್. ಆಮೇಲೆ ಜಾಬ್ಸ್ ಕೂಡ ಮೂರು ಮಿಲಿಯನ್ ಪ್ರತಿ ವರ್ಷ 1991-92ರಲ್ಲಿ ಟೋಟಲ್ ಎಂಪ್ಲಾಯ್‌ಮೆಂಟ್ ಇದ್ದುದು.

ಶ್ರೀ. ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಸದಸ್ಯರು ಆಹಾರ ಧಾನ್ಯ ಉತ್ಪಾದನೆ ಬಗ್ಗೆ ಲೆಕ್ಕ ಕೊಟ್ಟಿದ್ದಾರೆ. ಕೇಂದ್ರ ಸರ್ಕಾರದ ಹೊಸ ಆರ್ಥಿಕ ಧೋರಣೆಯಲ್ಲಿ ಹೆಚ್ಚಾಗಿದೆ ಎಂದು ಹೇಳಿದ್ದಾರೆ. ಅದೇ ಸಂದರ್ಭದಲ್ಲಿ ಇನ್ನೊಂದು ವಿಷಯವನ್ನು ಹೇಳಬೇಕೆಂದು ನಾನು ಅವರಲ್ಲಿ ಮನವಿ ಮಾಡುತ್ತಿದ್ದೇನೆ. ಪರ್ಚೇಸಿಂಗ್ ಕೆಪಾಸಿಟಿ ಆಫ್ ಇಂಡಸ್ಟ್ರಿಸ್ ಎಷ್ಟು ಇನ್‌ಕ್ರೀಸ್ ಆಗಿದೆ ಎಂದು ದಯವಿಟ್ಟು ಅವರು ಹೇಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದನ್ನೂ ಹೇಳೋಣ. ಅದೇ ರೀತಿಯಾಗಿ ಜಾಬ್ಸ್ ಬಗ್ಗೆ. ಟೋಟಲ್ ಎಂಪ್ಲಾಯ್‌ಮೆಂಟ್ 1991-92ರಲ್ಲಿ ಗ್ರೋ ಮೂರು ಮಿಲಿಯನ್ ಮಾತ್ರ. ಸುಮಾರು ಆರು ಮಿಲಿಯನ್ ಹೊಸ ಜಾಬ್ಸ್ ಪ್ರತಿ ವರ್ಷ ಬರತಕ್ಕಂಥ ಸಾಧ್ಯತೆ ಈ ಲಿಬರಲೈಸೇಷನ್ ಪಾಲಿಸಿಯಿಂದ ಆಗಿದೆ. ಇದರಲ್ಲಿ ಎಲ್ಲವೂ ಕೂಡ ಒಳ್ಳೆಯದು ಎಂದು ಒಪ್ಪತಕ್ಕವನು ನಾನೂ ಅಲ್ಲ. ಲಿಬರಲೈಸೇಷನ್ ಪಾಲಿಸಿಯಲ್ಲಿ ಕೂಡ ಕೆಲವು .....

ಛೇರ್ಮನ್ : ಪಾರ್ಲಿಮೆಂಟಿನಲ್ಲಿ ಚರ್ಚೆ ಮಾಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಚರ್ಚೆ ಮಾಡೋಣ. ಟೀಕೆ ಮಾಡಿದ ಮೇಲೆ ಹೇಳಬೇಕು. ಈಗ ಏನಾಗಿದೆ ಅಂದರೆ ಅನೇಕ ಸವಲತ್ತುಗಳು ಮತ್ತು ಸಬ್ಸಿಡಿಗಳು ಮತ್ತು ಸ್ಕೀಮ್‌ಗಳು ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಬರುತ್ತವೆ. ಅವಾಗ ನೀವು ಸಹಜವಾಗಿ ಟೀಕೆ ಮಾಡುವುದನ್ನು ನಾವು ಒಪ್ಪಿಕೊಂಡೆವು. ನಾವು ಹೇಳುವುದನ್ನು ಕೇಳಿ. ನಾನು ಏನೂ ಪಾರ್ಲಿಮೆಂಟಿನಲ್ಲಿ ಮಾಡತಕ್ಕ ಭಾಷಣವನ್ನು ಮಾಡುತ್ತಾ ಇಲ್ಲ. ಆದರೆ ಯಾವ್ಯಾವ ಕ್ಷೇತ್ರದಲ್ಲಿ ಇವತ್ತು ಈ ದೇಶ ಮುಂದುವರೆದಿದೆ ಮತ್ತು ಕಾಂಗ್ರೆಸ್ ಪಕ್ಷದ ಸರ್ಕಾರವು ಕೇಂದ್ರದಲ್ಲಿ ಸರಿಯಾದಂತಹ ವ್ಯವಸ್ಥೆಯನ್ನು ಮಾಡಿದೆ. ಆರ್ಥಿಕವಾಗಿ ಮತ್ತು ಲಾ ಅಂಡ್ ಆರ್ಡರ್ ಸಿಚುಯೇಷನ್ ಅದು ಪಂಜಾಬ್‌ದೇ ಇರಬಹುದು, ಅಸ್ಸಾಮ್‌ದೇ ಇರಬಹುದು, ಕಾಶ್ಮೀರ್‌ದೇ ಇರಬಹುದು ಸರಿಯಾದ ವ್ಯವಸ್ಥೆ ಮಾಡದೆ ಹೇಳುವುದಾದರೆ, ಫಾರಿನ್ ಕರೆನ್ಸಿ ಎಕ್ಸ್‌ಚೇಂಜ್ ಕೇವಲ ಹದಿನೈದು ದಿವಸಗಳಿಗೆ ಆಗುವ ವ್ಯವಸ್ಥೆ ಮಾತ್ರ ಇತ್ತು. ಆದರೆ, ಇವೊತ್ತು 60 ಸಾವಿರ ಕೋಟಿ ರೂಪಾಯಿ .....

ಛೇರ್ಮನ್ : ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಿ ಎಂದರೆ ಕೇಂದ್ರದ ಬಜೆಟ್ ಬಗ್ಗೆ ಮಾತನಾಡುತ್ತಿದ್ದೀರಲ್ಲಾ :

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ನೀವು ಏನು ಪ್ರಸ್ತಾಪಿಸಿದ್ದೀರೆಂದರೆ, ಪ್ರಧಾನಮಂತ್ರಿಗಳಾದ ಶ್ರೀ ನರಸಿಂಹರಾವ್‌ರವರು ಈ ದೇಶಕ್ಕೆ ದೇಶದ ರೈತರಿಗೆ ಏನೂ ಸಹಾಯ ಮಾಡಿಲ್ಲವೆಂದು. ಗ್ರಾಮೀಣಾಭಿವೃದ್ಧಿಯಲ್ಲಿ ಹಂಚಿಕೆ ಮಾಡಿಕೊಡುತ್ತಿದ್ದ ಸುಮಾರು 3,000 ಕೋಟಿ ರೂಪಾಯಿಗಳನ್ನು ಇವೊತ್ತು 7,000 ಕೋಟಿ ರೂಪಾಯಿಗಳವರೆಗೆ ಹೆಚ್ಚಿಗೆ ಮಾಡಿದ್ದಾರೆ. ಇದನ್ನು ನಾವು ಒಪ್ಪಿಕೊಳ್ಳಬೇಕಲ್ಲ. ಆ ದುಡ್ಡು ಪಂಚಾಯತ್ ರಾಜ್ ಮತ್ತು ಜಿಲ್ಲಾ ಪರಿಷತ್‌ಗಳಿಗೆ

ಬರುತ್ತದೆಯೋ ? ಇಲ್ಲವೋ ? ಅದಕ್ಕೋಸ್ಕರ ನಾವು ಮಾಡಿದ್ದೆಲ್ಲಾ ಸರಿಯಲ್ಲವೆಂದು ಹೇಳಿ, ನೀವು ಮಾಡಿದ್ದೆಲ್ಲಾ ಸರಿ ಎಂದು ಸಮರ್ಥಿಸಿಕೊಳ್ಳುವುದು ಬೇಡ. ಇವೊತ್ತು ಕೇಂದ್ರ ಸರ್ಕಾರಕ್ಕೂ ಕೂಡ ಅಷ್ಟೇ ಕಾಳಜಿಯಿದ್ದು, ಅಷ್ಟೇ ಒಳ್ಳೆಯ ರೀತಿಯಿಂದ ವ್ಯವಸ್ಥೆ ಮಾಡಿದ್ದಾರೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇದನ್ನು ನಾನು ಪ್ರಸ್ತಾಪಿಸಿದೆನೇ ಹೊರತು ಬೇರೆ ಯಾವುದೇ ದೃಷ್ಟಿಯಿಂದಲ್ಲ. ಇನ್ನೊಂದು ವಿಷಯವನ್ನು ವಿಶೇಷವಾಗಿ ಹೇಳುವುದಾದರೆ, ಇವೊತ್ತು ಆಡಳಿತದಲ್ಲಿ ಬೇಕಾದಂಥ ಒಂದು ವ್ಯವಸ್ಥೆ. ಇದನ್ನು ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಕಂದಾಯ ಸಚಿವರು ತಮ್ಮ ಮನಸ್ಸಿನ ಮೇಲೆ ತೆಗೆದುಕೊಂಡು ಮಾಡಬೇಕಾಗುತ್ತದೆ. ಅದು ಏನೆಂದರೆ, ಜಿಲ್ಲಾ ಪುನರ್ವಿಂಗಡಣೆ. ಏಕೆಂದರೆ, ಈಗಾಗಲೇ "Re-organisation of districts and taluks in Karnataka" ಅದಕ್ಕೋಸ್ಕರ ಮೂರು ಸಮಿತಿಗಳನ್ನು ನೇಮಿಸಿದ್ದು ಅವರುಗಳು ತಮ್ಮ ವರದಿಯನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಈ ಮೂರು ಸಮಿತಿಗಳು ಯಾವುದೆಂದರೆ, ವಾಸುದೇವ್ ಸಮಿತಿ, ಹುಂಡೇಕಾರ್ ಸಮಿತಿ ಮತ್ತು ಗದ್ದೀಗೌಡರ್ ಸಮಿತಿ. ಈ ರಾಜ್ಯದಲ್ಲಿ ಸುಭದ್ರವಾದ ಆಡಳಿತ ಮಾಡಬೇಕಾದರೆ ಮತ್ತು ಆರ್ಥಿಕವಾಗಿ ಪ್ರತಿ ಜಿಲ್ಲೆಗಳೂ ಪ್ರಗತಿ ಹೊಂದಬೇಕಾದರೆ ಯಾವ ರೀತಿ ನಾವು ಜಿಲ್ಲೆಗಳನ್ನು, ತಾಲ್ಲೂಕುಗಳನ್ನು ವಿಂಗಡಿಸಬೇಕು ಎಂದು ಅವರು ಮಹತ್ವವಾದ ವರದಿಗಳನ್ನು ಸಲ್ಲಿಸಿದ್ದಾರೆ. ಆ ವರದಿಗಳ ಆಧಾರದ ಮೇಲೆ ಹಿಂದೆ ಸಚಿವ ಸಂಪುಟ ಸಭೆಯಲ್ಲಿ ನಾವು ಕೆಲವು ನಿರ್ಣಯಗಳನ್ನು ತೆಗೆದುಕೊಂಡೆವು. ಆದರೆ, ಕಾರಣಾಂತರಗಳಿಂದ ಆ ವರದಿಯನ್ನು ಜಾರಿಗೊಳಿಸುವುದನ್ನು ನಿಲ್ಲಿಸಬೇಕಾಯಿತು. ಏಕೆಂದರೆ, ಕೊಪ್ಪಳ, ಹಾವೇರಿ ಮತ್ತು ಶಹಾಪುರದಲ್ಲಿ ಈ ಕುರಿತು ಚಳುವಳಿಗಳಾದ ಕಾರಣ ಅದನ್ನು ತಾತ್ಕಾಲಿಕವಾಗಿ ನಿಲ್ಲಿಸತಕ್ಕದ್ದನ್ನು ಮಾಡಿದರು. ಅವರು ಯಾವ ಆಧಾರದ ಮೇಲೆ ಡಿಸ್ಟ್ರಿಕ್ಟ್ ರಿ-ಆರ್ಗನೈಸೇಷನ್ ಮಾಡಿದರು ಎಂದರೆ, ಸುಮಾರು 12 ಕ್ರೈಟಿರಿಯಾಗಳನ್ನು ನಿಗಧಿಪಡಿಸಿದರು.

(ಈ ಹಂತದಲ್ಲಿ ಅಧ್ಯಕ್ಷರು ಪೀಠವನ್ನಲಂಕರಿಸಿದರು)

ಅವು ಯಾವುವೆಂದರೆ, 1) Viability, 2) Administrative convenience, 3) convenience to the people, 4) law and order, 5) food supply, 6) scarcity conditions, 7) employment potential, 8) Future has to grow, 9) Communication, 10) overall development, 11) industry, 12) welfare of the people. ಈ 12 ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಜಿಲ್ಲಾ ಮತ್ತು ತಾಲ್ಲೂಕುಗಳನ್ನು ವಿಂಗಡಿಸಬೇಕೆಂದು ಅವರು ವರದಿಗಳನ್ನು ಕೊಟ್ಟರು. ಆ ರಿಪೋರ್ಟ್‌ಗಳ ಆಧಾರದ ಮೇಲೆ ನಾವು ಕೆಲವು ನಿರ್ಣಯಗಳನ್ನು ತೆಗೆದುಕೊಂಡೆವು. ಮೊನ್ನೆ ಕಂದಾಯ ಸಚಿವರಾದ ಜಾಲಪ್ಪನವರು ಹಣದ ಕೊರತೆಯಿರುವ ಕಾರಣ ಈ ಸಲ ಇದನ್ನು ಮಾಡುವುದಕ್ಕಾಗುವುದಿಲ್ಲವೆಂದು ಹೇಳಿಕೆ ನೀಡಿದ್ದಾರೆ. ನಮ್ಮ ಮನವಿಯೇನೆಂದರೆ, ಮಾನ್ಯ ಮುಖ್ಯಮಂತ್ರಿಗಳು ಈ ಕಡೆ ತಮ್ಮ ಹೆಚ್ಚಿನ ಗಮನ ಕೊಡುವ ಅವಶ್ಯಕತೆಯಿದೆ. ಏಕೆಂದರೆ, ಎಲ್ಲೆಲ್ಲಿ ಸಣ್ಣ ಸಣ್ಣ ಜಿಲ್ಲೆಗಳಿವೆ. ಅವು

ಬಹಳಷ್ಟು ಆರ್ಥಿಕವಾಗಿ ಪ್ರಗತಿ ಹೊಂದಿವೆ. ಅದು ಕಮ್ಯುನಿಕೇಷನ್ ಇರಬಹುದು, ಎಜುಕೇಷನ್ ಇರಬಹುದು, ಎಕನಾಮಿಕಲ್ ಗ್ರೋಥ್ ಇರಬಹುದು, ಪರ್‌ಕ್ಯಾಪಿಟಾ ಇನ್‌ಕಮ್ ಇರಬಹುದು ಆದರೆ, ಎಲ್ಲೆಲ್ಲಿ ದೊಡ್ಡ ಜಿಲ್ಲೆಗಳಿವೆ, ಈಗ ಉದಾಹರಣೆ ಹೇಳುವುದಾದರೆ, ಧಾರವಾಡ, ಬಿಜಾಪುರ, ಮೈಸೂರು, ದಕ್ಷಿಣಕನ್ನಡ, ಚಿತ್ರದುರ್ಗ, ಗುಲ್ಬರ್ಗ ಈ ರೀತಿಯಾಗಿ ಸುಮಾರು 7-8 ಜಿಲ್ಲೆಗಳು ಬಹಳ ದೊಡ್ಡದಾಗಿವೆ. ಇವುಗಳನ್ನು ವಿಭಜನೆ - ಮಾಡಬೇಕೆಂದು ಈಗಾಗಲೇ ಒಂದು ನಿರ್ಣಯ ತೆಗೆದುಕೊಂಡು, ಈ 8 ಜಿಲ್ಲೆಗಳ ಪೈಕಿ ಹುಂಡೇಕಾರ್ ಮತ್ತು ಗದ್ದಿಗೌಡರ್ ಸಮಿತಿಗಳ ವರದಿಗಳ ಪ್ರಕಾರ ಉಡುಪಿ, ದಾವಣಗೆರೆ, ಬಾಗಲಕೋಟೆ, ಯಾದ್ಗೀರ್, ಚಾಮರಾಜನಗರ ಹೀಗೆ ಎರಡು ಜಿಲ್ಲೆಗಳನ್ನು ಮಾಡಬೇಕು. ಇನ್ನೊಂದು ವಿಚಾರವೇನೆಂದರೆ, ಕಾನೂನು ಮತ್ತು ಸುವ್ಯವಸ್ಥೆ ದೃಷ್ಟಿಯಿಂದಲೂ ಚಿಕ್ಕ ಜಿಲ್ಲೆಗಳಿರುವುದು ಬಹಳ ಒಳ್ಳೆಯದು ಮತ್ತು ನಮ್ಮ ಅನೇಕ ಕಾರ್ಯಕ್ರಮಗಳನ್ನು ಏನು ಜಾರಿಗೊಳಿಸುತ್ತಿದ್ದೇವೆ, ಆ ಕಾರ್ಯಕ್ರಮಗಳೆಲ್ಲ ನೇರವಾಗಿ ಜನರಿಗೆ ಮುಟ್ಟಬೇಕೆಂದರೆ ಸಣ್ಣ ಜಿಲ್ಲೆಗಳು ಇದ್ದರೆ ಒಳ್ಳೆಯದು. ಈಗ ಚಿಕ್ಕ ಜಿಲ್ಲೆಗಳಾಗಿರುವ ಬೀದರ್, ಚಿಕ್ಕಮಗಳೂರು, ಹಾಸನ, ಕೊಡಗಿನಲ್ಲಿ ಇವೊತ್ತಿನ ದಿವಸ ಸಾಕಷ್ಟು ಆರ್ಥಿಕ ಬೆಳವಣಿಗೆ ಮತ್ತು ಕಾನೂನು ಹಾಗೂ ಸುವ್ಯವಸ್ಥೆ ನಿರ್ವಹಣೆ ಮಾಡಲು ಸಾಧ್ಯತೆ ಇದೆ. ಆದರೆ, ಇದೇ ಪರಿಸ್ಥಿತಿ ದೊಡ್ಡ ಜಿಲ್ಲೆಗಳಾದ ಗುಲ್ಬರ್ಗ, ಬಿಜಾಪುರ, ರಾಯಚೂರು, ಮೈಸೂರು, ದಕ್ಷಿಣ ಕನ್ನಡದಲ್ಲಾಗಲಿ ಇಲ್ಲ. ಈ ದಿಸೆಯಲ್ಲಿ ಮೂರು ಸಮಿತಿಗಳವರು ಕೊಟ್ಟಿರುವ ವರದಿಗಳೇನಿವೆ, ಇದನ್ನು ಈ ವರ್ಷ ಜಾರಿಗೊಳಿಸಬೇಕು, ಜಾರಿಗೊಳಿಸಿದರೆ ಹೆಚ್ಚಿನ ನೆರವು ಕೇಂದ್ರ ಸರ್ಕಾರದಿಂದ ಸಿಗುತ್ತದೆ. ಏಕೆಂದರೆ ಜಿಲ್ಲೆಯಾದ ನಂತರ ಜಿಲ್ಲೆಗಳಿಗೆ ಏನೇನು ಸವಲತ್ತುಗಳು ಬರಬೇಕು, ಅದು ಕ್ರೀಡಾಂಗಣವಿರಬಹುದು ಅಥವಾ ಯಾವುದೋ ಒಂದು ಕಾರ್ಯಕ್ರಮದಲ್ಲಿ ಮಾದರಿ ಶಾಲೆಗಳಿರಬಹುದು. ಈಗ ಪ್ರತಿ ಜಿಲ್ಲೆಗಳಲ್ಲೂ ಮಾದರಿ ಶಾಲೆಗಳನ್ನು ನಿರ್ಮಿಸಲಾಗುತ್ತಿದೆ. ನಾನು ಉದಾಹರಣೆಗೆ ಹೇಳುತ್ತಿದ್ದೇನೆ : ಮೂರು ತಾಲ್ಲೂಕುಗಳಿರುವ ಕೊಡಗು ಜಿಲ್ಲೆಗೆ ಒಂದೇ ಮಾದರಿ ಶಾಲೆ, ಹನ್ನೊಂದು ತಾಲ್ಲೂಕುಗಳಿರುವ ಬಿಜಾಪುರ ಜಿಲ್ಲೆಗೆ ಒಂದೇ ಮಾದರಿ ಶಾಲೆ ಮತ್ತು ಹತ್ತು ತಾಲ್ಲೂಕುಗಳಿರುವ ಗುಲ್ಬರ್ಗಕ್ಕೆ ಇರತಕ್ಕಂಥಾದ್ದು ಒಂದೇ ಮಾದರಿ ಶಾಲೆ. ಏಕೆಂದರೆ ಜಿಲ್ಲೆಗೆ ಒಂದೊಂದು ಕ್ರೀಡಾಂಗಣ, ರಂಗಮಂದಿರ, ಮಿನಿ ವಿಧಾನಸೌಧ ಕೊಡುತ್ತೇವೆಂದು ಹೇಳುತ್ತಿದ್ದೀರಿ, ಹೀಗೆ ಜಿಲ್ಲೆಯ ಲೆಕ್ಕದ ಮೇಲೆ ಹೋದಾಗ ಅನೇಕ ಜಿಲ್ಲೆಗಳಲ್ಲಿ ಜನಸಂಖ್ಯೆ ಜಾಸ್ತಿಯಿದ್ದರೂ ಸಹ, ಜಿಯಾಗ್ರಫಿಕಲ್ ಏರಿಯಾ ಜಾಸ್ತಿಯಿದ್ದರೂ ಮತ್ತು ಎಕನಾಮಿಕಲಿ ವೀಕ್ ಇದ್ದರೂ ಅವುಗಳಿಗೆ ಸವಲತ್ತುಗಳು ಸಿಗುವುದಿಲ್ಲ. ಅದಕ್ಕೋಸ್ಕರ ತಕ್ಷಣ ನೀವು ಈ ಕಾರ್ಯಕ್ರಮ ಹಮ್ಮಿಕೊಂಡರೆ ಖಂಡಿತವಾಗಿಯೂ ಇದರ ಪ್ರಯೋಜನ ಸಾಮಾನ್ಯ ಜನರಿಗೆ ಸಿಗುತ್ತದೆ, ಆಡಳಿತ ಸರಿಯಾಗಿ ನಡೆಯುತ್ತದೆ ಮತ್ತು ಕಾನೂನು ವ್ಯವಸ್ಥೆಯೂ ಚೆನ್ನಾಗಿರುತ್ತದೆ ಅಲ್ಲದೆ, ಪರ್‌ಕ್ಯಾಪಿಟಾ ಇನ್‌ಕಮ್ ಕೂಡ ಹೆಚ್ಚಿನ ರೀತಿಯಲ್ಲಿ ಬೆಳವಣಿಗೆ ಮಾಡುವುದಕ್ಕೆ ಸಾಧ್ಯವಾಗುತ್ತದೆನ್ನುವ ಮಾತನ್ನು ಹೇಳುತ್ತೇನೆ. ಪರ್‌ಕ್ಯಾಪಿಟಾ ಇನ್‌ಕಮ್ ಮತ್ತು ಜಿಯಾಗ್ರಫಿಕಲ್ ಏರಿಯಾನಿಂದ ಹೇಗೆ ಅನುಕೂಲವಾಗುತ್ತದೆಂದು ಪ್ರತಿಯೊಂದರ ಬಗ್ಗೆಯೂ ಹೇಳಿದರೆ ಅರ್ಧ ಗಂಟೆ ಸಮಯ ತಗಲುತ್ತದೆ.

ಆದುದರಿಂದ, ಜಿಲ್ಲಾ ಮತ್ತು ತಾಲ್ಲೂಕು ಪುನರ್ವಿಂಗಡಣೆ ಬಗ್ಗೆ ಮುಖ್ಯಮಂತ್ರಿಗಳು ಒಂದು ಖಡಾಖಂಡಿತವಾಗಿ ಉತ್ತರ ಕೊಡಬೇಕು, ಜಾಲಪ್ಪನವರು ಇತ್ತ ಕಡೆ ಮಾತನಾಡುತ್ತಿದ್ದರೆ, ಮುಖ್ಯಮಂತ್ರಿಗಳು ಅತ್ತ ಕಡೆ ಮಾತನಾಡುತ್ತಿದ್ದಾರೆ. ನಾನು ಹೇಳುತ್ತಿರುವ ವಿಚಾರವನ್ನು ಯಾರು ಬರೆದುಕೊಳ್ಳುತ್ತಾರೆ ? ಯಾರು ಉತ್ತರ ಕೊಡುತ್ತಾರೆ ?

ಶ್ರೀ ಆರ್.ಎಲ್ ಜಾಲಪ್ಪ : ನೀವು ಅಧ್ಯಕ್ಷರಿಗೆ ಹೇಳಿ ಸಾಕು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಹೌದೇ, ಬರೆದುಕೊಳ್ಳಬೇಕಾದದ್ದು ಯಾರೂ ಇಲ್ಲ, ಉತ್ತರ ಕೊಡಬೇಕಾದದ್ದು ಯಾರೂ ಇಲ್ಲ. ಹಾಗಾದರೆ ಹೀಗೆ ಮಾಡಿ, ನಾನು ಕಣ್ಮುಚ್ಚಿಕೊಂಡು ಆ ಕಡೆ ಹೇಳುತ್ತಿರುತ್ತೇನೆ, ನೀವ್ಯಾರೂ ನನ್ನನ್ನು ನೋಡಬೇಡಿ. ಇದು ಬಹಳ ಮುಖ್ಯವಾದ ವಿಚಾರವಾಗಿರುವುದರಿಂದ ತಾವು ಕೇಳಬೇಕು. ಒಂದೊದು ಜಿಲ್ಲೆಯಲ್ಲಿ ರಿ-ಆರ್ಗನೈಜೇಷನ್ ಮಾಡಬೇಕಾದರೆ ......

ಶ್ರೀ ಕೆ. ಎನ್. ನಾಗೇಗೌಡ : ನಾಲ್ಕೈದು ದಿವಸಗಳ ಹಿಂದೆ ಇದೇ ಪ್ರಶ್ನೆ ಸದನದ ಮುಂದೆ ಬಂದಂಥ ಸಂದರ್ಭದಲ್ಲಿ ಕಂದಾಯ ಮಂತ್ರಿಯವರು ಮಾತನಾಡುತ್ತಾ, ಇವೊತ್ತಿನ ಆರ್ಥಿಕ ಪರಿಸ್ಥಿತಿಯಲ್ಲಿ ಹುಂಡೇಕಾಲ್ ಸಮಿತಿಯಾಗಲಿ, ಗದ್ದೀಗೌಡರ್ ಸಮಿತಿಯಾಗಲಿ ವಾಸುದೇವರಾವ್ ಸಮಿತಿಯಾಗಲಿ ಇವರ ರಿಪೋರ್ಟ್‌ಗಳನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದ್ದಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಅವರು ಹಾಗೆ ಹೇಳಿದರೂ ಕೂಡ ಯಾವುದಕ್ಕೆ ಆಧ್ಯತೆ ಕೊಡಬೇಕೋ ಅದಕ್ಕೆ ಕೆಲವು ಸಲ ಕೊಡಬೇಕಾಗುತ್ತದೆ. ಉದಾಹರಣೆಗೆ ಹೇಳುವುದಾದರೆ, ಬೆಂಗಳೂರಿನಲ್ಲಿ ಅಂತರರಾಷ್ಟ್ರಿಯ ಕ್ರೀಡೆಗಳು ನಡೆಯಲು ಏನು ಸಿದ್ಧತೆಗಳಾಗುತ್ತಿವೆ, ಇದರ ಬಗ್ಗೆ ನನ್ನ ಅಭ್ಯಂತರವೇನೂ ಇಲ್ಲ. ಆದರೆ, ಜನರು ನಮ್ಮನ್ನು ಅಂತರರಾಷ್ಟ್ರೀಯ ಕ್ರೀಡೆಗಳನ್ನು ನಡೆಸಲು 230 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದು ಒಳ್ಳೆಯದೇ ? ಜಿಲ್ಲಾ ಪುನರ್ವಿಂಗಡಣೆ ಮಾಡುವುದು ಒಳ್ಳೆಯದೇ ? ಎಂದು ಕೇಳಿದರೆ ನಾವೇನು ಹೇಳಬೇಕು ? ಇದನ್ನು ಹಿಂದೆ ನಾವು ಮಾಡಿರಬಹುದು, ಇವೊತ್ತು ನೀವು ಜಾರಿಗೊಳಿಸುತ್ತಿರಬಹುದು. ಅಂತರರಾಷ್ಟ್ರಿಯ ಕ್ರೀಡೆಗಳಿಗಾಗಿ ಇಷ್ಟು, ಹಣವನ್ನು ಖರ್ಚು ಮಾಡುವುದರ ಬದಲು ಒಂದೊಂದು ಜಿಲ್ಲೆಗೆ 2-3 ಕೋಟಿ ರೂಪಾಯಿಗಳಂತೆ ಇಡಿ. ಒಂದು ಜಿಲ್ಲೆ ಆಗಬೇಕಾದರೆ ಅನೇಕ ಕಡೆ ಅಕಾಮಡೇಶನ್ ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಬಿಟ್ಟರೆ ಉಳಿದ ಯಾವುದೇ ಖರ್ಚು ಬರುವುದಿಲ್ಲ. ಹೊಸದಾಗಿ ಒಂದೊಂದು ಜಿಲ್ಲೆಯನ್ನು ತಯಾರಿಸಬೇಕಾದರೆ 2-3 ಕೋಟಿ ರೂಪಾಯಿಗಳು ಬೇಕಾಗುತ್ತದೆ.

12.20 ಪಿ.ಎಂ.

ನೀವು ಹಂತ ಹಂತವಾಗಿ ಇದನ್ನು ತೆಗೆದುಕೊಳ್ಳಿ. 8 ಜಿಲ್ಲೆಗಳನ್ನು ಒಟ್ಟಿಗೆ ಮಾಡುವುದು ಬೇಡ, ಮೊದಲು ನಾಲ್ಕು ಜಿಲ್ಲೆಗಳನ್ನು ಈ ಸಲ ಮಾಡಿ. ಅನಂತರ ನಾಲ್ಕು ಜಿಲ್ಲೆಗಳನ್ನು ಮಾಡಿ. ಈ ರೀತಿ experiment basis ಮೇಲೆ ಮಾಡುವಂಥ ನಿರ್ಣಯವನ್ನು ನಾವು ತೆಗೆದುಕೊಂಡಿದ್ದೆವು. ತಾವು ಖಂಡಿತವಾಗಿ ಅಂಥ ನಿರ್ಣಯವನ್ನು ತೆಗೆದುಕೊಳ್ಳುತ್ತೀರಿ ಎನ್ನತಕ್ಕ ನಂಬಿಕೆ ನನಗಿದೆ. ಇಲ್ಲ ನಮಗೆ

ಹಣವಿಲ್ಲ ಅದನ್ನು ಮಾಡುವುದಕ್ಕಾಗುವುದಿಲ್ಲವೆಂದರೆ ಪುನಃ ನೀವು ಯಥಾಪ್ರಕಾರ ಯಾವ ಜನ ವಿಶೇಷವಾಗಿ ಇವೆಲ್ಲ ಹಿಂದುಳಿದಿರತಕ್ಕಂಥ ಭಾಗದಲ್ಲಿ ಆಗುತ್ತಿರತಕ್ಕದ್ದು, ಅದಕ್ಕೆ ತಾವು ಆದ್ಯತೆಯನ್ನು ಕೊಡಲು ತಯಾರಿಲ್ಲವೆನ್ನತಕ್ಕ ಭಾವನೆ ಬರುತ್ತದೆ. ಎರಡನೆಯದಾಗಿ ಇದನ್ನು ಯಾರೇ ಮಾಡಿದರೂ ಸಹ ವಿರೋಧ ಬಂದೇ ಬರುತ್ತದೆ. ನಾವು ನಿರ್ಣಯವನ್ನು ತೆಗೆದುಕೊಂಡು ಹೊರಗೆ ಹಾಕಿದ ಮೇಲೆ ಅನೇಕ ಜನರು ವಿರೋಧ ವ್ಯಕ್ತಪಡಿಸಿದರು, ಅದಕ್ಕೆ ದಯವಿಟ್ಟು ಬೇಕಾದರೆ ಸಂಬಂಧಪಟ್ಟ ಜಿಲ್ಲೆಯವರನ್ನು ಕರೆಯಿಸಿ ಮಾತನಾಡಿ ಹಂತಹಂತವಾಗಿ ನಿರ್ಣಯವನ್ನು ತೆಗೆದುಕೊಂಡು ಕನಿಷ್ಟ ಪಕ್ಷ ಈ ಸಾರಿ ನಾಲ್ಕನಾದರು ಮಾಡಿ. ಕೆಲವು ತಾಲ್ಲೂಕುಗಳನ್ನು ಮಾಡಿ. ಉಳಿದಂಥದ್ದನ್ನು ಬೇಕಾದರೆ ಮುಂದಿನ ವರ್ಷ ಮಾಡಿ ಅದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ಈ ಕೆಲಸವನ್ನು ಮಾಡಬೇಕೆಂದು ಹೇಳುತ್ತೇನೆ. ಕೊನೆಯದಾಗಿ ನೇಮಕಾತಿಗಳ ಬಗ್ಗೆ ಕೆಲವು ಮಾತುಗಳನ್ನು ಕೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಸದನದಲ್ಲಿ ಅನೇಕ ಸಾರಿ ಏನಾಗುತ್ತದೆಂದರೆ, ಹೊರಗಡೆ ವಿರೋಧವನ್ನು ಮಾಡಿದಾಗ ಕೆಲವು ಕಾನೂನುಬದ್ಧ ಹಕ್ಕುಗಳು ವೀಕರ್ ಸೆಕ್ಷನಗೆ ಸಿಗುವುದರಲ್ಲಿ ತಪ್ಪಿ ಹೋಗುತ್ತವೆ. ಏಕೆಂದರೆ ಅನುಕಂಪದ ಆಧಾರದ ಮೇಲೆ ಅಥವಾ ಎಜಿಟೇಷನ್ ಮಾಡುತ್ತಾರೆಂದು ಅನೇಕ ಸದಸ್ಯರು ಪ್ರಶ್ನೆ ಮಾಡಿ ಅದರ ಬಗ್ಗೆ ಮನವೊಲಿಸಿಕೊಂಡು ಅದನ್ನು ರೆಗ್ಯೂಲರೈಸ್ ಮಾಡತಕ್ಕದ್ದನ್ನು ಮಾಡುತ್ತಾರೆ. ಉದಾಹರಣೆಗೆ, ಹಿಂದೆ ಪಿಡಬ್ಲ್ಯೂಡಿಯಲ್ಲಿ, ಕೃಷಿ ಇಲಾಖೆಯಲ್ಲಿ, ರೇಷ್ಮೆ ಇಲಾಖೆಯಲ್ಲಿ ಸಾಕಷ್ಟು ತಾತ್ಕಾಲಿಕ ನೌಕರರನ್ನು ನೇಮಕ ಮಾಡಿದರು. ಕೊನೆಗೆ ಅವರುಗಳೆಲ್ಲರೂ ಸುಪ್ರೀಂ ಕೋರ್ಟ್‌ಗೆ ಹೋದರು, ಆಗ ಒಂದೇ ಸಮಯದಲ್ಲಿ 60-70 ಸಾವಿರ ಹುದ್ದೆಗಳನ್ನು ರೆಗ್ಯುಲರೈಸ್ ಮಾಡತಕ್ಕ ಪರಿಸ್ಥಿತಿ ಬಂತು. ಆ ರೀತಿ ಮಾಡಿದಮೇಲೆ ಅದರಲ್ಲಿ ಎ,ಬಿ,ಸಿ, ಎಸ್‌ಸಿ, ಎಸ್‌ಟಿ ಯಾವುದು ಇಲ್ಲ. ಆವಾಗ ನಾವು ಯಾರಿಗೆ ಹೇಳಬೇಕು ? ನಾವು ಇದರ ಬಗ್ಗೆ ಪದೇ ಪದೆ ಕೇಳಿದರೆ ಏನಪ್ಪಾ ಇವರು ಬೆಳಿಗ್ಗೆಯಿಂದ ಸಂಜೆಯವರೆಗೆ ಇದರ ಬಗ್ಗೆಯೇ ಮಾತನಾಡುತ್ತಾರೆಂದು ಕೇಳುತ್ತಾರೆ. ಈಗ ಅವಶ್ಯಕತೆ ಇದೆಯೆಂದು ಯಾವುದೊ ಒಂದು ಇಲಾಖೆಯಲ್ಲಿ ತಾತ್ಕಾಲಿಕ ನೌಕರರನ್ನು ತೆಗೆದುಕೊಳ್ಳುತ್ತಾರೆ, ಆ ರೀತಿ ತೆಗೆದುಕೊಂಡು 2-3 ತಿಂಗಳಿನಲ್ಲಿ ಅವರನ್ನು ರೆಗುಲರೈಸ್ ಮಾಡುತ್ತಾರೆ. ಇದು ಎಲ್ಲಾ ಸರ್ಕಾರಗಳಲ್ಲೂ ಸಹ ನಡೆದುಕೊಂಡು ಬಂದಿದೆ. ಅದಕ್ಕೆ ನಾನು ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ, ತಾವು ವಿಶೇಷ ನೇಮಕಾತಿಯನ್ನು ಮಾಡಲೇಬೇಕು. ನೀವು ವಿಶೇಷ ನೇಮಕಾತಿಯನ್ನು ಮಾಡದಿದ್ದರೆ, ಬ್ಯಾಕ್‌ಲಾಗ್‌ನ್ನು ತುಂಬದಿದ್ದರೆ ದೊಡ್ಡ ಅನ್ಯಾಯವನ್ನು ನೀವು ಆ ಬಡ ಸಮಾಜದ ಮೇಲೆ ಮಾಡಿದಂತಾಗುತ್ತದೆಂದು ಹೇಳುತ್ತೇನೆ. ಈ ಕೆಲಸವನ್ನು ನಾವು ಮಾಡಿ ತೋರಿಸಿದ್ದೇವೆ. ಇದೇನು ಕಾನೂನಿಗೆ ವಿರುದ್ಧವಾಗಿಲ್ಲ. ವಿಶೇಷ ನೇಮಕಾತಿಯನ್ನು ನಾನೇ ಸ್ವತಃ ಮಾಡಿದ್ದೇನೆ. ಅದರ ಪ್ರಯೋಜನವನ್ನೂ ಸಹ ಸಾವಿರಾರು ಜನರು ಪಡೆದುಕೊಂಡಿದ್ದಾರೆ. ಆದ್ದರಿಂದ ತಾವು ವಿಶೇಷ ನೇಮಕಾತಿಯನ್ನು ಮಾಡಲು ಡೆಡ್‌ಲೈನ್‌ನ್ನು ನಿಗದಿ ಮಾಡಬೇಕು. ಬ್ಯಾಕ್‌ಲಾಗ್‌ನ್ನು ತುಂಬುವುದಕ್ಕೆ ಒಂದು ನಿರ್ದಿಷ್ಟವಾದ ದಿನಾಂಕವನ್ನು ನಿಗದಿ ಮಾಡಬೇಕು. ಇಷ್ಟು ದಿವಸದಲ್ಲಿ, ಇಷ್ಟು ತಿಂಗಳಿನಲ್ಲಿ ಇದನ್ನು ಮಾಡುತ್ತೇವೆ ಎಂದೂ

ಸಹ ಹೇಳಬೇಕು. ಮೂರನೆಯದಾಗಿ ಈ ಸ್ಪೆಷಲ್ ಕಾಂಪೊನೆಂಟ್‌ನಲ್ಲಿ ಅನೇಕ ಸಾರಿ ಹಣ ಲ್ಯಾಪ್ಸ್ ಆಗುತ್ತದೆ. ಅದು ಹೇಗೆ ಆಗುತ್ತದೆಂದರೆ ಪ್ಲಾನ್‌ನಲ್ಲಿ ಮೂರು ಸಾವಿರ ಇಲ್ಲವೆ ಮೂರುಸಾವಿರದ ಮೂನ್ನೂರೆಂದು ಇಟ್ಟಿರುತ್ತೇವೆ. ಕೊನೆಗೆ ಇಂಪ್ಲಿಮೆಂಟ್ ಆಗತಕ್ಕ ಹಂತದಲ್ಲಿ 2800 ಇಲ್ಲವೆ 2900 ಆಗುತ್ತದೆ. ಅಂದರೆ ಅಲ್ಲಿ ಮೂರು ಕೋಟಿ ರೂಪಾಯಿಗಳು ಕಡಿಮೆಯಾದ ಮೇಲೆ ತಾನೇ ತಾನಾಗಿ 300 ಕೋಟಿ ರೂಪಾಯಿ ಎಸ್‌ಸಿಪಿ ಅಮೌಂಟ್‌ನಲ್ಲಿ ಕಡಿಮೆಯಾಗುತ್ತದೆ, ನಾನು ಇದರ ಬಗ್ಗೆ ಏನು ಹೇಳುತ್ತೇನೆಂದರೆ, ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಈ ಸ್ಪೆಷಲ್ ಕಾಂಪೊನೆಂಟ್ ಅಮೌಂಟ್‌ನ್ನು ಕ್ರೋಢೀಕರಿಸಿ ಒಂದು ಕಡೆ ಸೇರಿಸಿ ಪ್ರತಿಯೊಂದು ಇಲಾಖೆಗೆ ಹಂಚಿ ಪ್ರತಿ ತಿಂಗಳು ಇದರ ಬಗ್ಗೆ ಮಾನಿಟರ್ ಮಾಡಬೇಕು. ಕೈಗಾರಿಕಾ ಇಲಾಖೆಯಲ್ಲಿ ಏನು ಮಾಡುತ್ತಾರೆಂದರೆ, ಲೈಸೆನ್ಸ್ ಕೊಡುವುದಕೋಸ್ಕರ, ವಿದ್ಯುತ್ ಸಂಪರ್ಕವನ್ನು ಕೊಡುವುದಕೋಸ್ಕರ, ಸೇಲ್ಸ್ ಟ್ಯಾಕ್ಸ್‌ನಲ್ಲಿ ವಿನಾಯಿತಿಯನ್ನು ಕೊಡುವುದಕೋಸ್ಕರ, ನಾವು ಕೈಗಾರಿಕೆಗಳು ಹೆಚ್ಚಾಗಲಿ ಎಂದು ಎಲ್ಲರನ್ನು ಕರೆದುಕೊಂಡು ಪ್ರತಿಯೊಂದು ತಿಂಗಳು ಸಭೆ ಮಾಡಿ ಅವರಿಗೆ ವಿನಾಯಿತಿಯನ್ನು ಕೊಟ್ಟು ಜಿಒವನ್ನು ಕೊಟ್ಟು ಕಳಿಸುತ್ತೇವೆ. ಯಾವ ಸರ್ಕಾರ ಅದನ್ನು ಮಾಡಿದರೂ ಸಹ ತಪ್ಪು ಎಂದು ಹೇಳುವುದಿಲ್ಲ. ಅದನ್ನು ಮಾಡಲಿ. ಅದೇ ರೀತಿ ನೀವು ಈ ಸ್ಪೆಷಲ್ ಕಾಂಪೊನೆಂಟ್ ಹಣವನ್ನು ಪ್ರತಿ ತಿಂಗಳಲ್ಲಿ ಒಂದು ದಿನಾಂಕ ನಿಗದಿ ಮಾಡಿ ಅದರ ಬಗ್ಗೆ ಮಾನಿಟರ್ ಮಾಡಬೇಕು; ರೆವ್ಯೂ ಮಾಡಬೇಕು. ಅದು ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಾಗಬೇಕು. ಈ ನೇಮಕಾತಿಯನ್ನಾಗಲಿ, ಸ್ಪೆಷಲ್ ಕಾಂಪೊನೆಂಟ್ ಅಮೌಂಟ್ ಬಗ್ಗೆಯಾಗಲಿ ಇವೆರಡನ್ನು ಅವರು ಮಾಡಿದಿದ್ದರೆ ಅವರವರ ಮಟ್ಟಕ್ಕೆ ಬಿಟ್ಟರೆ, ಸಮಾಜ ಕಲ್ಯಾಣ ಮಂತ್ರಿಗಳು ಹಣಕಾಸು ಮಂತ್ರಿಗಳ ಜೊತೆ ಕಡತವನ್ನು ತೆಗೆದುಕೊಂಡು ಇಂಥ ಹೆಡ್‌ನಲ್ಲಿ ಹಣವನ್ನು ರಿಲೀಸ್ ಮಾಡಿ, ಇಂಥ ಹೆಡ್‌ನಲ್ಲಿ ಹಣವನ್ನು ಕಾಂಟ್ರಿಬ್ಯೂಟ್ ಮಾಡಿ ಎಂದು ಹಲವಾರು ಸಲ ಓಡಾಡಬೇಕಾಗುತ್ತದೆ. ಆದರೆ ಈಕ್ವೇಷನ್ ಸರಿಯಿಲ್ಲದಿದ್ದಾಗ, ಆವರಣದಲ್ಲಿ ಹೊಂದಣಿಕೆ ಇಲ್ಲದಿದ್ದಾಗ ಅಥವಾ ಸಮಾಜಕಲ್ಯಾಣ ಇಲಾಖೆಯ ಕಾರ್ಯದರ್ಶಿಗೂ ಹಣಕಾಸು ಇಲಾಖೆಯ ಕಾರ್ಯದರ್ಶಿಗೂ ಹೊಂದಾಣಿಕೆ ಇಲ್ಲದಿದ್ದಾಗ ಅನೇಕ ಸಾರಿ ಹಣವನ್ನೇ ಬಿಡುಗಡೆ ಮಾಡುವುದಿಲ್ಲ. ಆಗ ಲ್ಯಾಪ್ಸ್ ಆಗಿಹೋಗುತ್ತದೆ. ಕೊನೆಗೆ ಬಡವರಿಗೆ ದೊರೆಯತಕ್ಕ ಹಣವು ಲ್ಯಾಪ್ಸ್ ಆಗುತ್ತದೆಂದು ಮೊಟಕುಗೊಳಿಸಬೇಕಾಗುತ್ತದೆ. ಆದ್ದರಿಂದ ದಯವಿಟ್ಟು ಮುಖ್ಯಮಂತ್ರಿಗಳು ಎಸ್‌ಸಿಪಿ ಅಮೌಂಟ್ ಬಗ್ಗೆ, ನೇಮಕಾತಿಗಳ ಬಗ್ಗೆ ಮತ್ತು ವಿಶೇಷ ನೇಮಕಾತಿಯ ಬಗ್ಗೆ ಹೊಣೆಯನ್ನು ಹೊತ್ತುಕೊಳ್ಳಬೇಕಾಗುತ್ತದೆ. ಇನ್ನೊಂದು ಮುಖ್ಯವಾದ ವಿಚಾರವನ್ನು ಲ್ಯಾಂಡ್ ರಿಫಾರ್ಮ್‌ಗೆ ಸಂಬಂಧಪಟ್ಟಂತೆ ಹೇಳಬೇಕಾಗಿತ್ತು. ಪ್ಲಾಂಟೇಷನ್ ಬಗ್ಗೆ ತಾವೇನು ನಿರ್ಣಯವನ್ನು ತೆಗೆದುಕೊಂಡಿದ್ದೀರಿ ಅದು ನನಗೆ ಸಮಂಜಸವಾಗಿ ಕಾಣುತ್ತಿಲ್ಲ ಬೇಕಾದರೆ ಅದಕ್ಕೊಂದು ವಿಧಾನ ಮಂಡಲದ ಸಮಿತಿಯನ್ನು ಮಾಡಿ. ಆ ರೀತಿ ಮಾಡಿ ಎಷ್ಟು ಸರ್‌ಪ್ಲಸ್ ಪ್ಲಾಂಟೇಷನ್ ಇದೆ, ಅದನ್ನು ಯಾರಿಗೆ ಕೊಡಬೇಕು ಎಂಬುದನ್ನು ಪರಿಶೀಲನೆ ಮಾಡಿ.

ಶ್ರೀ ಆರ್.ಎಲ್.ಜಾಲಪ್ಪ : ಸನ್ಮಾನ್ಯ ಅಧ್ಯಕ್ಷರೆ ಅವರ ಕಾಲದಲ್ಲಿ ಅದರ ಬಗ್ಗೆ ನಿರ್ಣಯವನ್ನು ತೆಗೆದುಕೊಂಡಿದ್ದಾರೆ. ಅಂದಿನ ಕ್ಯಾಬಿನೆಟ್‌ನಲ್ಲಿ ತಾವು ಸಹ ಇದ್ದಿರಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ನಾನು ಆ ಖಾತೆಯಲ್ಲಿ ಇರುವವರೆಗೆ ಅದರ ಬಗ್ಗೆ ಒಪ್ಪಿಲ್ಲ. ಬೇಕಾದರೆ ತಾವು ಮಾಹಿತಿಯನ್ನು ತೆಗೆದು ನೋಡಿ. ನಾನು ಅದಕ್ಕೆ ಒಪ್ಪಿದ್ದೇನೆಂದರೆ ಬೇರೆ ಮಾತಾಗುತ್ತದೆ.

Sri R.L. Jallappa : When you were a Minister, you have not given any dissenting note. You have agreed.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಅದನ್ನು ನಾನು ನೋಡಬೇಕಾಗುತ್ತದೆ. ಆ ದಿವಸ ನಾನು ಇದ್ದೇನೊ ಇಲ್ಲವೋ ಎಂಬುದನ್ನು ನೋಡಬೇಕಾಗುತ್ತದೆ. ಏಕೆಂದರೆ, ಅದನ್ನು ನಾನು ವಿರೋಧ ಮಾಡಿದ್ದೇನೆ, ನಾನು ಅದಕ್ಕೆ ಒಪ್ಪಿಗೆ ಕೊಡುವುದಾಗಿದ್ದರೆ ನಾನು 5 ವರ್ಷ ಅಲ್ಲೇ ಇದ್ದೆ. ಅದಕ್ಕೆ ಒಪ್ಪಿಗೆಯನ್ನು ಕೊಡಬಹುದಾಗಿತ್ತು. I have resisted continously. ಅದನ್ನು ತಾವು ಸ್ವಲ್ಪ ಪರಿಶೀಲನೆ ಮಾಡಿ. ತಾವು ಸುಮ್ಮನೆ ಮಾತಿಗಾಗಿ ಈ ರೀತಿ ಮಾಡಿದ್ದೀರಿ ಎಂದು ಹೇಳಬೇಡಿ. ನಾನು ಆ ತತ್ವದ ಮೇಲೆ ನಂಬಿಕೆಯನ್ನಿಟ್ಟಿರತಕ್ಕವನು. ಒಂದೊಂದು ಸಾರಿ ನೀವೇನೆ ಹೇಳಿದ್ದರು ಸಹ ಅದೆಲ್ಲ ಕ್ಯಾಬಿನೆಟ್‌ನಲ್ಲಿ ನಡೆಯುತ್ತದೆಂದಲ್ಲ. ನಿಮ್ಮ ಮನಸ್ಸಿಗೆ ವಿರುದ್ಧವೂ ಸಹ ಆಗುತ್ತದೆ. ನೀವು ಅಂಥ ಸಮಯದಲ್ಲಿ ಒಪ್ಪಿಕೊಂಡೇ ಬರಬೇಕಾಗುತ್ತದೆ. ಅದಕ್ಕೆ ನಾನು ಅದರ ಬಗ್ಗೆ ಜಾಸ್ತಿ ಹೇಳಲು ಹೋಗುವುದಿಲ್ಲ.

Mr. Speaker : Morally in a cabinet system of functioning, there is nothing like giving dissent note. I have never been a Minister. You become a party to all the decisions that are taken when you are a Member of the council of Ministers.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ನಿಮ್ಮ ಅಭಿಪ್ರಾಯವೇನೆ ಇರಬಹುದು, ಆದರೆ ಅದರಲ್ಲಿ ಬೈಂಡಿಂಗ್ ಇರುತ್ತದೆ. ನಾನು ಹೇಳುವುದೇನೆಂದರೆ, ಅದು ಇನ್ನಾದರೂ ಕೂಡ ಜಾರಿಗೆ ಬಂದಿಲ್ಲ. ಅದರ ಬಗ್ಗೆ ಅಮೆಂಡ್‌ಮೆಂಟ್ ಬಂದಿಲ್ಲ, ಈ ಸದನಲ್ಲಿ ಚರ್ಚೆಯಾಗಿಲ್ಲ ನಾವು ಅದನ್ನು ಒಪ್ಪಿಕೊಂಡಿದ್ದೇವೆ ಎನ್ನತಕ್ಕ ಪ್ರಶ್ನೆ ಇಲ್ಲ, ಅದನ್ನು ರಿವ್ಯೂ ಮಾಡಿ ಬೇಕಾದರೆ ವಿಧಾನಮಂಡಲದ ಸಮಿತಿಯನ್ನು ಮಾಡಿ ಎಷ್ಟು ಎಕರೆ ಜಮೀನು ಲಭ್ಯವಿದೆ, ಅದನ್ನು ನಾವು ಯಾವ ರೀತಿಯಲ್ಲಿ ಹಂಚಬಹುದು, ಯಾರ್ಯಾರಿಗೆ ಕೊಡಬಹುದು, ಎಲ್ಲೆಲ್ಲಿ ನ್ಯಾಯವಾಗಿದ್ದಾರೆ ಬೇಕಾದರೆ ಪ್ಲಾಂಟೇಷನ್ನ್ನೇ ಕೊಡಿ. ಆದರೆ ನೀವು ಕೊನೆಯ ಪಕ್ಷ ಲಭ್ಯವಿರುವ ಜಮೀನಿನ ಬಗ್ಗೆ ಮಾಹಿತಿಯನ್ನು ತರಿಸಿಕೊಳ್ಳಿ.

ಶ್ರೀ ಆರ್.ಎಲ್. ಜಾಲಪ್ಪ : ಅಧ್ಯಕ್ಷರೇ, ನಾವು ಈಗಾಗಲೆ ಜಮೀನನ್ನು ಕೊಟ್ಟಿಲ್ಲ. ನೀವು ಏನೇನು ಹೇಳುತ್ತಿದ್ದೀರೋ ಅದನ್ನೆಲ್ಲ ನಾವು ಮಾಡುತ್ತಿದ್ದೇವೆ. ನಿಮ್ಮ ಕಾಲದಲ್ಲಿ ಇದರ ಬಗ್ಗೆ ಕಾನೂನು ಇಲಾಖೆಗೆ ಕಳಿಸಿದ್ದೀರಿ, ಆಗ ಚುನಾವಣೆ ಬಂದುದರಿಂದ ಅವರು ವಾಪಸ್ ಕಳಿಸಿದರು. ಈಗ ಅದರ ಬಗ್ಗೆ ಒಂದು

ಸಬ್‌ಕಮಿಟಿಯನ್ನು ಮಾಡಿದ್ದೇವೆ, ಆ ಕಮಿಟಿಯ ವರದಿಯನ್ನು ನೋಡಿ ನೀವೇನು ಮಾಡಿದ್ದೀರಿ ಅದನ್ನೆಲ್ಲ ನೋಡಿ ತಾವು ಕಾನೂನು ಇಲಾಖೆಗೆ ಕಳಿಸಿ ಅವರ ಒಪೀನಿಯನ್‌ನ್ನು ಪಡೆದು ಅದನ್ನು ಕಾರ್ಯರೂಪಕ್ಕೆ ತರುತ್ತೇವೆ. ನಾವು ಇದನ್ನು ಈಗಾಗಲೇ ಕೊಟ್ಟಿಲ್ಲ. ಮಾಡಿತ್ತೇವೆಂದು ಹೇಳಿದ್ದೇವಷ್ಟೆ. Then we will execute it.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ನೀವು ಕೊಟ್ಟಿದ್ದೀರೆಂದು ನಾನು ಹೇಳಲಿಲ್ಲ. ಏಕೆಂದರೆ ನೀವು ರಾಜ್ಯಪಾಲರ ಭಾಷಣದಲ್ಲೂ ಅದರ ಬಗ್ಗೆ ಒತ್ತಾಯ ಮಾಡಿದ್ದೀರಿ. ಬಜೆಟ್‌ನಲ್ಲೂ ಸಹ ಅದಕ್ಕೆ ಒತ್ತಾಯ ಮಾಡಿದ್ದೀರಿ. ಆ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ಆ ರೀತಿ ಎರಡು ಕಡೆಗಳಲ್ಲಿ ಅದು ಬಂದ ಮೇಲೆ ಅದರ ಮಹತ್ವವೇನು ಎಂಬುದು ನಮಗೆ ಗೊತ್ತಾಗುತ್ತದೆ. ಅದಕ್ಕಾಗಿ ಇದನ್ನು ಪುನರ್ ಪರಿಶೀಲನೆ ಮಾಡುತ್ತೇನೆಂದು ತಾವು ಹೇಳಿದ್ದೀರಿ. ಅದಕ್ಕೆ ನನ್ನ ಧನ್ಯವಾದಗಳು. ಇನ್ನು ಎರಡು ಮೂರು ವಿಚಾರಗಳನ್ನು ಹೇಳಬೇಕಾಗಿತ್ತು, ಆದರೆ ಅಧ್ಯಕ್ಷರು ಈಗಾಗಲೆ ಸಾಕಷ್ಟು ಸಮಯವಾಗಿದೆ ಎಂದು ಹೇಳುತ್ತಿರುವುದರಿಂದ ಅವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

* ಶ್ರೀ ಬಿ. ಬಿ. ಶಿವಪ್ಪ (ಸಕಲೇಶಪುರ): ಸನ್ಮಾನ್ಯ ಅಧ್ಯಕ್ಷರೇ, ತಾವು ನನಗೆ ಮಾತನಾಡಲು ಸಮಯ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದವನ್ನರ್ಪಿಸುತ್ತಾ, ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ನಾನು ಮೇಲ್ಮನೆಯ ಸದಸ್ಯನಾಗಿದ್ದೆ. ಸಾಕಷ್ಟು ಅನುಭವವಿದೆ. ಆದರೆ ಈ ಮನೆಯ ಸದಸ್ಯನಾಗಿ ಇದು ಹೊಸ ಅನುಭವ. ಸುಮಾರು 15 ದಿವಸಗಳಿಂದ ಭಾರಿ ಪ್ರಯತ್ನಪಟ್ಟು ಕಾಡಿಬೇಡಿ ಸಮಯವನ್ನು ತೆಗೆದುಕೊಂಡು ಮಾತನಾಡಲು ತಮ್ಮೆದುರು ನಿಂತಿದ್ದೇನೆ. ಮೇಲ್ಮನೆಯಲ್ಲಿದ್ದಾಗ, ನಮ್ಮ ಹಳ್ಳಿಯಲ್ಲಿ ಕೆಲವು ಶಾಲೆಗಳಿವೆ. ಅಲ್ಲಿ ಏಕೋಪಾಧ್ಯಾಯ ಶಾಲೆ ಇದೆ. ಅಲ್ಲಿ ಏನಪ್ಪಾ ಮಾಡುತ್ತಿದ್ದೀಯ ಎಂದರೆ ಅಲ್ಲಿ ನಾನೇ ಮುಖ್ಯೋಪಾಧ್ಯಾಯ ಎಂದು ಹೇಳುತ್ತಾರೆ. ಹಾಗಿತ್ತು ನನ್ನ ಮೇಲ್ಮನೆಯ ಅನುಭವ. ಆದರೆ ಇಲ್ಲಿ ಆ ರೀತಿ ಇಲ್ಲ. ಸ್ವಲ್ಪ ವ್ಯತ್ಯಾಸವಿದೆ. ಸನ್ಮಾನ್ಯ ಅಧ್ಯಕ್ಷರೆ, ಹೆಚ್ಚಿಗೆ ಮಾತನಾಡಬಹುದೆ ಎಂದು ನನಗೆ ಗೊತ್ತಿಲ್ಲ. ನಾನು ಎಷ್ಟು ಸಮಯ ಮಾತನಾಡಬಹುದು?

ಅಧ್ಯಕ್ಷರು : ಸಭಾನಾಯಕರಿಗೆ ಆರೋಗ್ಯ ಅಷ್ಟೊಂದು ಸರಿಯಾಗಿಲ್ಲ, ತಾವು ಬೇಗ ಮಾತನಾಡಿ ಮುಗಿಸಿದರೆ ಅವರೂ ಸಹ ಬೇಗ ಉತ್ತರವನ್ನು ಕೊಟ್ಟು ಹೋಗಬಹುದು, ಅವರ ಮತ್ತು ನಿಮ್ಮ ಗೆಳತನ ಎಲ್ಲರಿಗೂ ಗೊತ್ತೇ ಇದೆ. ನೀವು ನಿಮ್ಮ ಗೆಳತನವನ್ನು ಗೌರವಿಸಿ ಎಷ್ಟು ಬೇಗ ಮುಕ್ತಾಯ ಮಾಡುತ್ತಿರೋ ಅಷ್ಟು ನಾವು ನೀವು ನಿಜವಾದ ಗೆಳೆಯರೆಂದು ಒಪ್ಪಿಕೊಳ್ಳುತ್ತೇವೆ. ಅದಕ್ಕಿಂತ ಹೆಚ್ಚು ನಾನೇನೂ ಹೇಳುವುದಿಲ್ಲ.

ಶ್ರೀ ಬಿ. ಬಿ. ಶಿವಪ್ಪ : ನಾವಿಬ್ಬರು ಒಂದೆ ಜಿಲ್ಲೆಯಾಗಿರುವುದರಿಂದ ಅದನ್ನು ನಮ್ಮಿಬ್ಬರಿಗೆ ಬಿಡುವುದರಿಂದ ಸಹಕಾರ ಮಾಡುತ್ತೇನೆ.

ಸನ್ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರು ವಿಧಾನಮಂಡಲದ ಉಭಯ ಸದನ ಗಳನ್ನುದ್ದೇಶಿಸಿ ಮಾಡಿದ ಭಾಷಣದ ಬಗ್ಗೆ ಹಲವಾರು ಸದಸ್ಯರು ಹಲವಾರು ರೀತಿಯಲ್ಲಿ

ಪ್ರಸ್ತಾಪಿಸಿದ್ದಾರೆ. ನಾನು ಅದರ ಬಗ್ಗೆ ಪುನಃ ಪ್ರಸ್ತಾಪಿಸುವುದಕ್ಕೆ ಹೋಗದೆ ಒಂದೆರಡು ವಿಚಾರಗಳನ್ನು ಮಾತ್ರ ಇದರಲ್ಲಿ ಆಯ್ದುಕೊಂಡು ಮಾತನಾಡಲು ಇಷ್ಟಪಡುತ್ತೇನೆ. ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಗಳ ಚುನಾವಣೆಯನ್ನು ಅತ್ಯಂತ ಶಾಂತಿಯುತವಾಗಿ ಮತ್ತು ನೀತಿಯುತವಾಗಿ ಭಾರಿ ಚೆನ್ನಾಗಿ ಮಾಡಿದ್ದೇವೆ, ಯಶಸ್ವಿಯಾಗಿ ನಡೆಸಿದ್ದೇವೆ. ಎನ್ನುವ ಮಾತನ್ನು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿದ್ದಾರೆ. ಎರಡು ಮೂರು ತಿಂಗಳ ಹಿಂದೆ ವಿಧಾನಸಭಾ ಚುನಾವಣೆ ನಡೆಯಿತು, ಅದರ ನಂತರ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತಿ ಚುನಾವಣೆ ನಡೆದಾಗ, ಈ ಎರಡೂ ಚುನಾವಣೆಗಳಲ್ಲಿ ಸಾಕಷ್ಟು ರೀತಿಯ ವ್ಯತ್ಯಾಸ ಕಂಡು ಬಂತು. ವಿಧಾನಸಭಾ ಚುನಾವಣೆಯಲ್ಲಿ ಎಲ್ಲಾ ರೀತಿಯ ವ್ಯವಹಾರ, ಅವ್ಯವಹಾರಗಳು ನಡೆದರೂ ಒಂದು ರೀತಿಯ ಬಿಕ್ಕಟ್ಟಿನಲ್ಲಿ ನಡೆಯಿತು. ಅದರ ನಂತರ ತಕ್ಷಣ ನಡೆದ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತಿ ಚುನಾವಣೆಯಲ್ಲಿ ಬಿಕ್ಕಟ್ಟು ಸ್ವಲ್ಪ ಹೊರಗೆ ಹೋಯಿತು. ಏಕೆ ಹೊರಗೆ ಹೋಯಿತೆಂದು ಗೊತ್ತಾಗಲಿಲ್ಲ. ಆದರೆ, ಶಾಂತಿಯುತವಾಗಿ ಮತ್ತು ನೀತಿಯುತವಾಗಿ ಹಾಗೂ ಯಶಸ್ವಿಯಾಗಿ ನಡೆಯಿತೆಂದರೆ ಅಷ್ಟು ಶಾಂತಿಯುತವಾಗಿ, ನೀತಿಯುತವಾಗಿ, ಯಶಸ್ವಿಯಾಗಿ ನಡೆಯಲಿಲ್ಲವೆಂಬುದನ್ನು ಅತ್ಯಂತ ಬೇಸರದಿಂದ ಹೇಳಬೇಕಾಗುತ್ತದೆ. ಚುನಾವಣೆಯಲ್ಲಿ ಗೆಲ್ಲಲೇಬೇಕೆಂದು ಹಲವಾರು ರಾಜಕೀಯ ಪಕ್ಷಗಳು ನಿಂತು ಸ್ಪರ್ಧಿಸುವ ಸಂದರ್ಭದಲ್ಲಿ ಆ ಸ್ಪರ್ಧೆ ಅತ್ಯಂತ ಮೇಲ್ಮಟ್ಟದಲ್ಲಿ ನಡೆದುದು ನನಗೆ ಕಂಡುಬಂತು. ಯಾರು ಹೆಚ್ಚಿಗೆ ಕುಡಿಸಬಹುದು ? ಇದರ ಬಗ್ಗೆ ನಾನು ದೊಡ್ಡ ಸ್ಪರ್ಧೆ ಕಂಡೆ. ಚುನಾವಣೆಗೆ ಇನ್ನು ಒಂದು ದಿವಸ ಇದೆಯೆಂದಾಗ ಅದರ ಮುನ್ನಾ ದಿನ ಗ್ರಾಮಾಂತರ ಪ್ರದೇಶಗಳಲ್ಲಿರುವ ನಲ್ಲಿಗಳನ್ನು ತಿರುಗಿಸಿದರೆ ಅದರಲ್ಲೂ ಅದೇ ಬರಲು ಶುರುವಾಯಿತು. ಇದನ್ನು ಉತ್ಪ್ರೇಕ್ಷೆಯಿಂದ ನಾನು ಮಾತನಾಡುತ್ತಿಲ್ಲ. ಹಳ್ಳಿಗಳಲ್ಲಿ ಚುನಾವಣಾ ಸಂದರ್ಭದಲ್ಲಿ ಏತಕ್ಕೋಸ್ಕರ ಇಂತಹ ದುಷ್ಟ ಪದ್ಧತಿ ಪ್ರಾರಂಭವಾಯಿತೋ ಗೊತ್ತಿಲ್ಲ, ಇದನ್ನು ಅತ್ಯಂತ ಬೇಸರದಿಂದ ಹೇಳಬೇಕಾಗುತ್ತದೆ. ನಮ್ಮ ಮತದಾರರ ಪರಿಸ್ಥಿತಿಯನ್ನು ಈ ಮಟ್ಟಕ್ಕಿಳಿಸಿ ಅವರಿಂದ ಮತ ಯಾಚಿಸಿ, ಗಳಿಸಿ ಈ ಸ್ಥಾನದಲ್ಲಿ ನಾವು ಬಂದು ಕೂರಬೇಕೇ ? ಎನ್ನುವುದನ್ನು ಚಿಂತಿಸಬೇಕಾಗುತ್ತದೆ. ಬಹುಶಃ ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವುದು ಎಲ್ಲಿಗೆ ತಲುಪಿತೆಂದರೆ ಅವರು ಕುಡಿದು ವಾಂತಿ ಮಾಡಿ, ಅದನ್ನು ತಿಂದಂಥ ನಮ್ಮ ಹಳ್ಳಿ ನಾಯಿಗಳು ಮೂರು ದಿವಸ ಬೀದಿಯಲ್ಲಿ ನೆಟ್ಟಗೆ ನಡೆಯಲಿಲ್ಲ. ಅಲ್ಲಿಯವರೆಗೆ ಈ ವ್ಯವಹಾರ ನಡೆಯಿತು ಎನ್ನುವುದಾದರೆ, ಇದು ಎಷ್ಟರ ಮಟ್ಟಿಗೆ ಆಗಿರಬೇಕೆಂಬುದನ್ನು ಊಹಿಸಬೇಕಾಗುತ್ತದೆ. ನಾನು ಇದನ್ನು ಅತ್ಯಂತ ಬೇಸರದಿಂದ ಹೇಳುತ್ತಿದ್ದೇನೆ. ಯಾರಿಗೋಸ್ಕರ ತೆಗೆದುಕೊಂಡು ಹೋಗಿ ನಾವು ಕುಡಿಸುತ್ತಿದ್ದೇವೆ ? ನಮ್ಮ ಬಂಧುಗಳು, ಹಿತ ಚಿಂತಕರು, ನಮಗೆ ಮತ ಕೊಡುವ ಜನರಿಗೆ ಇಂತಹ ಬೇಡದ ವಸ್ತುವನ್ನು ತೆಗೆದುಕೊಂಡು ಕೊಡುವ ನೀಚ ಪದ್ಧತಿಯನ್ನು ತಪ್ಪಿಸತಕ್ಕ ವ್ಯವಸ್ಥೆಯನ್ನು ಅಧಿಕಾರ ನಡೆಸುವ ಪಕ್ಷದ ಮೇಲೆ ಹೇಳುವ ಮಾತಲ್ಲ, ಎಲ್ಲರೂ ಸೇರಿ ಬಗೆಹರಿಸತಕ್ಕ ಒಂದು ವಿಚಾರವಾಗಿದೆ, ದೀರ್ಘವಾಗಿ ಚಿಂತಿಸಬೇಕಾದ ವಿಚಾರವಾಗಿದೆ. ಚುನಾವಣೆಗೆ

ಪೂರ್ವ 24 ಗಂಟೆಗಳಿಂದ 48 ಗಂಟೆಗಳವರೆಗೆ ಅದರ ಮಾರಾಟವನ್ನು ತಕ್ಷಣ ನಿಲ್ಲಿಸಿದ್ದೇವೆಂದು ಸರ್ಕಾರದಿಂದ ಆಜ್ಞೆ ಹೊರಡುತ್ತದೆ. ಈ ಆಜ್ಞೆ ಏತಕ್ಕೋಸ್ಕರ ಹೊರಡುತ್ತದೆಯೋ ಗೊತ್ತಿಲ್ಲ. ಆದರೆ, ಮೊನ್ನೆ ದಿವಸ ಗೃಹ ಮಂತ್ರಿಗಳು ಕೂಡ ಪ್ರಸ್ತಾಪಿಸುತ್ತಾ ಹೇಳಿದರು. ಇವೊತ್ತು ಗ್ರಾಮಾಂತರ ಪ್ರದೇಶಗಳಲ್ಲಿರುವ ಮನೆಗಳಲ್ಲಿ ಸಣ್ಣ ಸಣ್ಣ ಗುಡಿ ಕೈಗಾರಿಕೆಗಳು ಪ್ರಾರಂಭವಾಗಿರುವುದಲ್ಲದೆ ಪಾಕೆಟ್ ಮಾಡುವಂಥ ಮೆಷಿನ್‌ಗಳೂ ಪ್ರಾರಂಭವಾಗಿದೆ. ಕಳೆದ ವಿಧಾನಸಭಾ ಚುನಾವಣಾ ಸಂದರ್ಭದಲ್ಲಿ ನಮ್ಮ ಜಿಲ್ಲೆಯಲ್ಲಿ ನಡೆದ ಘಟನೆ ಬಗ್ಗೆ ಹೇಳುವುದಾದರೆ, ಆ ರೀತಿ ಮಾಡುತ್ತಿದ್ದವರನ್ನು ಜಿಲ್ಲಾಧಿಕಾರಿಗಳು ಮೆಷಿನ್ ಸಮೇತ ಹಿಡಿದುಕೊಂಡು ಬೀದಿಯಲ್ಲಿ ಮೆರವಣಿಗೆ ಮಾಡಿ ಹಿಡಿದುಕೊಂಡು ಹೋದಂಥ ವಿಚಾರ ಅಷ್ಟು ಮಾತ್ರ ಗೊತ್ತಾಯಿತೇ ವಿನಹ ಮುಂದೇನಾಯಿತೆಂದು ಗೊತ್ತಿಲ್ಲ. ಇಂತಹವರಿಗೆ ಸರಿಯಾದ ಶಿಕ್ಷೆಯಾದಾಗ ಬಹುತೇಕ ಈ ರೀತಿಯ ವಾತಾವರಣವನ್ನು ಕಡಿಮೆ ಮಾಡುವುದಕ್ಕೆ ಸಾಧ್ಯವಾಗಬಹುದೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ರಸಗೊಬ್ಬರದ ಬಗ್ಗೆ ಮಾತನಾಡಲೇಬೇಕಾಗುತ್ತದೆ. ಕಾರಣ, ನಾನೂ ಸಹ ಒಬ್ಬ ರೈತನಾಗಿದ್ದೇನೆ. ಮೊನ್ನೆ ನಮ್ಮ ಸದಸ್ಯರೊಬ್ಬರು ಆ ಕಡೆ ಕುಳಿತು ಪ್ರಶ್ನಿಸಿದರು. ರಸಗೊಬ್ಬರದ ಬಗ್ಗೆ ಮಾತನಾಡಲು ಬಿ.ಜೆ.ಪಿ.ಯವರಿಗೆ ನೈತಿಕ ಹಕ್ಕಿಲ್ಲವೆಂದು ಹೇಳಿದರು. ಸಂತೋಷ, ಒಪ್ಪಿಕೊಳ್ಳೋಣ. ಆದರೆ, ರಸಗೊಬ್ಬರದ ಬಗ್ಗೆ ಹೋರಾಟ ಮಾಡತಕ್ಕಂಥ ಆ ಸಂದರ್ಭದಲ್ಲಿ ಇವೊತ್ತು ಮುಖ್ಯಮಂತ್ರಿಗಳಾಗಿರುವ ಸನ್ಮಾನ್ಯ ದೇವೇಗೌಡರು ಆಗ ಆ ಸಮಿತಿಯಲ್ಲಿ ಇದ್ದರು, ನಮ್ಮ ಪಕ್ಷದ ಒಬ್ಬ ಸದಸ್ಯರೂ ಸಹ ಇದ್ದರು. ಅವರೂ ಕೂಡ ದೇವೇಗೌಡರ ಜೊತೆ ಕೈ ಸೇರಿಸಿ ಅದನ್ನು ವಿರೋಧಿಸಿ ಹೊರಗಡೆ ಬಂದಂಥ ಒಂದು ಅಂಶ ಬಹುತೇಕ ಸದಸ್ಯರಿಗೆ ಗೊತ್ತಿರಲಿಕ್ಕಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ರಾಜ್ಯದಲ್ಲಿ ಪ್ರವಾಸ ಮಾಡಿ ರೈತರ ಗಮನಕ್ಕೆ ತರುವ ವಿಚಾರವನ್ನು ಸನ್ಮಾನ್ಯ ಮುಖ್ಯಮಂತ್ರಿಗಳಾದ ದೇವೇಗೌಡರು ಅವೊತ್ತು ಮಾಡಿರಬಹುದೇ ವಿನಹ ಅವೊತ್ತು ಅಲ್ಲಿ ಬೀರೇನ್ ಷಾ ಎನ್ನುವ ಮತ್ತೊಬ್ಬರು ನಮ್ಮ ಪಕ್ಷದ ವರಿಷ್ಠ ನಾಯಕರು ಅವರು ಕರ್ನಾಟಕ ರಾಜ್ಯದಲ್ಲಿ ಪ್ರವಾಸ ಮಾಡದಿರಬಹುದು, ಆದರೆ, ಬೇರೆ ರಾಜ್ಯಗಳಲ್ಲಿ ಅವರು ಮಾಡಿರುವ ಕಾರ್ಯಕ್ರಮವನ್ನು ನಾನು ಇಲ್ಲಿ ಪ್ರಸ್ತಾಪಿಸುವ ಅವಶ್ಯಕತೆಯಿಲ್ಲ. ಕಾರಣ, ಸಮಯದ ಅಭಾವ.

ಶ್ರೀ ಸಿ. ಬೈರೇಗೌಡ (ಕೃಷಿ ಮಂತ್ರಿಗಳು) : ನಿಮ್ಮ ಪಕ್ಷದವರೊಬ್ಬರು ಆ ಸಮಿತಿಯಲ್ಲಿ ಸದಸ್ಯರಾಗಿದ್ದರು, ಮತ್ತು ನಮ್ಮ ಮಾನ್ಯ ಮುಖ್ಯಮಂತ್ರಿಗಳೂ ಸಹ ಆ ಸಮಿತಿಯ ಸದಸ್ಯರಾಗಿದ್ದು, ಅವರ ಜೊತೆ ಕೈ ಜೋಡಿಸಿದರು ಎನ್ನುವ ಮಾತನ್ನು ತಾವು ಹೇಳುತ್ತಿದ್ದೀರಿ. ಅದು ಬಿಡಿ, ಸಮಿತಿ. ಆದರೆ, ನಿಮ್ಮ ಪಕ್ಷದ ನಡವಳಿಕೆ, ಲೋಕಸಭೆಯಲ್ಲಿ ಬೇಡಿಕೆಗಳು ಚರ್ಚೆಗೆ ಬಂದಂಥ ಸಂದರ್ಭದಲ್ಲಿ ಗೊಬ್ಬರದ ಬೆಲೆ ಏರಿಕೆಯಾಗಿ ಸಬ್ಸಿಡಿ ತೆಗೆದಿದ್ದನ್ನೇ ಒಂದು ಇಶ್ಶ್ಯೂ ಮಾಡಿ ಕಟ್ ಮೋಷನ್ ಅನ್ನು ಕೊಟ್ಟಿದ್ದರು. ಆ ಕಟ್ ಮೋಷನ್‌ಗೆ ವೋಟ್ ಹಾಕುವ ಹಂತದಲ್ಲಿ ನಿಮ್ಮ ಪಕ್ಷದವರೆಲ್ಲರೂ ಸಭಾತ್ಯಾಗ ಮಾಡಿದ್ದರು. ಅವೊತ್ತು ನೀವೂ ಸಹ ರೈತರ ಬಗ್ಗೆ ನಿಜವಾದ ಕಾಳಜಿಯುಳ್ಳವರಾಗಿ, ಸಾವಿರಾರು ವರ್ಷಗಳಿಂದ, ತಲತಲಾಂತರಗಳಿಂದ

ತುಳಿತಕೊಳಗಾಗಿರುವ ರೈತ ಏನಿದ್ದಾನೆ, ಆ ರೈತನ ಬಗ್ಗೆ ಒಂದು ಇಶ್ಯೂ ಮಾಡಿಕೊಂಡು ಅವೊತ್ತು ಸರ್ಕಾರ ಬಿದ್ದು ಹೋಗಿದ್ದರೆ ಪ್ರಪಂಚವೇನೂ ತಲೆಕೆಳಗಾಗುತ್ತಿರಲಿಲ್ಲ. ಆದರೆ, ಚರಿತ್ರೆಯಲ್ಲಿ ಬರೆಯುವಂಥ ಒಂದು ಅವಕಾಶ ಏನಿತ್ತೆಂದರೆ, ರೈತರನ್ನು ಮುಟ್ಟಿದರೆ ಯಾರೂ, ಎಂತಹ ಸರ್ಕಾರ ಕೂಡ ಉಳಿಯಲು ಸಾಧ್ಯವಿಲ್ಲವೆಂಬುದು ಸಾಬೀತಾಗುತ್ತಿತ್ತು, ಚರಿತ್ರೆ ನಿರ್ಮಾಣವಾಗುತ್ತಿತ್ತು. ಅಂತಹ ಚರಿತ್ರೆಯನ್ನು ನಿರ್ಮಾಣ ಮಾಡುವ ಸಂದರ್ಭದಲ್ಲಿ ನೀವು ಮಾಡಿದ್ದು ಏನೆಂದರೆ, ಕನ್‌ವೀನಿಯೆಂಟ್ ಆಗಿ ಹೊರಗಡೆಗೆ ಸಭಾತ್ಯಾಗ ಮಾಡಿದಿರಿ, ಕಟ್ ಮೋಷನ್ ಬಿದ್ದುಹೋಯಿತು, ಇದು ಚರಿತ್ರೆ. ಆದುದರಿಂದ ಅದರ ಬಗ್ಗೆ ಹೇಳಲು ನಿಮಗೆ ನೈತಿಕ ಬಲವಿಲ್ಲವೆಂದು ಯಾರಾದರೂ ಸದಸ್ಯರು ಹೇಳುವುದು ಇದ್ದರೆ ಅದು ಸರಿ ಇದೆ. ನೀವು ರೈತರ ಬಗ್ಗೆ ಮಾಡಿರುವ ಅಪರಾಧವೇನಿದೆ, ಅದು ಅಕ್ಷಮ್ಯವಾದುದು, ರೈತರ ಬಗ್ಗೆ ಮಾತನಾಡಲು ನಿಮಗೆ ನೈತಿಕ ಬಲ ಇಲ್ಲವೇ ಇಲ್ಲ, ಅದರಲ್ಲೂ ಗೊಬ್ಬರದ ವಿಚಾರದಲ್ಲಿ.

ಶ್ರೀ ಬಿ. ಬಿ. ಶಿವಪ್ಪ : ಸನ್ಮಾನ್ಯ ಸಚಿವರಾದ ಬೈರೇಗೌಡರ ಮಾತಿಗೆ ನಾನು ಉತ್ತರ ಕೊಡುವುದಿಲ್ಲ, ಉತ್ತರ ಕೊಡಬೇಕಾದರೆ ರಾಜಕೀಯವಾಗಿ ಕೊಡುತ್ತೇನೆ. ಆದರೆ, ನನಗೆ ಲಭ್ಯವಾಗಿರುವ ಸಮಯಾವಕಾಶದಲ್ಲಿ ಅದಕ್ಕೆ ಉತ್ತರ ಕೊಡಲು ಸಾಧ್ಯವಿಲ್ಲ. ಬಹುಶಃ ತಾವು ಹೇಳಿರುವ ರೀತಿಯಲ್ಲಿ ಇವೊತ್ತು ಇಲ್ಲಿ ಸದನ ನಡೆಯುತ್ತಿದೆ. ಇಲ್ಲಿ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷವಿದೆ. ವಿರೋಧ ಪಕ್ಷದಲ್ಲೂ ಹಲವಾರು ವಿರೋಧ ಪಕ್ಷಗಳಿವೆ, ಅವರವರದೇ ಆದ ಧೋರಣೆಗಳಂತೆ ಅವರು ತಮ್ಮ ವ್ಯವಹಾರಗಳನ್ನು ನಡೆಸುತ್ತಿರುತ್ತಾರೆ. ಯಾವುದಾದರೊಂದು ವಿಚಾರವಾಗಿ ಒಂದು ವಿರೋಧ ಪಕ್ಷ ಇಲ್ಲಿ ಪ್ರಸ್ತಾಪಿಸಬೇಕೆಂದಾದರೆ ಎಲ್ಲಾ ವಿರೋಧ ಪಕ್ಷಗಳನ್ನೂ ತನ್ನ ಹಿಡಿತಕ್ಕೆ ತೆಗೆದುಕೊಂಡು ಇಂತಹ ವಿಚಾರದಲ್ಲಿ ನಾವು ಇವೊತ್ತು ವಿರೋಧ ಮಾಡುತ್ತಿದ್ದೇವೆ, ಈ ರೀತಿಯಾದ ನಿಲುವನ್ನು ತೆಗೆದುಕೊಳ್ಳಬೇಕಾಗುತ್ತದೆ, ಸರ್ಕಾರ ಅದಕ್ಕೆ ಯೀಲ್ಡ್ ಆಗದಿದ್ದರೆ ನಾವು ಏನು ನಿಲುವು ತೆಗೆದುಕೊಳ್ಳಬೇಕೆನ್ನುವುದರ ಬಗ್ಗೆ ಒಂದು ಒಮ್ಮತದ ಒಪ್ಪಂದಕ್ಕೆ ಬಂದು ನಂತರ ಅದನ್ನು ಪ್ರಸ್ತಾಪಿಸಿ ಆ ಒಪ್ಪಂದದ ಹಿಂದೆ ಆ ಪಕ್ಷ ಹೋಗದಿದ್ದರೆ ನಾನು ತಮ್ಮ ಆಪಾದನೆಯನ್ನು ಒಪ್ಪಿಕೊಳ್ಳುತ್ತಿದ್ದೆ. ಆದರೆ, ಬಿ.ಜೆ.ಪಿ.ಯಲ್ಲಿರುವವರು ಕೂಡ ಎಲ್ಲರೂ ರೈತರ ಮಕ್ಕಳಾಗಿದ್ದು, ನಮಗೆ ನೈತಿಕ ಹಕ್ಕು ಇಲ್ಲವೆಂದು ಹೇಳುವುದಕ್ಕೆ ತಮಗೆ ಆ ನೈತಿಕ ಹಕ್ಕು ಇಲ್ಲವೆಂದು ಹೇಳಬೇಕಾಗುತ್ತದೆ. ದಯಮಾಡಿ, ಈಗ ಅದರ ಬಗ್ಗೆ ಚರ್ಚೆ ಬೇಡ. ಇನ್ನು - ರೈತರು ತೆಗೆದುಕೊಂಡ ಸಾಲದ ಬಗ್ಗೆ ಹೇಳುವುದಾದರೆ, ಹಿಂದೆ ಮುಂದೆ, ತಿರುಗಾ-ಮುರುಗಾ ಎಳೆದಾಡಿ ಒಂದು ರೀತಿಯ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಬಿಡುವಂಥ ವ್ಯವಸ್ಥೆ ಮಾಡಿದ್ದಾರೆ. ಇದು ಯಾರಿಗೆ ಅನುಕೂಲ ವಾಗಿದೆಯೋ ಗೊತ್ತಿಲ್ಲ. ಇದನ್ನು ರೈತರ ಹೆಸರಿನಲ್ಲಿ ಮಾಡಿದಿರಿ, ಎಷ್ಟು ಜನ ರೈತರಿಗೆ ಅದರ ಅನುಕೂಲವಾಗಿದೆಯೆಂಬುದನ್ನು ಬೈರೇಗೌಡರು ಹೇಳುವುದಕ್ಕೆ ತಯಾರಿದ್ದಾರೆಯೇ ?

(ಈ ಹಂತದಲ್ಲಿ ಮಾತನಾಡಲು ಸಚಿವರಾದ ಬೈರೇಗೌಡರು ಎದ್ದು ನಿಂತರು)

ಶ್ರೀ ಬಿ. ಬಿ. ಶಿವಪ್ಪ : ತಾವು ಕುಳಿತುಕೊಳ್ಳಿ. ಈಗ ಇದರ ಬಗ್ಗೆ ಚರ್ಚೆ ಬೇಡ.

ಶ್ರೀ ಸಿ. ಬೈರೇಗೌಡ : ಹೇಳುವುದಕ್ಕೆ ನಾವು ಎದ್ದರೆ ಬೇಡವೆಂದು ನೀವು ಹೇಳುತ್ತಿದ್ದೀರಿ. ಈಗಾಗಲೇ ಇದಕ್ಕೆ ಸಂಬಂಧಿಸಿದ ಸಚಿವರು ಉತ್ತರ ಕೊಟ್ಟಿದ್ದು, ರೈತರಿಗೆ ಎಷ್ಟು ಕೋಟಿ ರೂಪಾಯಿಗಳ ಪ್ರಯೋಜನವಾಗಿದೆಯೆಂದು ಹೇಳಿದ್ದಾರೆ.

ಶ್ರೀ ಬಿ. ಬಿ. ಶಿವಪ್ಪ : ಶೇಕಡ 5ರಷ್ಟು ರೈತರಿಗೆ ಅನುಕೂಲವಾಗಿರಬಹುದು. ನಾನು ಅದಕ್ಕೆ ಧನ್ಯವಾದಗಳನ್ನು ಹೇಳಿದ್ದೇನೆ. ಇನ್ನು ಕುಡಿಯುವ ನೀರಿನ ವ್ಯವಸ್ಥೆ ಬಗ್ಗೆ ಹೇಳುವುದಾದರೆ, ಈ ಸಂದರ್ಭದಲ್ಲಿ ನಾವು ದಿವಂಗತ ನಜೀರ್ ಸಾಬ್‌ರವರನ್ನು ಸ್ಮರಿಸಿಕೊಳ್ಳದೆ ಇದ್ದರೆ ತಪ್ಪಾಗುತ್ತದೆ. ಇವತ್ತು ಆ ಪಕ್ಷ ಮತ್ತೆ ತನ್ನ ಅಧಿಕಾರ ಮತ್ತು ಅಸ್ತಿತ್ವವನ್ನೇ ಕಳೆದುಕೊಂಡು ಈ ರಾಜ್ಯದಿಂದ ಹೊರಗೆ ಹೋದಂತಹ ಪಕ್ಷ ಮತ್ತೆ ಅಧಿಕಾರಕ್ಕೆ ಬರಬೇಕಾದರೆ ದಿವಂಗತ ನಜೀರ್‌ಸಾಬ್‌ರವರು ಕಾರಣ ಎಂದು ಹೇಳಿದರೆ ತಪ್ಪಾಗಲಾರದು. ಅಂತಹ ಒಬ್ಬ ಪುಣ್ಯಾತ್ಮ ಈ ಒಂದು ನೀರಿನ ವ್ಯವಸ್ಥೆಯನ್ನು ಈ ರಾಜ್ಯದಲ್ಲಿ ಮಾಡಿ ತಮ್ಮ ಪಕ್ಷದ ಉಳಿವಿಗೆ ಕಾರಣಕರ್ತರಾಗಿರ ತಕ್ಕಂಥ ಅವರ ಹೆಸರಿನಲ್ಲಿ ಆಗುತ್ತಿರತಕ್ಕಂಥ ಅವ್ಯವಹಾರದ ಬಗ್ಗೆ ತಮ್ಮ ಗಮನ ಇರಲಿ. ಇವತ್ತು ಕೂಡ ಇಷ್ಟು ಜನ ಚರ್ಚೆ ಮಾಡುವಾಗ ನಾನು ನೋಡಿದೆ. ಪುನಃ ಬೋರ್‌ವೆಲ್‌ನ ಬಗ್ಗೆ ಚರ್ಚೆ ಮಾಡುತ್ತಿದ್ದೀರಿ. ಈ ಬೋರ್‌ವಲ್‌ನಲ್ಲಿ ನಡೆಯುತ್ತಿರತಕ್ಕಂಥ ಅವ್ಯವಹಾರ ಅನಾಚಾರ, ಅತ್ಯಾಚಾರ ಯಾರಿಗೆ ಅನುಕೂಲ ವಾಗುತ್ತಿದೆ. ಬಹುತೇಕ ಮಲೆನಾಡಿನಿಂದ ಬಂದಿರತಕ್ಕಂಥ ನನಗೆ ಖಂಡಿತವಾಗಿ ಹೇಳುವುದಾದರೆ ಅಲ್ಲಿ ಬೋರ್‌ವೆಲ್‌ಗಳು ಸಂಪೂರ್ಣ ವಿಫಲವಾಗಿವೆ. ಇದರ ಬಗ್ಗೆ ಎರಡು ಮಾತಿಲ್ಲ. ಮಲೆನಾಡಿನಲ್ಲಿ ತೆರೆದ ಬಾವಿಗಳು, ಜರಿಯಲ್ಲಿ ಹರಿದು ಬರತಕ್ಕಂಥ ನೀರು ಇದನ್ನು ಉಪಯೋಗಿಸಿ ಬೋರ್‌ವೆಲ್‌ಗಿಂತ ಕಡಿಮೆ ಖರ್ಚಿನಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡತಕ್ಕಂಥ ಒಂದು ವ್ಯವಸ್ಥೆ ಇದ್ದರೂ ಕೂಡ ಬೋರ್‌ವೆಲ್‌ನ್ನೇ ತೆಗೆಯಬೇಕು ಎಂದು ಏನು ವಿಚಾರ ಇದೆ ಆ ವಿಚಾರದಿಂದ ಸ್ವಲ್ಪ ಹಿಂದೆ ಹೋಗಿ ಈ ವ್ಯವಸ್ಥೆಯನ್ನು ಅಳವಡಿಸಬೇಕು ಎಂದು ನಾನು ಸನ್ಮಾನ್ಯ ಸಚಿವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಾನು ಒಂದು ಉದಾಹರಣೆ ಕೊಡುತ್ತೇನೆ. ನನ್ನ ಕ್ಷೇತ್ರದಲ್ಲಿ ಒಂದು ಊರು ಇದೆ. ಅದು 10 ಮನೆಗಳು ಇರತ್ಕಂಥ ಒಂದು ಸಣ್ಣ ಗ್ರಾಮ. ಆ 10 ಮನೆಯಲ್ಲಿ 11 ಬೋರ್‌ವೆಲ್ ತೆಗೆದಿದ್ದಾರೆ. ಆ 11 ಬೋರ್‌ವೆಲ್‌ನಲ್ಲಿ 10 ಬೋರ್‌ವೆಲ್ ವಿಫಲವಾಗಿದೆ. ಒಂದು ಬೋರ್‌ವೆಲ್‌ನಲ್ಲಿ ಮಾತ್ರ ಸ್ವಲ್ಪ ನೀರು ಬರುತ್ತಿದೆ. ಎಂದ ಮೇಲೆ ಇದಕ್ಕೆ ಎಲ್ಲಾ ವ್ಯವಸ್ಥೆ ಇಟ್ಟುಕೊಂಡು ಅಲ್ಲಿ ನೀರು ಇದೆಯೋ ಇಲ್ಲವೋ ಎಂದು ಪರೀಕ್ಷೆ ಮಾಡಿ ಕಂಡು ಹಿಡಿದು ಬೋರ್‌ವೆಲ್ ತೆಗೆಯತಕ್ಕಂಥ ವ್ಯವಸ್ಥೆ ಇದ್ದರೂ ಕೂಡ ಈ 11 ಬೋರ್‌ವೆಲ್ ಕೂಡ ಅಲ್ಲಿ ಉಪಯೋಗವಾಗಲಿಲ್ಲ. ಎಂದ ಮೇಲೆ ಬೋರ್‌ವೆಲ್ ಅವಶ್ಯಕತೆ ಇದೆಯೇ ಎನ್ನುವುದರ ಬಗ್ಗೆ ಚಿಂತೆ ಮಾಡಿ. ಅದಕ್ಕೆ ಬದಲಿ ವ್ಯವಸ್ಥೆ ಮಾಡತಕ್ಕಂಥಾದ್ದು ಸರ್ಕಾರದ ಕರ್ತವ್ಯ. ಅದನ್ನು ತಾವು ಮಾಡಿದಿರಿ ಎಂದು ಹೇಳುವುದಿಲ್ಲ. ಅದು ಸರ್ಕಾರದ ಕರ್ತವ್ಯ. ಆದುದರಿಂದ ತಾವು ಈ ವಿಚಾರವನ್ನು ಮರುಪರಿಶೀಲನೆ

ಮಾಡಿ ಎಲ್ಲೆಲ್ಲಿ ಬೇರೆ ರೀತಿಯಲ್ಲಿ ನೀರು ಸಿಗುವುದಕ್ಕೆ ಅವಕಾಶ ಇದೆ ಅಂತಹ ಜಾಗದಲ್ಲಿ ಆ ರೀತಿಯ ಬದಲಾವಣೆ ಮಾಡಿಕೊಳ್ಳಬೇಕು ಎಂದು ತಮ್ಮ ಮೂಲಕ ಸರ್ಕಾರವನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಂತರ, ಅಭಿವೃದ್ಧಿ ಕಾರ್ಯಕ್ರಮದಲ್ಲಿ ನೀರಾವರಿಗೆ ಮೊದಲಿಂದಲೂ ಹೆಚ್ಚು ಪ್ರಾಶಸ್ತ್ಯ ನೀಡಲಾಗಿದೆ ಎಂದು ಹೇಳಿದ್ದಾರೆ, ನಮ್ಮಲ್ಲಿ ಹೇಮಾವತಿ ಪ್ರಾಜೆಕ್ಟ್ ಇದೆ. ಇದಕ್ಕೆ ಹಿಂದೆ ಈ ರಾಜ್ಯದಲ್ಲಿ ಸನ್ಮಾನ್ಯ ದೇವೇಗೌಡರು ವಿರೋಧಪಕ್ಷದಲ್ಲಿ ಇದ್ದಾಗ ಒಂದು ಭಾರೀ ದೊಡ್ಡ ಕರ್ಮಕಾಂಡ ನಡೆಯಿತು. ಆದು ಶರಾವತಿ ಕರ್ಮಕಾಂಡ. ಇದು ಕರ್ನಾಟಕಾದಾದ್ಯಂತ ಬಾರೀ ಹೆಚ್ಚಿನ ಪ್ರಚಾರವಾದಂತಹ ವಿಚಾರ. ಈ ಅಣೆಕಟ್ಟು ಕಟ್ಟುವಂತಹ ಜಾಗದಲ್ಲಿ ಕೂಡ ಭ್ರಷ್ಟಾಚಾರ, ಅನಾಚಾರ, ಅತ್ಯಾಚಾರ ನಡೆಯುತ್ತಿದೆ ಎನ್ನುವಂತಹ ವಿಚಾರ ಪತ್ರಿಕೆಗಳಲ್ಲಿ ಪ್ರಚಾರವಾಯಿತು. ಇವತ್ತು ಅದರ ಹತ್ತಲ್ಲ ನೂರು ಪಟ್ಟು ಅವ್ಯವಸ್ಥೆ ಹೇಮಾವತಿಯ ವ್ಯವಹಾರದಲ್ಲಿ ನಡೆದಿದೆ ಎಂದರೆ ತಪ್ಪಾಗಲಾರದು. ಇದರ ಪೂರ್ತಿ ವಿವರವನ್ನು ಕೊಡುವುದಕ್ಕೆ ನಾನು ಸಿದ್ಧನಿದ್ದೇನೆ. ಆದರೆ ಇವತ್ತು ನಾನು ಇಷ್ಟು ಮಾತ್ರ ಮಾನ್ಯ ಮುಖ್ಯ ಮಂತ್ರಿಗಳನ್ನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತಿದ್ದೇನೆ. ಅವರ ಕ್ಷೇತ್ರಕ್ಕೆ ಸಂಬಂಧ ಪಟ್ಟಿರತಕ್ಕಂಥ ಅವರ ಜಿಲ್ಲೆಗೆ ಸಂಬಂಧಪಟ್ಟಿರತಕ್ಕಂಥ, ಅವರ ಖಾತೆಗೆ ಸಂಬಂಧಪಟ್ಟಿರತಕ್ಕಂಥ ವಿಚಾರದಲ್ಲಿ ಆಗಿರತಕ್ಕಂಥ ಅವ್ಯವಹಾರಗಳನ್ನು ಪತ್ತೆ ಮಾಡಿ ಇಲ್ಲಿ ನಡೆದಿರತಕ್ಕಂಥ ವಿಚಾರಕ್ಕೆ ಸಂಬಂಧಪಟ್ಟಿರತಕ್ಕಂಥ ಅಧಿಕಾರಿಗಳು ಯಾರೇ ಇರಲಿ, ಅವರು ದೊಡ್ಡವರು ಇರಲಿ, ಚಿಕ್ಕವರು ಇರಲಿ, ಅವರು ಇವತ್ತು ಚಾಕರಿಯಲ್ಲಿ ಇರಲಿ, ಅಥವಾ ನಿವೃತಿಯಾಗಿ ಮನೆಗೆ ಹೋಗಿರಲಿ ಅವರನ್ನು ಹಿಡಿದು ಶಿಕ್ಷೆ ಮಾಡದೇ ಇದ್ದರೆ ಮುಂದೆ ತಾವು 2000 ವರ್ಷದೊಳಗೆ ಬರತಕ್ಕಂಥ ಹಣ ಏನಿದೆ 1 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ ಎಂದು ತಾವು ಏನು ಇಲ್ಲಿ ಪ್ರಸ್ತಾಪ ಮಾಡಿದ್ದೀರಿ, ಅದೂ ಕೂಡ ಇದೇ ರೀತಿ ಪೋಲು ಆಗುವುದಕ್ಕೆ ಅವಕಾಶವಾಗುತ್ತದೆ. ಅದಕ್ಕೆ ಅವಕಾಶ ಕೊಡದ ರೀತಿಯಲ್ಲಿ ಒಂದು ಸೂಕ್ತ ತನಿಖೆಗೆ ವ್ಯವಸ್ಥೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನು ನಮ್ಮ ರಾಜ್ಯದಲ್ಲಿ ಪ್ರಮುಖವಾಗಿರತಕ್ಕಂಥಾದ್ದು ಎರಡು ವಿಚಾರಗಳು. ಒಂದು ವಿದ್ಯುಚ್ಛಕ್ತಿ, ಮತ್ತೊಂದು ನಮ್ಮ ರಾಜ್ಯ ರಸ್ತೆ ಸಾರಿಗೆ. ಇದಕ್ಕೆ ಏಕೆ ಈ ರೀತಿ ಹೆಸರು ಬಂತೋ ಗೊತ್ತಿಲ್ಲ, ಕೆಎಸ್‌ಆರ್‌ಟಿಸಿ ಎಂದು ಹೇಳುತ್ತಾರೆ. ನಮ್ಮ ಹಳ್ಳಿಗೆ ಹೋದರೆ ಇದಕ್ಕೆ ಏನು ಹೇಳುತ್ತಾರೆ ಎಂದರೆ ಕಚಡಾ ಸರ್ವೀಸ್ ರನ್ ಬೈ ತರಲೆ ಅಂಡ್ ಕಂಪನಿ ಎಂದು ಹೇಳುತ್ತಾರೆ. ಹಳ್ಳಿಯಲ್ಲಿ ಬಸ್ ಯಾವತ್ತು ಬರುತ್ತದೋ, ಯಾವತ್ತು ಹೋಗುತ್ತದೋ ಗೊತ್ತಿಲ್ಲ. ಇದಕ್ಕೆ ಸಮಯ ಇಲ್ಲ. ಅಥವಾ ಒಂದು ವಾರದಿಂದ ಬರದೇನೆ ಹೋಗಬಹುದು. ಇವತ್ತು ಗ್ರಾಮಾಂತರ ಪ್ರದೇಶದಲ್ಲಿ ಆರಿಸಿ ಬಂದಿರತಕ್ಕಂಥ ಶಾಸಕ ಬಸ್ಸಿನ ಒಂದು ವಿಚಾರದಲ್ಲಿ ಅವನ ಜೀವಮಾನದಲ್ಲಿ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲದೆ ಇರುವಂತಹ ಕೆಟ್ಟ ಹೆಸರು ತೆಗೆದುಕೊಳ್ಳುವುದಕ್ಕೆ ಅವಕಾಶ ಆಗಿದೆ. ಇನ್ನೊಂದು ಕೆಇಬಿ. ಹೆಸರಿಗೆ ತಕ್ಕಂಥ ಕರೆಂಟ್ ಇಲ್ಲ ಬಿಡಿ. ಯಾವತ್ತು ನೋಡಿ ಕರೆಂಟ್ ಇಲ್ಲ. ಬೆಳಿಗ್ಗೆಯಿಂದ ಸಂಜೆಯವರೆಗೆ ಕರೆಂಟ್ ಇಲ್ಲ, ಸಂಜೆಯಿಂದ ಬೆಳಗಿನವರೆಗೂ ಕರೆಂಟ್ ಇಲ್ಲ. ಇನ್ನು

ಯಾವಾಗ ಇರುತ್ತದೆ ಕರೆಂಟ್ ? ಕರೆಂಟ್ ಬರೋವವರೆಗೂ ನಾವು ಕಾಯುತ್ತಿರಬೇಕು. ಹಳ್ಳಿ ನಗರದ ರೀತಿ ಮಾದರಿಯಾಗಿ ಇರುವುದಿಲ್ಲ. ಗ್ರಾಮಾಂತರ ಪ್ರದೇಶದಲ್ಲಿ ನಮ್ಮ ನೀರಾವರಿ ಪಂಪುಗಳು ಎಲ್ಲೋ ಒಂದು ಕಡೆ ಇರುತ್ತವೆ. ನೀರಾವರಿ ಪಂಪ್‌ನ್ನು ಕಾಯುತ್ತಿರಬೇಕು. ಯಾವಾಗ ಕರೆಂಟ್ ಬಂತೋ ಸರಿ ಇಲ್ಲಿಂದ ಓಡಿ ಹೋಗಿ ಇನ್ನೇನು ಸ್ವಿಚ್ ಹಾಕಬೇಕು ಎನ್ನುವಷ್ಟರಲ್ಲಿ ಕರೆಂಟ್ ಹೋಯಿತು. ಕರೆಂಟ್ ಹೋಯಿತು ಎಂದು ಮನೆಗೆ ಬರುವಷ್ಟರಲ್ಲಿ ಮತ್ತೆ ಕರೆಂಟ್ ಬರುತ್ತದೆ. ಯಾವಾಗ ಕರೆಂಟ್ ಬರುತ್ತದೆ ಎಂದು ಗೊತ್ತಾಗುವುದಿಲ್ಲ. ನಮ್ಮ ವಿದ್ಯುಚ್ಛಕ್ತಿ ಮಂತ್ರಿಗಳು ಇಲ್ಲ. ಜೆ.ಹೆಚ್.ಪಟೇಲ್ ಅವರು ಕರೆಂಟ್ ಬಂತು, ಆದರೆ ಏಕೆ ಅದರ ವೋಲ್ಟೇಜ್ ಕಡಿಮೆಯಾಯಿತೋ ನನಗೆ ಗೊತ್ತಿಲ್ಲ. ಅವರ ವೋಲ್ಟೇಜ್ ಅಲ್ಲ ಕರೆಂಟ್ ವೋಲ್ಟೇಜ್ ಕಡಿಮೆ ಆಗಿಬಿಟ್ಟಿದೆ. ಏಕೆ ಎಂದು ಗೊತ್ತಿಲ್ಲ. ಈ ಸಾರಿ ಒಂದು ವಿಶೇಷವಾದಂತಹ ವಾತಾವರಣ ಎಂದರೆ ಇಡೀ ರಾಜ್ಯದಲ್ಲಿ ವೋಲ್ಟೇಜ್ ಇಲ್ಲ.

ಅಧ್ಯಕ್ಷರು : ನಂಜೇಗೌಡರು ಹೇಳಿದಾಗ ಅವರನ್ನು ನಾನು ಮೊನ್ನೆ ಕೇಳಿದೆ. ಕಡಿಮೆಯಾಯಿತು ಎಂದು, ಅವರು ಒಪ್ಪಲ್ಲ.

ಶ್ರೀ ಬಿ. ಬಿ. ಶಿವಪ್ಪ : ಒಪ್ಪಿಲ್ಲವೇ, ನನಗೆ ಏನೋ ಅನುಭವವಾಗಿದೆ. ವೋಲ್ಟೇಜ್ ಇಲ್ಲ.

ಅಧ್ಯಕ್ಷರು : ನನಗೆ ಅನುಭವ ಆಗಿಲ್ಲ, ನಿಮಗೆ ಆಗಿದೆ.

ಶ್ರೀ ಬಿ. ಬಿ. ಶಿವಪ್ಪ : ನನಗೆ ಏನೋ ಅನುಭವವಾಗಿದೆ. ಇಡೀ ರಾಜ್ಯದಲ್ಲಿ ವೋಲ್ಟೇಜ್ ಇಲ್ಲ. ಅದು ಏಕೆ ಎಂದು ಗೊತ್ತಿಲ್ಲ ಅವರು ಕರೆಂಟ್ ಮಂತ್ರಿ ಆದಾಗ ವೋಲ್ಟೇಜ್ ಇಲ್ಲಿಂದ ಹೊರಟು ಹೋಯಿತು. ಹಾಗಾಗಿ ಕರೆಂಟ್‌ನ ವೋಲ್ಟೇಜ್ ಹೊರಟು ಹೋಯಿತೋ, ಜೆ.ಹೆಚ್. ಪಟೇಲ್‌ರ ವೋಲ್ಟೇಜ್ ಹೊರಟು ಹೋಯಿತೋ ನನಗೆ ಅನುಮಾನ. ಸಾಧಾರಣವಾಗಿ ನಾನು ಭಾರೀ ವಿದ್ಯುತ್ತನ್ನು ಉಪಯೋಗಿಸತಕ್ಕಂಥ ಗ್ರಾಹಕರ ಪೈಕಿ ಒಬ್ಬ. ಸುಮಾರು ನೂರು ಹೆಚ್‌ಪಿಯಿಂದ 25 ಹೆಚ್‌ಪಿಯವರೆಗೆ ಇಟ್ಟು ಕೊಂಡಿದ್ದೇನೆ. ಈ ವರ್ಷ ಬರಿ ಮೋಟಾರ್‌ಗಳನ್ನು ರಿವೈಂಡ್ ಮಾಡುವುದಕ್ಕೋಸ್ಕರ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಬೇಕಾಯಿತು. ಕಾರಣ ವೋಲ್ಟೇಜ್ ಇಲ್ಲ. ಇನ್ನೊಂದು ವಿಚಿತ್ರವಾದಂತಹ ಪರಿಸ್ಥಿತಿ ಏನಿದೆ ಎಂದರೆ, ಸ್ವಿಚ್ ಹಾಕಿ ಇಲ್ಲಿಗೆ ಬರುವುದರೊಳಗೆ ಅಫ್ ಆಗುತ್ತದೆ. ಕರೆಂಟ್ ಹೋಯಿತು ಎಂದಾಗ ಮತ್ತೆ ಕರೆಂಟ್ ಬರುತ್ತದೆ, ತಕ್ಷಣ ಮೋಟಾರ್ ರನ್ ಆಗಬೇಕು ಎನ್ನುವುದರೊಳಗೆ ಮೋಟಾರ್ ಸುಟ್ಟು ಹೋಗುತ್ತದೆ. ನಾನು ಇವರನ್ನು ಕೇಳುವುದು ಇಷ್ಟೇ, ನಿಮಗೆ ಕರೆಂಟ್‌ಗೆ ನಿಜವಾಗಿ ತೊಂದರೆ ಇದ್ದರೆ ದಿವಸದ 24 ಗಂಟೆಯೊಳಗೆ ನಮಗೆ ಎಷ್ಟು ಗಂಟೆ ಕೊಡುತ್ತೀರಿ ಎಂದು ನಿಗದಿ ಪಡಿಸಿ. ನಾವು ರೈತರುಗಳು ಒಪ್ಪಿಕೊಳ್ಳುತ್ತೇವೆ. ನೀವು ದಿವಸದಲ್ಲಿ 6 ಗಂಟೆ 8 ಗಂಟೆ ಕೊಡುತ್ತೀರೋ ಅಷ್ಟನ್ನು ನಿಗದಿತ ಸಮಯದಲ್ಲಿ ಸರಿಯಾದಂತಹ ಸಮರ್ಪಕವಾದಂತಹ ವೋಲ್ಟೇಜ್ ಮತ್ತು ಯಾವುದೇ ತರಹದ ತೊಂದರೆ ಇಲ್ಲದೆ ಮಧ್ಯೆ ಮಧ್ಯೆ ಹೋಗದೆ ಇರುವಂತಹ ರೀತಿಯಲ್ಲಿ ವ್ಯವಸ್ಥೆ ಮಾಡಿ ವಿದ್ಯುಚ್ಛಕ್ತಿಯನ್ನು ಕೊಡಬೇಕು ಎಂದು ಸಂಬಂಧಪಟ್ಟ ಮಂತ್ರಿಗಳನ್ನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಮತ್ತೇ ಹುಡ್ಕೋ

ಮನೆಗಳ ವಿಚಾರ. ಒಂದು ಲಕ್ಷ ಮನೆಗಳನ್ನು ಕಟ್ಟುತ್ತೇವೆ ಎಂದು ಹೇಳಿದ್ದಾರೆ. ನಮ್ಮ ಸಕಲೇಶಪುರದಲ್ಲಿ ತುಂಬಾ ಮನೆಗಳನ್ನು ಕಟ್ಟಿದ್ದಾರೆ. ಅಲ್ಲಿ 1985ರಲ್ಲಿ 88 ಮನೆಗಳನ್ನು ಕಟ್ಟಿದ್ದಾರೆ. 80 ಮನೆಗಳಿಗೆ 300 ಜನರಿಂದ 500, 1000, 1500ರವರೆಗೆ ಡೆಪಾಸಿಟ್ ತೆಗೆದುಕೊಂಡಿದ್ದಾರೆ, ಮತ್ತೆ ಯಾರಿಗೆ ಮನೆ ಅಲಾಟ್ ಆಗಿದೆ ಅವರಿಂದ 24 ಸಾವಿರದಿಂದ 40 ಸಾವಿರ ರೂಪಾಯಿಯವರೆಗೆ ಹಣ ತೆಗೆದುಕೊಂಡಿದ್ದಾರೆ. ಈ 80 ಮನೆಗಳನ್ನು ಕಟ್ಟಿರತಕ್ಕಂಥ ವ್ಯಕ್ತಿಗೆ ಸರ್ಕಾರ ಸಂಪೂರ್ಣವಾಗಿ ಹಣವನ್ನು ಪಾವತಿ ಮಾಡಲಾಗಿದೆ. ಅದಕ್ಕೆ ಬಾಗಿಲು ಇಲ್ಲ, ಕಿಟಕಿ ಇಲ್ಲ ರಸ್ತೆ ಇಲ್ಲ ಮತ್ತು ಅಲ್ಲಿ ಬೇಕಾದಂತಹ ಒಳಚರಂಡಿಗಳು ಆಗಲಿಲ್ಲ. ವಿದ್ಯುತ್ ಸರಬರಾಜು ಇಲ್ಲ. ಈ ರೀತಿ ಎಲ್ಲಾ ಇಲ್ಲ ಇಲ್ಲಗಳನ್ನು ಮಾಡಿ ಇವತ್ತಿನವರೆಗೆ ಆ ಮನೆಗಳಿಗೆ ವಾಸಕ್ಕೆ ಯಾರೂ ಹೋಗಲಿಲ್ಲ. ಇದು 88ರಲ್ಲಿ ಆಯಿತು ಎಂದರೋ ಈಗ 1995 ಆಗಿದೆ. ಅಲ್ಲಿ ಇವತ್ತು ಕುರಿ ಕೋಳಿ ವಾಸ ಮಾಡತಕ್ಕಂಥ ಸ್ಥಾನವಾಗಿದೆ. ಅದಕ್ಕೆ ಕೊಟ್ಯಾಂತರ ರೂಪಾಯಿಗಳನ್ನು ಸರ್ಕಾರ ಖರ್ಚು ಮಾಡಿದ್ದೇವೆ ಎಂದು ಪ್ರಸ್ತಾಪ ಮಾಡಿದ್ದಾರೆ, ಇಂತಹ ಕಳಪೆ ಮನೆಗಳನ್ನು ಕಟ್ಟುವುದರ ಬದಲು ಹೇಳಿದ್ದಾರೆ. ಅತ್ಯಂತ ಉತ್ತಮವಾಗಿರತಕ್ಕಂಥ ಎಂದರೆ ಆರಿಸಿದಂತಹ ಜಾಗದಲ್ಲಿ ಲಕ್ಷದ ಬದಲು ಸಾವಿರ ಮನೆ ಕಟ್ಟಿ, 5 ಸಾವಿರ ಮನೆ ಕಟ್ಟಿ. ಆದರೆ ಮನೆ ಅತ್ಯಂತ ಉತ್ತಮವಾಗಿರಬೇಕು, ವಾಸಕ್ಕೆ ಯೋಗ್ಯವಾಗಿರಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ವಿದ್ಯುತ್ ಅಭಾವದಿಂದ ನಮಗೆ ಆಗಿರತಕ್ಕಂಥ ಒಂದೆರಡು ತೊಂದರೆಗಳನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಮೈಸೂರಿನ ಸಣ್ಣ ಕೈಗಾರಿಕಾ ಘಟಕಗಳು ಎದುರಿಸುತ್ತಿರುವ ಸಮಸ್ಯೆ ಎಂದರೆ ಅಲ್ಲಿ ಒಂದು ಓಟಿಎಸ್ ಎಲಿವೇಟರ್ಸ್ ಎಂದು 400 ಕೋಟಿ ರೂಪಾಯಿ ಬಂಡವಾಳ ಮಾಡತಕ್ಕಂಥ ಒಂದು ಸಂಸ್ಥೆ ವಿದ್ಯುತ್ ಇಲ್ಲ ಎಂದು ಇವತ್ತು

12.50 ಪಿ.ಎಂ

ಹೊಸೂರಿನ ಕಡೆ ಹೊರಟು ಹೋಯಿತು. ಮತ್ತೊಂದು ಟಾಟಾ ಕಂಪನಿ ಮರ್ಸಿಡಿಸ್ ಬೆಂಜ್ ಕಾರನ್ನು ತಯಾರಿಸುವ ಘಟಕ ಸೆಂಟ್ ಪರ್ಸೆಂಟ್ ರಫ್ತು ಮಾಡುವಂಥ ಕಾರ್ಖಾನೆ ವಿದ್ಯುತ್ತಿನ ಅಭಾವದಿಂದಾಗಿ ವಾಪಸ್ಸು ಹೊರಟು ಹೋಯಿತು. ಈ ರೀತಿ ಅನೇಕ ಘಟಕಗಳು ಇವತ್ತು ಕರ್ನಾಟಕದಲ್ಲಿ ಬಂಡವಾಳ ಮಾಡುವುದಕ್ಕೆ ಬರುತ್ತಿರತಕ್ಕಂಥ ಸಂದರ್ಭದಲ್ಲಿ ಕೇವಲ ವಿದ್ಯುತ್ತಿನ ಅಭಾವದಿಂದ ವಾಪಸ್ಸು ಹೊಗುತ್ತಿರುವಂತಹ ವಿಚಾರವನ್ನು ಗಮನಿಸಬೇಕು. ಈಗಾಗಲೇ ಮಾನ್ಯ ಮಂತ್ರಿಗಳು ವಿದೇಶಿ ಪ್ರವಾಸವನ್ನು ಮಾಡಿ ಹಲವಾರು ಹೊಸ ಕೈಗಾರಿಗೆಗಳನ್ನು ತರತಕ್ಕಂಥ ಸಂದರ್ಭದಲ್ಲಿ ಈ ಹಳೆಯ ಕೈಗಾರಿಕೆಗಳು ಹೋಗುತ್ತಿರುವುದನ್ನು ಕೂಡ ತಮ್ಮ ಗಮನಕ್ಕೆ ತೆಗೆದುಕೊಳ್ಳಬೇಕು ಎಂದು ಹೇಳುತ್ತಾ, ಇನ್ನು ಬಸ್ಸುಗಳ ವಿಚಾರದಲ್ಲಿ ಹೇಳುತ್ತೇನೆ. ಪ್ರೈವೇಟ್ ಬಸ್‌ಗಳು ಓಡಾಡುತ್ತವೆ, ಅವುಗಳಿಗೆ ಕೆಲವು ನಿಭಂದನೆಗಳು ಇದೆ. ಪರ್ಮಿಟ್ ವಗೈರೆ ಚೆಕ್ ಮಾಡತಕ್ಕಂಥಾದ್ದು. ಆದರೆ ನಮ್ಮ ಜಿಲ್ಲೆಯಲ್ಲಿ

ಇದು ಏನೂ ಇಲ್ಲ, ಇದಕ್ಕೆ ಪರ್ಮಿಟ್ ವಗ್ಯೆರೆ ಇಲ್ಲ, ಹೊಸ ಬಸ್‌ಗೆ ಮುಖ್ಯಮಂತ್ರಿಗಳ ಫೋಟೋ ಹಾಕಿಬಿಟ್ಟರೆ ಅದು ಯಾವ ರೂಟ್‌ನಲ್ಲಿ ಯಾವ ರಾಜ್ಯದಲ್ಲಿ, ಎಲ್ಲಿ ಬೇಕಾದರೂ ಓಡಾಡಬಹುದು. ಇಂತಹ ಒಂದು ವ್ಯವಸ್ಥೆ ನಡೆಯುತ್ತಿದೆ. ಇದು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಇದು ಬಹುತೇಕ ಅವರ ಗಮನಕ್ಕೆ ಬಂದಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಇದು ಹಾಸನ ಜಿಲ್ಲೆಯಲ್ಲಿ ನಡೆಯುತ್ತಿರತಕ್ಕಂಥ ಒಂದು ವ್ಯವಸ್ಥೆ ಇದಕ್ಕೆ ಕಡಿವಾಣ ಹಾಕಬೇಕು. ಬಹುಶಃ ಇದು ರಾಜ್ಯದ ಎಲ್ಲಾ ಕಡೆ ಪ್ರಚಾರವಾಗುವಂತಹ ವ್ಯವಸ್ಥೆ ಪ್ರಾರಂಭವಾಗಿದೆ. ಹಾಸನದಲ್ಲಿ ಈ ವಿಚಾರದಲ್ಲಿ ದೊಡ್ಡ ಗೊಂದಲವಾಗಿದೆ. ಹಾಸನದ ಶಾಸಕರು ಮಧ್ಯೆ ಪ್ರವೇಶ ಮಾಡಿ ತಕ್ಕಮಟ್ಟಿಗೆ ಇದನ್ನು ತಹಬದಿಗೆ ತಂದಿದ್ದಾರೆ, ಕೊನೆಯದಾಗಿ ಮೊನ್ನೆ ಮಾನ್ಯ ನಂಜೇಗೌಡರು ದೊಡ್ಡ ಚರ್ಚೆಯನ್ನು ಮಾಡಿದರು, ಕಾಂಗ್ರೆಸ್ ಸರ್ಕಾರ ಇಲ್ಲಿ ಆಡಳಿತ ನಡೆಸುತ್ತಿದ್ದಂತಹ ಸಂದರ್ಭದಲ್ಲಿ ಮಾನ್ಯ ವೀರಪ್ಪಮೊಯಿಲಿಯವರು ಮುಖ್ಯಮಂತ್ರಿಗಳಾಗಿದ್ದರು, ಶ್ರೀ ರಾಜಶೇಖರ ಮೂರ್ತಿಯವರು ಕಂದಾಯ ಮಂತ್ರಿಗಳು ಆಗಿದ್ದರು. ಈ ಸಂದರ್ಭದಲ್ಲಿ ಕೇಂದ್ರದ ಒಬ್ಬ ಮಂತ್ರಿಗಳ ಭೂ ಹಗರಣ ಪ್ರಸ್ತಾಪವಾಯಿತು. ಎಲ್ಲಾ ಪತ್ರಿಕೆಗಳಲ್ಲೂ ಈ ವಿಷಯ ಪ್ರಸ್ತಾಪವಾಯಿತು. ಅದಕ್ಕಾಗಿ ಒಂದು ಸಮಿತಿಯನ್ನು ರಚನೆ ಮಾಡಿದ್ದುದು ತಿಳಿದು ಬಂತು. ಲಿನ್ ಎನ್ನುವವರು ಸರ್ಕಾರಕ್ಕೆ ಕೊಟ್ಟಿರುವಂತಹ ವರದಿ ಏನಿದೆ ಅದನ್ನು ಪರಿಶೀಲನೆ ಮಾಡುವುದಕ್ಕೆ ಮಂತ್ರಿಗಳ ಸಬ್ ಕಮಿಟಿಯನ್ನು ಮಾಡಿದರೆಂಬ ವಿಚಾರವನ್ನು ನಾವು ಪತ್ರಿಕೆಗಳಲ್ಲಿ ತಿಳಿದುಕೊಂಡೆವು. ಮತ್ತೆ ಅದು ಏನಾಯಿತು ಎಂಬುದು ಗೊತ್ತಾಗಲಿಲ್ಲ. ಜನತೆಯು ತಮಗೆ ತಿಳಿದ ಹಾಗೆ ಹಿಂದೆ ಆಡಳಿತವನ್ನು ಮಾಡುತ್ತಿದ್ದಂಥ ಪಕ್ಷದ ಆಡಳಿತವನ್ನು ಬದಲಾಯಿಸಿ ಸುಮಾರು 168 ಶಾಸಕರನ್ನು ಅಲ್ಲಿ ಕೂರಿಸಿದ ಕಾರಣ ನೀವು ಒಳ್ಳೆಯ ಕೆಲಸವನ್ನು ಮಾಡಲಿಲ್ಲವೆಂದು ಪುನಃ ಅವರನ್ನು ಕೆಳಗಿಳಿಸಿ ಮತ್ತೊಂದು ಅವಕಾಶವನ್ನು ಕೊಟ್ಟಾಗ ಈ ಪ್ರಕರಣವನ್ನು ಮುಚ್ಚಿ ಹಾಕುವಂತಹ ವಿಚಾರವನ್ನು ಮಾಡಬಾರದು. ಈಗ ತಾನೆ ಸ್ವಲ್ಪ ಹೊತ್ತಿನಲ್ಲಿ ಇದರ ಬಗ್ಗೆ ಚರ್ಚೆಯಾಯಿತು. ತಾವು ಸಮಿತಿಗಳನ್ನು ಮಾಡುತ್ತೀರಿ, ಸಿಒಡಿ ಗೆ ತನಿಖೆಗೆ ಕಳುಹಿಸುತ್ತೀರಿ. ಅದು ನಂತರ ಏನಾಗುತ್ತದೆಂದು ಗೊತ್ತಾಗುವುದಿಲ್ಲ. ನಾನು ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳುವುದೇನೆಂದರೆ ಇದರಲ್ಲಿ ಮುಚ್ಚುಮರೆ ಏನೂ ಇಲ್ಲ. ಇದು ಬಹಿರಂಗವಾಗುವಂತಹ ವಿಚಾರ. ಕಾನೂನು ಇಲ್ಲರಿಗೂ ಒಂದೇ ರೀತಿಯಲ್ಲಿರುತ್ತದೆಂದು ನಾವು ತಿಳಿದುಕೊಂಡಿದ್ದೇವೆ. ಇಲ್ಲಿ ಬಡವರಿಗೆ ಒಂದು ಕಾನೂನು ದೊಡ್ಡವರಿಗೆ ಒಂದು ಕಾನೂನು ಇಲ್ಲ. ಕಾನೂನು ಎಲ್ಲರಿಗೂ ಒಂದೇ ಇರಬೇಕಾದರೆ ಅದು ಈ ರಾಜ್ಯದ ಮುಖ್ಯಮಂತ್ರಿಗಳಿರಬಹುದು ಅಥವಾ ನಮ್ಮ ರಾಷ್ಟ್ರದ ಗೌರವಾನ್ವಿತ ಮಂತ್ರಿಗಳಿರಬಹುದು ಅಥವಾ ಈ ದೇಶದ ಪ್ರಧಾನ ಮಂತ್ರಿಗಳಿರಬಹುದು. ಯಾರು ಏನೇ ತಪ್ಪು ಮಾಡಿದರೂ ಶಿಕ್ಷೆ ಒಂದೇ ಕಾನೂನಿನ ರೀತಿಯಲ್ಲಿ ಹೇಳಿರುವುದರಿಂದ ಮಾನ್ಯ ಲಿನ್ ಅವರು ಏನು ಸರ್ಕಾರಕ್ಕೆ ವರದಿಯನ್ನು ಕೊಟ್ಟಿದ್ದಾರೆ. ಅದು ಸದನದ ಮುಂದೆ ಜನತೆಯ ಮುಂದೆ ಇರಬೇಕು. ತಾವು ಸಮಯ ಕೊಟ್ಟರೆ ಎಲ್ಲೆಲ್ಲಿ ಏನು ಏನಾಗಿದೆ ಎಂಬುದನ್ನು ತಿಳಿಸಲು ನನಗೆ 15

ನಿಮಿಷಗಳ ಕಾಲಾವಾಕಾಶ ಬೇಕಾಗುತ್ತದೆ. ಅದು ಯಲಹಂಕದಲ್ಲಿದೆ, ವೈಟ್ ಫೀಲ್ಡ್‌ನಲ್ಲಿ ಇದೆ.

ಅಧ್ಯಕ್ಷರು : ಬೇಡ ಬೇಡ, ನೀವು ಇಷ್ಟು ಇಂಟರ್‌ಸ್ಟಿಂಗ್ ಇದೇ ಎಂದು ಮೊದಲೇ ಹೇಳಿದ್ದಿರೆ ನಾವು ಟೈಮ್ ಅಡ್ಜಸ್ಟ್ ಮಾಡಬಹುದಾಗಿತ್ತು. ಈಗ ತಾವು ಬೇಗ ಮುಗಿಸಿ.

ಶ್ರೀ ಬಿ.ಬಿ. ಶಿವಪ್ಪ : ಆಯಿತು ಒಂದು ನಿಮಿಷದಲ್ಲಿ ಮುಗಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದು ಏನಾಗಿದೆ ಎಂಬುದರ ಬಗ್ಗೆ ಈಗಾಗಲೇ ಅದಕ್ಕೆ ಸಬ್ ಕಮಿಟಿಯನ್ನು ಮಾಡಿದೆ. ಈಗ ಕ್ಯಾಬಿನೆಟ್ ಸಮಿತಿಯೇ ಮುಂದೆ ಇದೆ. ಅವರು ಸದನದ ಮುಂದೆ ಇಡುತ್ತಾರೆ.

ಶ್ರೀ ಬಿ. ಬಿ. ಶಿವಪ್ಪ : ಸಬ್ ಕಮಿಟಿ ಮಾಡಿದ್ದೀರಿ, ಈಗ ನೀವು ಈ ಕಡೆ ಬಂದಿದ್ದೀರಿ, ಆದುದರಿಂದ ಬೇರೆ ಕಮಿಟಿಯನ್ನು ಮಾಡಬೇಕು.

ಅಧ್ಯಕ್ಷರು : ಡಿಟೈಲ್ ಏನು ಬೇಡ.

ಶ್ರೀ ಬಿ. ಬಿ. ಶಿವಪ್ಪ : ತಾವು ಹೇಳಿದ ಮೇಲೆ ನಾನು ಹೇಳುವುದಿಲ್ಲ. ಹಾಗೆ ಬಿಡುತ್ತೇನೆ. ಸಹಸ್ರಾರು ಕೋಟಿ ರೂಪಾಯಿ ಬಾಳುವಂತಹ ಭೂಮಿ ಕಾನೂನಿನ ವಿರುದ್ಧವಾಗಿದೆ. ಕಾನೂನಿನ ವಿರುದ್ಧ ಯಾರೇ ಒಬ್ಬ ಸಾಮಾನ್ಯ ಜನರು ಈ ರೀತಿ ಮಾಡಿದ್ದರೆ ಸರ್ಕಾರ ಬಿಡುವುದಿಲ್ಲ ಸರ್ಕಾರ ಅವರ ಬೆನ್ನು ಹತ್ತುತ್ತದೆ. ಆದರೆ ವ್ಯಕ್ತಿ ಮಾಡಿದ್ದಾರೆಂದರೆ ಅದನ್ನು ಮುಚ್ಚಿಹಾಕತಕ್ಕಂಥದ್ದಲ್ಲ. ನಿಜಕ್ಕೂ ಆ ಮಂತ್ರಿಗಳ ಘನತೆ ಗೌರವವನ್ನು ಉಳಿಸಬೇಕಾದರೆ ಸರ್ಕಾರ ಮುಂದೆ ಬರಬೇಕಾಗುತ್ತದೆ. ಕಾರಣ ಅವರೇ, ಯಾವುದೇ ತನಿಖೆಗೂ ಸಿದ್ಧವೆಂದು ಹೇಳಿದ್ದಾರೆ, ಆದ್ದರಿಂದ ಇದನ್ನು ಮುಚ್ಚಿಟ್ಟಿರುವುದರಿಂದ ಈ ರಾಜ್ಯದ ಜನತೆಯಲ್ಲಿ ಸಂಶಯ ಉಂಟಾಗಿರುವುದನ್ನು ತಪ್ಪಿಸಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಅನೇಕ ಸಿಓಡಿ ವರದಿಗಳು ನನ್ನ ಹತ್ತಿರವಿದೆ. ಇವೆಲ್ಲವನ್ನು ನಾನು ನಿಮಗೆ ಕಳುಹಿಸಿಕೊಡುತ್ತೇನೆ. ಇವೆಲ್ಲಾ ಸಿಓಡಿ ತನಿಖೆಯಾದ ನಂತರ ಎಲ್ಲಿಗೆ ಹೋಗುತ್ತದೆಯೋ ನನಗೆ ಗೊತ್ತಿಲ್ಲ. ತನಿಖೆಯ ನಂತರ ವರದಿಯನ್ನು ಬರೆಯುತ್ತಾರೆ, ಮೇಲ್ಕಂಡ ವರದಿಯಲ್ಲಿ ಶಿಫಾರಸ್ಸು ಮಾಡಿರುವಂತೆ ಅಥವಾ ಸದರಿ ವರದಿಯ ಹಿನ್ನಲೆಯಲ್ಲಿ ಸಂಬಂಧಿಸಿದ್ದರ ಮೇಲೆ ಶೀಘ್ರವಾಗಿ ಸೂಕ್ತ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳುವಂತೆ, ಹಾಗೆ ತೆಗೆದುಕೊಂಡ ಕ್ರಮದ ಬಗ್ಗೆ ಸರ್ಕಾರಕ್ಕೆ ವರದಿ ಮಾಡುವಂತೆ ಇದರಲ್ಲಿ ಕೋರಲಾಗಿದೆ ಎಂದು ಬರೆಯುತ್ತಾರೆ. ಇದಕ್ಕೆ ಇಷ್ಟೆಲ್ಲಾ ಮಾಡುತ್ತಿರಲ್ಲಾ, ಖರ್ಚು ಎಷ್ಟಾಗುತ್ತದೆ. ಇಲ್ಲದಿದ್ದರೆ ತನಿಖೆ ಮಾಡುವುದನ್ನು ಬಿಟ್ಟು ಬಿಡಿ. ಸಿಓಡಿ, ಸಿಬಿಐಗೆ ತನಿಖೆಗೆ ಕೊಡಿ ಎಂದು ಹೇಳುತ್ತೇವೆ. ಇದನ್ನು ಮಾಡುವಂತಹ ಸಮಯದಲ್ಲಿ ನಿಷ್ಠಾವಂತ ಅಧಿಕಾರಿಗಳು ಬರುವ ತೊಂದರೆಗಳೆಲ್ಲವನ್ನು ಎದುರಿಸಿ ಅವರು ನನಗೆ ಮುಂದೆ ಏನಾಗುತ್ತದೆ ಎಂಬುದನ್ನು ಗಮನಿಸಿದ್ದರೂ ಕೂಡ ಅದನ್ನೆಲ್ಲ ಬದಿಗೊತ್ತಿ ಅವರು ತನಿಖೆ ಮಾಡಿ ಸರ್ಕಾರಕ್ಕೆ ವರದಿಯನ್ನು ಕೊಟ್ಟಾಗ ಅದನ್ನು ಮುಂದುವರೆಸುವುದಿಲ್ಲ, ಮತ್ತು ಅದರ ಬಗ್ಗೆ ವಿಚಾರಣೆಯನ್ನು ಮಾಡುವುದಿಲ್ಲವೆಂದು ಹೇಳಿದರೆ ಇದು ಅತ್ಯಂತ ಪ್ರಬಲವಾದಂತಹ ವಿಚಾರ.

ಬಿ.ಎಡ್ ಕಾಲೇಜಿನ ಬಗ್ಗೆ ಒಂದು ತನಿಖೆಯಾಗಿದೆ. ಮತ್ತು ಇನ್ನೊಂದು ಪರೀಕ್ಷೆಯ ಬಗ್ಗೆ ಒಂದು ತನಿಖೆಯಾಗಿದೆ. ಆ ಅಧಿಕಾರಿಯ ಬಗ್ಗೆ 2-3 ಸಾರಿ ತನಿಖೆಯಾಗಿ ಅವರು ತಪ್ಪಿತಸ್ಥರು ಎಂದು ಗೊತ್ತಾದರೂ ಕೂಡ ಅವರು ಅದೇ ಇಲಾಖೆಯಲ್ಲಿ ಮುಂದುವರೆಯುವಂಥಾದರೆ ತನಿಖೆಗೆ ಬೆಲೆ ಇದೆಯೇ ? ತನಿಖೆಗೆ ಅವಕಾಶವಿದೆಯೇ ? ನಿನ್ನೆ ಹಿರಿಯರಾದಂತಹ ಸನ್ಮಾನ್ಯ ನಂಜೇಗೌಡರು ಹೇಳಿದ ಹಾಗೆ ಕೆಲಸಕ್ಕೆ ಬಾರದಂತಹ 80-90 ಜನರು ಸರ್ಕಲ್ ಇನ್ಸ್‌ಪೆಕ್ಟರ್, 60ಜನ ಕಾನ್ಸ್‌ಟೇಬಲ್‌ಗಳಿರುವಂತಹ ಇಲಾಖೆಯಲ್ಲಿ ತನಿಖೆ ಮಾಡಿಸಿ ಈ ತರಹ ವ್ಯವಸ್ಥೆಯನ್ನು ಬದಲಾಯಿಸುವುದಕ್ಕೆ ಏನು ಮಾಡುತ್ತಿರೋ ನನಗೆ ಗೊತ್ತಿಲ್ಲ. ತಾವು ದೊಡ್ಡ ಮನಸ್ಸು ಮಾಡಿ ನನಗೆ ಮಾತನಾಡುವುದಕ್ಕೆ ಸಮಯ ಕೊಟ್ಟಿದ್ದಕ್ಕಾಗಿ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ನನಗೆ ದೊರೆತಿರುವಂತಹ ದಾಖಲೆಗಳು ಏನಿವೆ ಅದನ್ನು ನಾನು ತಮಗೆ ಕಳುಹಿಸಿಕೊಡುತ್ತೇನೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲೆ ಚರ್ಚೆ ಮುಕ್ತಾಯವಾಯಿತು. ಸನ್ಮಾನ್ಯ ಸಭಾನಾಯಕರು ? ಉತ್ತರ ನೀಡುತ್ತಾರೆ.

ಒಬ್ಬ ಮಾನ್ಯ ಸದಸ್ಯರು : ನಮಗೆಲ್ಲಾ ಮಾತನಾಡುವುದಕ್ಕೆ ಅವಕಾಶ ಸಿಗಲಿಲ್ಲ. ದಯಮಾಡಿ ತಾವು ಒಂದೊಂದು ರಾಜಕೀಯ ಪಕ್ಷಕ್ಕೂ ಒಬ್ಬರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕಾಗಿತ್ತು.

ಅಧ್ಯಕ್ಷರು : ನಾನು ಒಪ್ಪುತ್ತೇನೆ ಕೊಡಬೇಕಾಗಿತ್ತು, ಆದರೆ ಸಮಯದ ಅಭಾವವಿದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡುವುದಕ್ಕೆ ಮೊದಲು ತಮ್ಮಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ. ಅವರು ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ಪ್ರಸ್ತಾವಕ್ಕೆ ಉತ್ತರ ಕೊಡುವುದಕ್ಕೆ ಮುಂಚೆ ಎರಡು-ಮೂರು ವಿಚಾರಗಳನ್ನು ಪ್ರಸ್ತಾಪ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅವರಿಗೆ ಅನಾರೋಗ್ಯ ಇದೆಯೆಂದು ಕೇಳಿದೆ, ಅವರು ಆರೋಗ್ಯವನ್ನು ಹೊಂದಲಿ ಎಂದು ನಾನು ಶುಭವನ್ನು ಹಾರೈಸುತ್ತೇನೆ. ಮತ್ತು ಭಗವಂತನು ಒಳ್ಳೆಯದನ್ನು ಮಾಡಲಿ. ಮಾನ್ಯ ಮುಖ್ಯ ಮಂತ್ರಿಯವರು ಸಲಹಾ ಸಮಿತಿಯ ಮತ್ತು ಇಲ್ಲೂ ಸಹಿತ ಶಾಸಕರಿಗೆ ಅವರ ತಾಲ್ಲೂಕುಗಳಲ್ಲಿ ಏನೇನು ಮಾಡಬೇಕು.

ಅಧ್ಯಕ್ಷರು : ಅದು ಆಯಿತಲ್ಲಾ ......

ಶ್ರೀ ವಾಟಾಳ್ ನಾಗರಾಜ್ : ಅದು ಆಗುವುದಿಲ್ಲ ಬಿಡಿ, ಶಾಸಕರು ಅವರ ತಾಲ್ಲೂಕುಗಳಲ್ಲಿ ಏನು ಮಾಡಬೇಕೆನ್ನುವ ಬಗ್ಗೆ ಈ ಸದನದಲ್ಲೂ ಉತ್ತರ ಕೊಟ್ಟಿದ್ದಾರೆ, ಮತ್ತು ಅಲ್ಲೂ ಚರ್ಚೆ ನಡೆದಿದೆ. ಆದುದರಿಂದ ಅವರು ಶಾಸಕರುಗಳಿಗೆ ಏನೇನು ಮಾಡಿದ್ದೇವೆನ್ನುವುದನ್ನು ಸ್ಪಷ್ಟವಾಗಿ ಹೇಳಿದರೆ ಒಂದು ಸಮಸ್ಯೆಯು ಬಗೆಹರಿದಂತೆ ಆಗುವುದೆಂದು ನನ್ನ ಆಶಯ ಮತ್ತು ತಮ್ಮಲ್ಲಿ ಮನವಿ. ಈಗಾಗಲೇ

ಅವರು ಸದನದಲ್ಲಿ ಹೇಳಿದ್ದರು. 20 ಅಂಶಗಳ ಕಾರ್ಯಕ್ರಮಗಳ ಅಧ್ಯಕ್ಷರನ್ನಾಗಿ ಮಾಡಿ ಒಂದು ಕಾರ್ಯಲಯ ಮಾಡುವುದಾಗಿ ಹೇಳಿದರು. ಅದರ ಬಗ್ಗೆ ಒಂದು ಆದೇಶ ಹೊರಡಬೇಕಲ್ಲಾ, ಇನ್ನು ಆಶ್ರಯ ಕಮಿಟಿ, ಇನ್ನು 3-4 ಕಮಿಟಿಗಳ ಬಗ್ಗೆ ಹೇಳಬೇಕು. ಏಕೆಂದರೆ ಇನ್ನು 2-3 ದಿವಸಗಳಲ್ಲಿ ಈ ಸದನ ಮುಗಿಯುತ್ತದೆ. ಅಮೇಲೆ ಅವರು ಗದ್ದಲದಲ್ಲಿರುತ್ತಾರೆ, ನಾವು ಎಲ್ಲೋ ಇರುತ್ತೇವೆ. ಆದ್ದರಿಂದ ಈ ಸಮಸ್ಯೆ ಬಗೆಹರಿಯದೆ ಒಂದು ಪ್ರಶ್ನೆಯಾಗುತ್ತದೆ. ಈ ಸಮಸ್ಯೆ ಬಗೆಹರಿಯಬೇಕು. ಆದುದರಿಂದ ಮಾನ್ಯ ಮುಖ್ಯ ಮಂತ್ರಿಯವರಿಗೆ ತಮ್ಮ ಮೂಲಕ ಈ ಬಗ್ಗೆ ಹೇಳಿಕೆಯನ್ನು ನೀಡಿ ಸರ್ಕಾರದಿಂದ ಒಂದು ಆದೇಶವನ್ನು ಹೊರಡಿಸುವುದರ ಮೂಲಕ ತಮಗೆ ತಿಳಿಸಿದರೆ ನಮಗೆ ಬಹಳ ಸಂತೋಷ. ನಾವು ಅನೇಕ ಸಾರಿ ನಿಮ್ಮ ಕಾರ್ಯಾಲಯಕ್ಕೆ ಬಂದು ಮಾತನಾಡಿದ್ದೇವೆ. ಒಂದು ನಿರ್ಣಯಕ್ಕೆ ಬರುವುದಕ್ಕೆ ಆಗಲಿಲ್ಲ. ನೀವು ಒಂದು ನಿರ್ಣಯಕ್ಕೆ ಬರಬೇಕು. ಮಾನ್ಯ ಮುಖ್ಯಮಂತ್ರಿಯವರು ಮೊದಲು ಇದಕ್ಕೆ ಉತ್ತರ ಕೊಡಲಿ, ನಂತರ ರಾಜ್ಯಪಾಲರ ಭಾಷಣಕ್ಕೆ ಉತ್ತರ ನೀಡಲಿ.

ಅಧ್ಯಕ್ಷರು : ಅವರು ಎಲ್ಲವನ್ನು ಸೇರಿಸಿ ಉತ್ತರ ಕೊಡುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಅದಕ್ಕಿಂತ ಮುಂಚೆ ಇದು ಏಕೆಂದರೆ ಒಂದೇ ಒಂದು ವಿಶೇಷವಾಗಿ ಪದೇ ಪದೇ ಕಾನೂನು ಅಡ್ಡ ಬರುತ್ತದೆಂದು ಕಾನೂನನ್ನು ತೋರಿಸುತ್ತಿದ್ದಾರೆ, ಪಂಚಾಯತ್ ಮತ್ತು ಜಿಲ್ಲಾ ಪರಿಷತ್ತು ಆ್ಯಕ್ಟ್. ಈಗ ಒಂದು ಕಡೆ 20 ಅಂಶಗಳ ಕಾರ್ಯಕ್ರಮಗಳಿಗೆ ಶಾಸಕರೆ ಅಧ್ಯಕ್ಷರಾಗಿ ವಹಿಸಿಕೊಳ್ಳುವಂಥದ್ದು ಮತ್ತು ಎರಡನೆಯದಾಗಿ ಲ್ಯಾಂಡ್ ರೆವಿನ್ಯೂ ಆ್ಯಕ್ಟ್ ಕೆಳಗೆ ಇರುವಂತಹ ಪ್ರಾವಿಜನ್ ಪ್ರಕಾರ ಶಾಸಕರ ತಾಲ್ಲೂಕು ಲ್ಯಾಂಡ್ ಗ್ರಾಂಟ್ ರೆಗ್ಯುಲರೈಜೇಶನ್ ಕಮಿಟಿಗೆ ಅಧ್ಯಕ್ಷರಾಗತಕ್ಕದ್ದು, ಮತ್ತು ಮೂರನೆಯದು ಹೌಸ್ ಸೈಟ್, ಕಮಿಟಿಗೆ ಅವರೆ ಅಧ್ಯಕ್ಷರಾಗಿರತಕ್ಕದ್ದು. ನಾಲ್ಕನೆಯದು ಟಾಸ್ಕ್ ಫೋರ್ಸ್ ಅಂಥ ಅಂದರೆ ಸ್ಕೇರ್‌ಸಿಟಿ ವರ್ಕ್ಸ್, ನ್ಯಾಚುರಲ್ ಕಲಾಮಿಟಿ ಇದರಲ್ಲಿ ತೆಗೆದುಕೊಳ್ಳತಕ್ಕಂಥದ್ದು. ಇವೆಲ್ಲ ಕೂಡ ಶಾಸಕರು ಅಧ್ಯಕ್ಷರಾಗಿರಬೇಕು ಅಂತಕಂಥದ್ದು ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಈಗ ಕಾನೂನಿಯಲ್ಲಿ ಜಿಲ್ಲಾ ಪಂಚಾಯತ್ ಮತ್ತು ಜಿಲ್ಲಾಪರಿಷತ್ತಿಗೆ ಸಂಬಂಧಪಟ್ಟ ಹಾಗೆ ಯಾವುದು ಕೂಡ ತೊಡಕುಗಳು ಇಲ್ಲ. ಅವರು ಪದೇ ಪದೇ ಹೇಳುವುದೇನೆಂದರೆ, ಈ ಲ್ಯಾಂಡ್ ರೆವಿನ್ಯೂ ಆ್ಯಕ್ಟ್‌ಗೆ ಮತ್ತು ಪಂಚಾಯಿತಿ ಆಕ್ಟ್‌ಗೆ ಸಂಬಂಧ ಇಲ್ಲ. ಈ ಹೌಸ್ ಸೈಟ್ಸ್ ಆಕ್ಟು ಕೂಡ ಸೇಫರೇಟಾಗಿ ಸರ್ಕಾರಿ ಆದೇಶ ಮಾಡಿ, ಅದೂ ಕೂಡ ಅಸಿಸ್ಟೆಂಟ್ ಕಮೀಷನರ್ ನೇರವಾಗಿ ಜಮೀನನ್ನು ಪರ್‌ಚೇಸ್ ಮಾಡಿ ತಹಸೀಲ್ದಾರ್ ಮುಖಾಂತರ ಕೊಡತಕ್ಕಂಥದ್ದು. ಅದೂ ಕೂಡ ಜಿಲ್ಲಾಪರಿಷತ್ತು ಮತ್ತು ತಾಲ್ಲೂಕು ಪಂಚಾಯಿತಿಯ ಕಾನೂನಿನ ವ್ಯಾಪ್ತಿಯಲ್ಲಿ ಬರುವುದಿಲ್ಲ. ಈಗ ಇವೆಲ್ಲಾ ಸ್ಪಷ್ಟವಾದಂಥ ಕಾನೂನುಗಳು ಇದ್ದರೂ ಕೂಡ ಈ ಬಗ್ಗೆ ನಾವು ಯೋಚನೆ ಮಾಡುತ್ತೇವೆ, ನಾನು ಕಾನೂನು ಪಂಡಿತರಿಗೆ ಕೇಳುತ್ತೇನೆ ಎಂದು ಹೇಳಿದಿರಿ. ಆದರೆ ಅದರ ಬಗ್ಗೆ ಇದುವರೆಗೂ ಏನು ಹೇಳಲಿಲ್ಲ. ಈಗ ಸೋಮವಾರ ಒಂದು ದಿವಸ ಇರಿಗೇಷನ್ ಮೇಲೆ

ಮಾತನಾಡುವುದು ಇದೆ, ಇದರ ಬಗ್ಗೆ ಮೊದಲು ತಾವು ಏನು ನಿರ್ಣಯವನ್ನು ತೆಗೆದುಕೊಳ್ಳುತ್ತೀರಿ ಎಂಬುದನ್ನು ಹೇಳಬೇಕು. ಏಕೆಂದರೆ ಇದರ ಬಗ್ಗೆ ಎರಡು ಮೂರು ಸಲ ಮೀಟಿಂಗ್‌ಗಳಾದವು, ಎರಡು ಮೂರು ಸಲ ತಾವೂ ಕರೆಯಿಸಿ ಮಾತನಾಡಿದಿರಿ, ನಾವೂ ಕೂಡ ನಮ್ಮ ವಿಚಾರಗಳನ್ನು ಹೇಳಿದ್ದೇವೆ ಅದಕ್ಕೆ ಆ ಬಗ್ಗೆ ಸ್ಪಷ್ಟಪಡಿಸಿದರೆ ನಾವೆಲ್ಲಿದ್ದೇವೆ ಎಂಬುದು ಗೊತ್ತಾಗುತ್ತದೆ. ಇಲ್ಲದಿದ್ದರೆ ಇದು ಏನಾಗಿದೆಯೆಂದರೆ, ಈ ಶಾಸಕರೇನಾದರೂ ಪದೇ ಪದೇ ತಮಗೋಸ್ಕರ ನನಗೆ ಅದು ಕೊಡು, ಇದು ಕೊಡು ಎಂದು ಪ್ರಿವಿಲೆಜಸ್ ಕೇಳುತ್ತಿದ್ದಾರೇನೂ ಸವಲತ್ತುಗಳನ್ನು ಕೇಳುತ್ತಿದ್ದಾರೇನೋ ಕೆಲಸವನ್ನು ಯಾವ ರೀತಿಯಾಗಿ ನಾವು ಮಾಡಬೇಕು, ಜನರಿಗೆ ಯಾವ ರೀತಿಯಾಗಿ ಸಹಾಯ ಮಾಡಬೇಕು, ಕೆಲಸದಲ್ಲಿ ನಾವು ಕೇಳುತ್ತಿದ್ದೇವೆಯೆ, ಹೊರತು ಬೇರೆ ಯಾವ ದೃಷ್ಟಿಯಿಂದಲೂ ಅಲ್ಲ. ಇದರಲ್ಲೇನು ಭತ್ಯೆ ಹೆಚ್ಚಿಗೆ ಮಾಡಿ ಅಥವಾ ಮತ್ತೆ ಏನಾದರೂ ಸವಲತ್ತು ಕೊಡಿ ಎನ್ನತಕ್ಕಂಥದ್ದು ಇಲ್ಲ. ಅಭಿವೃದ್ಧಿ ಕೆಲಸಗಳಲ್ಲಿ ನಮ್ಮ ಪಾತ್ರ ಏನು ? ಹಿಂದೆ ಈ ರೀತಿಯಾಗಿ ಇತ್ತು ನೀವು ಮುಂದುವರಿಸಿಕೊಂಡು ಹೋಗಿ ಬೆನಿಫಿಷಿರಿಯಸ್ ಅನ್ನು ಐಡೆಂಟಿಫೈ ಮಾಡುವುದು, ಗ್ರಾಂಟ್ ಮಾಡುವುದು, ಇದನ್ನೆಲ್ಲಾ ಮೊದಲು ಹೇಳಿ, ತದನಂತರ ರಾಜ್ಯಪಾಲರ ಭಾಷಣದ ಮೇಲೆ ಅವರು ಉತ್ತರವನ್ನು ಕೊಡಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೇ, ಶಾಸಕರ ಹಕ್ಕುಬಾಧ್ಯತೆಗಳೇನು, ಚುನಾಯಿತ ಪ್ರತಿನಿಧಿಗಳಾಗಿ ಜನಸೇವೆಯನ್ನು ಮಾಡುವುದಕ್ಕೆ ನಮಗೆ ಏನೆಲ್ಲಾ ಸವಲತ್ತುಗಳು ಇವೆ, ಏನೆಲ್ಲಾ ಪದ್ಧತಿಗಳು ಮೊದಲಿನಿಂದಲೂ ಬೆಳೆದುಕೊಂಡು ಬಂದಿತ್ತು, ಇದರ ಬಗ್ಗೆ ವ್ಯಾಪಕವಾದಂಥ ಚರ್ಚೆ ಒಂದು ದಿವಸ ಇಲ್ಲಿ ಆಯಿತು. ಇಲ್ಲಿ ಬಹಿರಂಗವಾಗಿ ಅದನ್ನು ಚರ್ಚೆ ಮಾಡುವ ಅಗತ್ಯ ಇಲ್ಲ ಎಂದು ತಮ್ಮ ಕೊಠಡಿಯಲ್ಲಿ ಕುಳಿತುಕೊಂಡು ಎಲ್ಲಾ ಪಕ್ಷಗಳ ಮುಖಂಡರು, ಆಡಳಿತ ಪಕ್ಷದ ಮುಖಂಡರು, ಸಭಾನಾಯಕರ ಸಮಕ್ಷಮದಲ್ಲಿ ಏನೆಲ್ಲಾ ಮಾಡುವುದಕ್ಕೆ ಸಾಧ್ಯ ಇದೆ ಎಂದು ಚರ್ಚೆಯನ್ನು ಮಾಡಿ ಇವತ್ತು ಸನ್ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಬಂದು ಘೋಷಣೆಯನ್ನು ಮಾಡಿದರು. ಅದು ಅಂದರೆ ತಾಲ್ಲೂಕು ಕಛೇರಿಗಳಲ್ಲಿ ಶಾಸಕರುಗಳಿಗೆ ಒಂದೊಂದು ಆಫೀಸ್ ಇರುತ್ತೆ, ಅಲ್ಲಿ ಕುಳಿತು ಆ ತಾಲ್ಲೂಕಿನ ಜನರ ಸಂಕಷ್ಟಗಳನ್ನು ಬಗೆಹರಿಸುವುದಕ್ಕೆ ಅನುಕೂಲವಾಗುವ ರೀತಿ ಒಂದು ಕಾರ್ಯಾಲಯವನ್ನು ತೆಗೆಯುವಂಥದ್ದು, ಮತ್ತು ಅದಕ್ಕೆ ಅವಕಾಶವನ್ನು ಮಾಡಿಕೊಡುವಂಥಾದ್ದು, ಎರಡನೆಯದು ಈ ಇಪ್ಪತ್ತು ಅಂಶದ ಕಾರ್ಯಕ್ರಮದ ಅಧ್ಯಕ್ಷರಾಗಿ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಡುವಂಥದ್ದು, ಬೇರೆ ಬೇರೆ ಸಮಿತಿಗಳಲ್ಲಿ ಯಾವುದು ಈ ಜಿಲ್ಲಾ ಪಂಚಾಯಿತಿಯ ಹಕ್ಕಿಗೆ ಅಡ್ಡಿ ಬರುವುದಿಲ್ಲ, ಅವರಿಗೆ ಇರುವಂಥ ಹಕ್ಕುಗಳನ್ನು ಕಿತ್ತು ಕೊಳ್ಳದೆ ನಾವು ಮಾಡುವುದಕ್ಕೆ ಸಾಧ್ಯವಿರುವಂಥದ್ದು ಸನ್ಮಾನ್ಯ ಖರ್ಗೆಯವರು ಹೇಳಿದಂತೆ ಲ್ಯಾಂಡ್ ಗ್ರಾಂಟ್ ಕಮಿಟಿ, ಅದಕ್ಕೂ ಜಿಲ್ಲಾ ಪಂಚಾಯಿತಿಗೂ ಏನು ಸಂಬಂಧ ಇಲ್ಲ. ಈ ತರಹದ ಕಮಿಟಿಗಳಲ್ಲಿ ಶಾಸಕರಿಗೆ ಏನು ಜವಾಬ್ದಾರಿ ಕೊಡಬಹುದು ಅಧ್ಯಕ್ಷರಾಗಿ ಕೆಲಸ ಮಾಡಿದರೆ ಅದನ್ನು ಮುಂದುವರಿಸೋಣ ಎನ್ನುವ ಮಾತಾಯಿತು. 5ನೇ ತಾರೀಖು ಅಥವಾ 6ನೇ ತಾರೀಖು ಮತ್ತೊಮ್ಮೆ ನಿಮ್ಮ

ಕೊಠಡಿಯಲ್ಲಿ ಕುಳಿತುಕ್ಕೊಂಡು ಅದನ್ನೆಲ್ಲವನ್ನು ಚರ್ಚೆಮಾಡಿ ಉಳಿದಂಥದ್ದನ್ನು 6 ಮತ್ತು 7 ರಂದು ಅನೌನ್ಸ್ ಮಾಡುತ್ತೇನೆಂದು ಸನ್ಮಾನ್ಯ ಸಭಾನಾಯಕರು ಒಪ್ಪಿಕೊಂಡಿದ್ದರು. ನಾವು ನಮ್ಮ ಕ್ಷೇತ್ರಗಳಿಗೆ ಹೋಗುವುದರೊಳಗಾಗಿ ರಾಜ್ಯದಲ್ಲಿ ಪ್ರತಿಯೊಂದು ತಾಲ್ಲೂಕು ಕಛೇರಿಯಲ್ಲಿ ಒಬ್ಬ ಶಾಸಕ ಅಧ್ಯಕ್ಷನಾಗಿ ಕೆಲಸ ಮಾಡುವುದಕ್ಕೆ ಒಂದು ಕಛೇರಿಯನ್ನು ತೆಗೆಯುತ್ತೇವೆ ಎನ್ನುವಂಥದ್ದು ಘೋಷಣೆಯನ್ನು ಏನು ಮಾಡಿದರು. ಅದಕ್ಕೆ ಸನ್ಮಾನ್ಯ ಅಧ್ಯಕ್ಷರೇ, ಇತ್ತೀಚೆಗೆ ಬಂದಿರುವಂಥದ್ದು ಏನು ಎಂದರೆ, ಕೆಲವು ಅಧಿಕಾರಿಗಳು ಅದನ್ನು ಅಡ್ಡಿ ಮಾಡಿದರು. ತಾಲ್ಲೂಕು ಕಛೇರಿಗಳಲ್ಲಿ ಕುಳಿತುಕೊಳ್ಳುವುದರಿಂದ ತಾಲ್ಲೂಕು ಕಚೇರಿಯ ಕೆಲಸ ಕಾರ್ಯಗಳಿಗೆ ಅಡ್ಡಿಯಾಗಬಹುದು ಎಂದು. ಸನ್ಮಾನ್ಯ ಅಧ್ಯಕ್ಷರೇ, ಅಕಸ್ಮಾತ್ ಯಾರಾದರೂ ಅಧಿಕಾರಿಗಳು ಈ ರೀತಿ ಅಭಿಪ್ರಾಯವನ್ನು ವ್ಯಕ್ತಪಡಿಸಿದರೆ, ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ವಿನಂತಿ ಮಾಡುವಂಥದ್ದು ಏನೆಂದರೆ, ಲೋಕಸಭಾ ಸದಸ್ಯರು ಜಿಲ್ಲಾ ಪಂಚಾಯತ್ ಕಛೇರಿಯಲ್ಲಿ ಕೆಲಸ ಮಾಡುವುದಕ್ಕೆ ಒಂದು ಕೊಠಡಿ ಕೊಟ್ಟಿದ್ದಾರೆ, ಅವರಿಗೆ ಬೇಕಾದ ಸವಲತ್ತನ್ನು ಕೊಟ್ಟಿದ್ದಾರೆ, ತಾಲ್ಲೂಕು ಮಟ್ಟದಲ್ಲಿ ನಾವು ಕುಳಿತುಕೊಳ್ಳುವುದರಿಂದ ನಾವು ಪ್ರತಿ ನಿತ್ಯ - ತಹಸೀಲ್ದಾರರನ್ನು ಕರೆದು ಅವರ ಜೊತೆ ಮಾತುಕತೆ ಆಡುವುದಕ್ಕೆ ಕುಳಿತು ಕೊಳ್ಳುತ್ತೇವೆ ಎಂದು ಹೇಳಬಹುದು. ಹಾಗಲ್ಲ, ನಾವು ಕುಳಿತು ಕೊಳ್ಳುವಂಥಾದ್ದು ಜನರ ಸಮಸ್ಯೆಗಳನ್ನು ಬಂದು ಕೇಳುವುದಕ್ಕೋಸಕ್ಕರ. ಅವರೇನು ಹೇಳಬಹುದು ಬಿ.ಡಿ.ಓ ಕಛೇರಿ ಎಂದು ಹೇಳಬಹುದು, ಬಿ.ಡಿ.ಓ. ಕಛೇರಿ ಸಮೀಪ ಇಲ್ಲ. ಏಕೆ ಅಂಥ ಹೇಳಿದರೆ ಇಲ್ಲಿ ಆಗಲೇ ಒಬ್ಬ ತಾಲ್ಲೂಕು ಪಂಚಾಯಿತಿಯ ಅಧಿಕೃತ ಅಧ್ಯಕ್ಷ ಅಂಥ ಮಾಡಿ ಅವರ ಕಛೇರಿ ಇರುತ್ತದೆ, ನಾವಲ್ಲಿ ಕುಳಿತು ಕೊಳ್ಳುವುದು ಒಂದು ರೀತಿಯಲ್ಲಿ ಸರಿಹೋಗುವುದಿಲ್ಲ. ಅದಕ್ಕೆ ನಾನು ಏನು ಹೇಳುತ್ತೇನೆ ಎಂದರೆ, ಇವತ್ತೇನು ಮುಖ್ಯಮಂತ್ರಿಗಳು ಇಲ್ಲಿ ಘೋಷಣೆಯನ್ನು ಮಾಡಿದರು. ಅದಕ್ಕೆ ಸರ್ಕಾರಿ ಆಜ್ಞೆ ಹೊರಡಿಸಬೇಕು ? ಅದರ ಬಗ್ಗೆ ಏನು ಸಮಸ್ಯೆ ಇದೇ ಅದರ ಬಗ್ಗೆ ಉತ್ತರವನ್ನು ಕೊಟ್ಟ ಮೇಲೆ ಉಳಿದಂಥ ರಾಜ್ಯಪಾಲರ ಭಾಷಣದ ಮೇಲೆ ಅವರು ಮುಂದುವರಿಸಲಿ, ದಯಮಾಡಿ ಅವರು ಏನು ಹೇಳಿದ್ದರೋ ಅದಕ್ಕೆ ಸ್ಟಿಕ್ ಅನ್ ಅಗಿ ಅದಕ್ಕೆ ತಕ್ಕಂತೆ ಒಂದು ಸರ್ಕಾರಿ ಅಜ್ಞೆಯನ್ನು ಹೊರಡಿಸಬೇಕೆಂದು ವಿನಂತಿ ಮಾಡುತ್ತೇನೆ ಮತ್ತು ಉಳಿದಂತದ್ದರ ಬಗ್ಗೆ ನಿಮ್ಮ ಕೊಠಡಿಯಲ್ಲಿ ಕುಳಿತುಕೊಂಡು ಜವಾಬ್ದಾರಿ ಕೊಡಬೇಕು ಅಂಥ ಯೋಚನೆ ಮಾಡಿದ್ದೆವು ಅದರ ಬಗ್ಗೆ ಏನಾದರೂ ಸಮಾಲೋಚನೆ ಮಾಡಿದ್ದೀರಾ ಅಥವಾ ಅದನ್ನೇನಾದರೂ ಘೋಷಣೆ ಮಾಡುತ್ತೀರಾ ಅಥವಾ ಇವತ್ತೆ ಕುಳಿತು ಅದರ ಬಗ್ಗೆ ಮಾತನಾಡಿ ಆಮೇಲೆ ಅನೌನ್ಸ್ ಮಾಡುತ್ತೀರೋ ಅದನ್ನು ಸಹ ತಿಳಿಸಬೇಕು. ಏಕೆಂದರೆ, ಮಾನ್ಯ ಖರ್ಗೆಯವರು ಹೇಳಿದಂತೆ ಸ್ವಂತಕ್ಕೆ ಏನು ಬೇಕು ಅಂಥ ಅಲ್ಲ ಅಧ್ಯಕ್ಷರೇ, ಶಾಸಕರಾಗಿ ನಮ್ಮ ಕರ್ತವ್ಯವನ್ನು ನಿರ್ವಹಿಸಬೇಕು, ಜನರಿಗೆ ಗೌರವದಿಂದ ಕೆಲಸ ಮಾಡುವಂಥ ಅವಕಾಶ ನಮಗೆ ಸಿಗಬೇಕು, ಅಧಿಕಾರಿಗಳಿಗೆ ಚುನಾಯಿತ ಶಾಸಕರುಗಳಿಗೆ, ಕೆಲವು ಅವನ ಕರ್ತವ್ಯವನ್ನು ನಿರ್ವಹಿಸಲಿಕ್ಕೆ ನಾವು ಸಹಕಾರವನ್ನು ಕೊಡಬೇಕು ಎನ್ನುವ ಭಾವನೆಯನ್ನು ಮೂಡಿಸಬೇಕು. ಇಲ್ಲದಿದ್ದರೆ ಈ ಸದನದಲ್ಲಿ

ಚರ್ಚೆಯಾಗುವಂಥ ರೀತಿನೀತಿಗಳನ್ನು ನೋಡಿದಾಗ ಒಂದು ರೀತಿ ಅಧಿಕಾರಿಗಳಿಗೂ, ಚುನಾಯಿತ ಪ್ರತಿನಿಧಿಗಳಿಗೂ ಏನು ಸಂಬಂಧ ಇಲ್ಲ ಎಂದು ಒಂದು ಅಡ್ಡಗೋಡೆಯನ್ನು ಹಾಕುವಂಥ ಸಂದರ್ಭ ಬಂದಿದೆ, ಅದನ್ನು ತಾವು ಗಮನಿಸಿದ್ದೀರಾ, ಆದರೆ ತಾವು ನಮ್ಮ ರಕ್ಷಣೆಗೆ ಬರಬೇಕಾಗುತ್ತದೆ ನಮ್ಮ ಕರ್ತವ್ಯವನ್ನು ನಿರ್ವಹಿಸುವುದಕ್ಕೋಸ್ಕರ ಹೇಳುತ್ತಿದ್ದೇವೆಯೇ ಹೊರತು ನಮ್ಮ ಸ್ವಂತಕ್ಕಾಗಿ ಏನೇ ಸವಲತ್ತುಗಳನ್ನು ಕೇಳುತ್ತಿಲ್ಲ ಏನು ಇದುವರೆಗೂ ನಡೆದುಕೊಂಡು ಬಂದ ಒಂದು ಪದ್ಧತಿಯಂತೆ ಹಿಂದಿನ ಸರ್ಕಾರದಲ್ಲಿ ಶಾಸಕರುಗಳಿಗೆ ಏನು ಜವಾಬ್ದಾರಿ ಇತ್ತು ಅದನ್ನು ಮುಂದುವರಿಸಿಕೊಂಡು ಹೋಗುವಂಥ ಕೆಲಸವನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಮಾಡಬೇಕು ಅದರ ಬಗ್ಗೆ ಅವರು ಸ್ಪಷ್ಟೀಕರಣ ನೀಡಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಯವರು) : ಸನ್ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಸನ್ಮಾನ್ಯ ರಾಜ್ಯಪಾಲರು ದಿನಾಂಕ 20ನೇ ಮಾರ್ಚ್ 1995ರಂದು ನೀಡಿದಂಥ ಭಾಷಣದ ಮೇಲೆ ಸುಮಾರು ಐದು ದಿನಗಳ ಕಾಲ ಚರ್ಚೆಯಾಗಿದೆ, 27 ಜನ ಗೌರವಾನ್ವಿತ ಸದಸ್ಯರುಗಳು ಇದರಲ್ಲಿ ಭಾಗವಹಿಸಿದ್ದಾರೆ ....

ಶ್ರೀ ವಾಟಾಳ್ ನಾಗರಾಜ್ : ತಾವು ನಮ್ಮ ಮನವಿಗೆ ಸ್ಪಂಧಿಸಲಿಲ್ಲ ಎಂದು ಕಾಣುತ್ತೆ.

ಶ್ರೀ ಹೆಚ್.ಡಿ. ದೇವೇಗೌಡ : ನಾನು ಈ ಸಂದರ್ಭದಲ್ಲಿ ಅವರೆಲ್ಲರಿಗೂ ನನ್ನ ವತಿಯಿಂದ ಹಾಗೂ ಸರ್ಕಾರದ ವತಿಯಿಂದ ಅವರಿಗೆ ಧನ್ಯವಾದಗಳನ್ನು ಅರ್ಪಿಸುವುದಕ್ಕೆ ಇಚ್ಛೆಪಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ಈ ಸರ್ಕಾರ ಅಧಿಕಾರಕ್ಕೆ ಬಂದು ಕೇವಲ ನಾಲ್ಕು ತಿಂಗಳು ಕೂಡ ಅಗಿಲ್ಲ, ಇನ್ನೂ ಮೂರು ದಿವಸಗಳು ಬೇಕು ನಾಲ್ಕು ತಿಂಗಳು ಆಗುವುದಕ್ಕೆ. ಈ ನಾಲ್ಕು ತಿಂಗಳಿನಲ್ಲಿ ನಾವೇನು ....

ಶ್ರೀ ವಾಟಾಳ್ ನಾಗರಾಜ್ : ತಮ್ಮ ಮೂಲಕ ಅವರಿಗೆ ಕೈಮುಗಿದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ....

ಶ್ರೀ ಹೆಚ್.ಡಿ. ದೇವೇಗೌಡ : ದಯಮಾಡಿ ಕುಳಿತುಕೊಳ್ಳುತ್ತೀರಾ, ಹಾಗೆ ಷರತ್ತಾಗಿ ಭಾಷಣ ಮಾಡಲಿಕ್ಕೆ ಆಗುವುದಿಲ್ಲ.

(ಗೊಂದಲ)

(ಈ ಹಂತದಲ್ಲಿ ಬಿ.ಜೆ.ಪಿ.ಯ ವಿರೋಧಪಕ್ಷದ ನಾಯಕರುಗಳು ಮತ್ತು ಸದಸ್ಯರು ಹಾಗೂ ಇನ್ನಿತರೆ ಕೆಲವು ಪಕ್ಷೇತರ ಸದಸ್ಯರುಗಳು ಶಾಸಕರ ಹಕ್ಕಿನ ಬಗ್ಗೆ ಸ್ಪಷ್ಟೀಕರಣ ನೀಡಬೇಕೆಂದು ಒತ್ತಾಯಿಸಿ ಸದನದ ಬಾವಿಗೆ ಬಂದು ಧರಣಿ ಕುಳಿತರು)

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗಾಗಲೇ ನಾವು ತಮ್ಮ ಮುಂದೆ ಮನವಿ ಮಾಡಿಕೊಂಡಿದ್ದೇವೆ.

ಅಧ್ಯಕ್ಷರು : ತಾವು ಹೇಳಿದ್ದೀರಿ. ನಾನು ತಮ್ಮ ಮಾತನ್ನು ಕೇಳಿದ್ದೇನೆ. ಮಾನ್ಯ ವಾಟಾಳ್ ನಾಗರಾಜ್‌ರವರು. ಶ್ರೀಮಾನ್ ಯಡಿಯೂರಪ್ಪನವರೂ ಮಾತನಾಡಿದ್ದಾರೆ. ಅವೆಲ್ಲವನ್ನೂ ಕೇಳಿದ್ದೇನೆ. ಅವರು ಉತ್ತರವನ್ನು ಪ್ರಾರಂಭ

ಮಾಡಿದ್ದಾದರೆ, ಉತ್ತರ ಕೊಡತಕ್ಕ ಅವಧಿಯಲ್ಲಿ ನೀವು ಪ್ರಸ್ತಾಪ ಮಾಡಿರತಕ್ಕ ವಿಚಾರಗಳಿಗೆ ಅವರು ಉತ್ತರ ಕೊಡುತ್ತಾರೋ ಇಲ್ಲವೋ ಎಂಬುದನ್ನು ತಿಳಿದುಕೊಳ್ಳದೇ ತಾವು ಧರಣಿ ಹೂಡುತ್ತಿದ್ದೀರಿ. ಸನ್ಮಾನ್ಯ ಖರ್ಗೆಯವರು ಮಂತ್ರಿಗಳಾಗಿ ಕೆಲಸ ಮಾಡಿದ್ದೀರಿ. ನೀವು ಷರತ್ತು ಹಾಕಿ ಈಗಲೇ ಹೇಳಬೇಕೆಂದರೆ. ಅದು ಸಾಧ್ಯವೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವು ಕೇಳುತ್ತಿರುವುದು ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಉತ್ತರ ಕೊಟ್ಟು ಆಮೇಲೆ ಮುಂದಕ್ಕೆ ಹೋಗಲಿ ಎಂದು. ನಾವು ರೈಸ್ ಮಾಡಿದಂತಹ ವಿಷಯವು ತಮ್ಮ ಛೇಂಬರಿನಲ್ಲಿ ಡಿಸ್ಕಸ್ ಆಗಿದೆ ಅದಕ್ಕೆ 2-3 ದಿವಸಗಳಲ್ಲಿ ಉತ್ತರ ಕೊಡುತ್ತೇನೆಂದು ಅವರು ಹೇಳಿದ್ದರು. ಮೊದಲು ಅದಕ್ಕೆ ಉತ್ತರವನ್ನು ಕೊಟ್ಟು ಆಮೇಲೆ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಉತ್ತರ ನೀಡಬಹುದು ಎಂದು ನಾವು ಹೇಳಿದ್ದೆವು. ಆದರೆ ಅವರು ಉತ್ತರ ಕೊಡುತ್ತಿದ್ದಾರೆಯೇ ಹೊರತು ನಾವು ಕೇಳಿದ್ದನ್ನು ಅವರು ಹೇಳುತ್ತಿಲ್ಲ. ಆದ್ದರಿಂದ ಅನಿವಾರ್ಯವಾಗಿ ನಾವೂ ಕೂಡ ಧರಣಿಯನ್ನು ಮಾಡಬೇಕಾಗುತ್ತದೆ.

(ಕಾಂಗ್ರೆಸ್ ಸದಸ್ಯರು ಸದನದ ಬಾವಿಯಲ್ಲಿ ಬಂದು ನಿಂತುಕೊಂಡಿದ್ದರು)

ಅಧ್ಯಕ್ಷರು : ಮಾನ್ಯ ಖರ್ಗೆಯವರೆ, ನಾನು ತಮಗೆ ಒಂದು ಮಾತನ್ನು ಕೇಳುತ್ತೇನೆ. ಅವರು ಉತ್ತರ ಕೊಡತಕ್ಕ ಸಂದರ್ಭದಲ್ಲಿ ಈ ಪ್ರಶ್ನೆಯನ್ನು ಒಳಗೊಂಡು ಉತ್ತರ ಕೊಟ್ಟರೆ ಸರಿಯಾಗುವುದಿಲ್ಲವೇ ? ಅದಕ್ಕೆ ಬದಲಾಗಿ ಹೀಗೆಯೇ ಉತ್ತರ ಕೊಡಬೇಕೆಂದು ಷರತ್ತು ಹಾಕುವುದು ಸರಿಯೇ? ನೀವೂ ಮಂತ್ರಿಗಳಾಗಿ ಕೆಲಸ ಮಾಡಿದ್ದೀರಿ. ಅದು ಸಾಧ್ಯವೇ ಎಂಬುದನ್ನು ತಾವೇ ಹೇಳಿ. ತಾವು ಈಗ ಕೈಗೊಂಡ ಕ್ರಮವನ್ನು ಯಾವಾಗ ಹಾಕಿಕೊಳ್ಳಬಹುದು ಎಂದರೆ ಅವರು ಸದನದಲ್ಲಿ ಉತ್ತರ ಕೊಡತಕ್ಕ ಸಂದರ್ಭದಲ್ಲಿ ನೀವು ಪ್ರಸ್ತಾಪ ಮಾಡಿದಂತಹ ವಿಷಯಗಳಿಗೆ ಲಕ್ಷ್ಯ ಕೊಡದೇ, ಅದಕ್ಕೆ ಉತ್ತರ ಕೊಡದೇ ಅದಕ್ಕೆ ಯಾವುದೇ ರೀತಿಯಲ್ಲೂ ಸ್ಪಂದಿಸದೇ ಅವರು ಉತ್ತರವನ್ನು ಮುಕ್ತಾಯ ಮಾಡಿದರೆ ಆಗ ನೀವು ಈ ನಿರ್ಣಯಕ್ಕೆ ಬರುವುದಕ್ಕೆ ನಿಮಗೆ ಹಕ್ಕು ಇರುತ್ತದೆ. ನೀವು ಅವರಿಗೆ ಅವಕಾಶ ಕೊಡದ್ದಿರೆ ಹೇಗೆ ? ನೀವು ಪ್ರಸ್ತಾಪ ಮಾಡಿದ್ದೀರಿ ನಿಜ. ಆದರೆ ಷರತ್ತು ಹಾಕಿ ಈ ಗಳಿಗೆಯಲ್ಲೇ ಉತ್ತರ ಹೇಳಿ ನಂತರ ಮುಂದಕ್ಕೆ ಹೋಗಬೇಕೆಂದು ಮಾನ್ಯಮುಖ್ಯಮಂತ್ರಿಗಳಿಗೆ ಹೇಳುವುದು ಸರಿಯೇ ? ಅವರು ಹೀಗೆಯೇ ಮಾಡಬೇಕೆಂದು ಹೇಳುವುದು ಸರಿಯೇ ? ತಾವೂ ಮಂತ್ರಿಗಳಾಗಿ ಕೆಲಸ ಮಾಡಿದ್ದೀರಿ. ದಯಮಾಡಿ ಸಹಕರಿಸಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವು ಪ್ರಸ್ತಾಪ ಮಾಡಿರುವುದಕ್ಕೆ ಮೊದಲು ಉತ್ತರ ಕೊಡಲಿ. ಆಮೇಲೆ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಗೆ ಉತ್ತರ ನೀಡಲಿ. ಅದಕ್ಕೂ ಇದಕ್ಕೂ ಲಿಂಕ್ ಮಾಡಬೇಡಿ. ಯಾವ ಯಾವ ಕಾಲದಲ್ಲಿ ಏನೇನು ಮಾಡಿದರು ಎಂಬುದು ನನಗೆ ಗೊತ್ತಿದೆ. ನಾವೂ ಮಾಡುತ್ತೇವೆ.

(ಆಡಳಿತ ಪಕ್ಷದ ಸದಸ್ಯರು ಒಟ್ಟಿಗೇ ನಿಂತು ಮಾತನಾಡುತ್ತಿದ್ದರು)

ಅಧ್ಯಕ್ಷರು : ತಾವು ದಯಮಾಡಿ ಕುಳಿತುಕೊಳ್ಳಿ. ನಿಮ್ಮ ನಾಯಕರು ಸದನದಲ್ಲಿದ್ದಾರೆ. ಅವರು ಸಮರ್ಥರಿದ್ದಾರೆ.

ಶ್ರೀ ಎಸ್. ಬಂಗಾರಪ್ಪ (ಸೊರಬ) : ಸನ್ಮಾನ್ಯ ಅಧ್ಯಕ್ಷರೇ, ಕ್ಷಮಿಸಬೇಕು ಸದನದಲ್ಲಿ ರಾಜ್ಯಪಾಲರ ಭಾಷಣದ ಮೇಲೆ ಆಗಿದ್ದಂತಹ ಚರ್ಚೆಗೆ ಉತ್ತರ ಪ್ರಾರಂಭ ಆಗತಕ್ಕ ಸಂಧರ್ಭದಲ್ಲಿ ಈ ವಿಷಯ ಪ್ರಸ್ತಾಪಕ್ಕೆ ಬಂತಲ್ಲ ಎಂಬ ಕಾರಣಕ್ಕೆ ಮಾನ್ಯ ಸಭಾಧ್ಯಕ್ಷರು ಕ್ಷಮಿಸಬೇಕು. ಈ ವಿಚಾರ ಈ ಸದನದಲ್ಲಿ ಪ್ರಸ್ತಾಪಕ್ಕೆ ಇವತ್ತೇ ಏನು ಬಂದಿಲ್ಲ. ಮೊದಲಿನಿಂದಲೇ ಬಂದಿದೆ. ಇದು ತಮಗೆಲ್ಲರಿಗೂ ಗೊತ್ತಿದೆ. ತಮ್ಮ ತಿಳುವಳಿಕೆ ವ್ಯಾಪ್ತಿಯಲ್ಲಿ ಇದು ಇದೆ ಎಂದು ನಾನು ತಿಳಿದು ಕೊಂಡಿದ್ದೇನೆ. ಈ ವಿಷಯ ನಾವು ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆ ಪ್ರಾರಂಭ ಮಾಡುವುದಕ್ಕೆ ಮುಂಚಿತವಾಗಿಯೇ ಬಂದಿತ್ತು. ಈ ವಿಚಾರವನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಆಯಾಯ ರಾಜಕೀಯ ಪಕ್ಷಗಳ ನಾಯಕರುಗಳು ಪ್ರಸ್ತಾಪ ಮಾಡಿದ್ದಾದರೆ. ವಿವರವಾಗಿ ಅಲ್ಲದಿದ್ದರೂ ಸಹ ಈ ವಿಷಯವನ್ನು ಎಲ್ಲರೂ ಪ್ರಸ್ತಾಪ ಮಾಡಿದ್ದಾರೆ. ಇದರಲ್ಲಿ ಒಂದು ಆತಂಕ ಇದೆ. ಆ ಕಾರಣಕ್ಕಾಗಿ ಇಲ್ಲಿ ಧರಣಿ ಪ್ರಾರಂಭವಾಗಿದೆ ಎಂದು ನಾನು ಭಾವಿಸಿದ್ದೇನೆ. ಆ ಆತಂಕ ಏನೆಂದರೆ, ಮೊದಲೇ ಈ ವಿಚಾರ ಪ್ರಸ್ತಾಪಕ್ಕೆ ಬಂದಿತ್ತು. ಅದೇನೆಂದರೆ. ಮಾನ್ಯ ಸದಸ್ಯರುಗಳು ಅವರವರ ಕ್ಷೇತ್ರಕ್ಕೆ ಹೋದಾಗ ಅಲ್ಲಿ ಯಾವ ರೀತಿಯಾಗಿ ಜವಾಬ್ದಾರಿಯಿಂದ ಅವರು ತಮ್ಮ ಕಾರ್ಯವನ್ನು ನಿರ್ವಹಣೆ ಮಾಡಲು ಸಾಧ್ಯವಾಗುತ್ತಿಲ್ಲ ಎನ್ನುವುದು, ಜನರ ಪ್ರತಿನಿಧಿಗಳಾಗಿ ಆಯಾ ಕ್ಷೇತ್ರಗಳಲ್ಲಿ ತಮ್ಮ ಕೆಲಸಗಳನ್ನು ಮಾಡಲು ಸಾಧ್ಯವಾಗುತ್ತಿಲ್ಲ ಎನ್ನತಕ್ಕದ್ದು ಇಲ್ಲಿ ಒಂದು ವಿಚಾರವನ್ನು ಗಮನಿಸಬೇಕು. ಈ ಧರಣಿ ವಿಚಾರ ಒಂದು ಕಡೆ ಇರಲಿ. ಇದರ ಬಗ್ಗೆ ನಂತರ ಮಾತನಾಡೋಣ. ಈ ವಿಷಯದ ಬಗ್ಗೆ ಈ ಪಕ್ಷದ ಸದಸ್ಯರು, ಆ ಪಕ್ಷದ ಸದಸ್ಯರು ಎಂಬ ಪ್ರಶ್ನೆ ಇದರಲ್ಲಿ ಇಲ್ಲ. ಬಿ.ಜೆ.ಪಿ. ಇರಬಹುದು ಕಾಂಗ್ರೆಸ್ (ಐ) ಇರಬಹುದು. ನಮ್ಮ ಪಕ್ಷ ಇರಬಹುದು ಅಥವಾ ಯಾವುದೇ ಪಕ್ಷಕ್ಕೆ ಸೇರಿರದೇ ಇರತಕ್ಕ ಮಾನ್ಯ ಸದಸ್ಯರುಗಳು ಇರಬಹುದು. ಅವರುಗಳು ಅವರವರ ಕ್ಷೇತ್ರಕ್ಕೆ ಹೋದರೆ ಅವರ ಕಾರ್ಯ ವಿಧಾನ ಹಾಗೂ ಯಾವ ಕಾನೂನು ವ್ಯಾಪ್ತಿಯಲ್ಲಿ ಅವರು ಕೆಲಸ ಮಾಡಬೇಕಾಗುತ್ತದೆ ಎಂಬ ವಿಚಾರ ಇದರಲ್ಲಿ ಅಡಗಿದೆ. ಈ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮತ್ತೊಂದು ಅಭಿಪ್ರಾಯವನ್ನು ಇಟ್ಟುಕೊಂಡಿದ್ದಾರೆಂದು ನಾನು ಭಾವಿಸುವುದಿಲ್ಲ. ಮಾನ್ಯ ಸದಸ್ಯರುಗಳಿಗೆ ಹಕ್ಕನ್ನು ಕೊಡಬಾರದು ಅವರು ಏನೂ ಕೆಲಸ ಮಾಡಲು ಅಸ್ಪದ ಕೊಡಬಾರದು ಎಂಬ ವಿಚಾರವನ್ನು ಜನರ ಪ್ರತಿನಿಧಿಗಳಾಗಿ ನಾನು ಮಾತನಾಡತಕ್ಕ ಸಂದರ್ಭದಲ್ಲಿ ನಮ್ಮ ಕಾರ್ಯವ್ಯಾಪ್ತಿ ಏನು ಎಂಬುದರ ಬಗ್ಗೆ ನಾವು ಈಗ ಚರ್ಚಿಸುತ್ತಿದ್ದೇವೆ. ಈ ವಿಷಯದ ಬಗ್ಗೆ ಸ್ಪಷ್ಟವಾದ ತಿಳುವಳಿಕೆ ನಮಗೆ ಇದ್ದರೆ ಅದರಿಂದ ಅನುಕೂಲವಾಗುತ್ತದೆ ಎಂದು ನಾವು ತಿಳಿದುಕೊಂಡಿದ್ದೇವೆ. ಇವತ್ತು ಸರ್ಕಾರ ನಡೆಸತಕ್ಕ ಪಕ್ಷ ಹಿಂದೆ ವಿರೋಧ ಪಕ್ಷ ಸ್ಥಾನದಲ್ಲಿ ಕುಳಿತು ಜನರ ಅಶೋತ್ತರಗಳನ್ನು ಗಮನದಲ್ಲಿಟ್ಟುಕೊಂಡು ನಾವು ನೀವು ಸೇರಿ ಕೈಗೊಂಡ ನಿರ್ಧಾರಗಳು ತಮಗೆಲ್ಲರಿಗೂ ಗೊತ್ತಿದೆ. ಈಗ ಶಾಸಕರುಗಳ ಕಾರ್ಯವ್ಯಾಪ್ತಿ ಏನು ಎಂಬ ವಿಷಯ ನಮ್ಮ ಮುಂದೆ ಇದೆ. ಈಗ ಅವರ ಆತಂಕ ಏನೆಂದರೆ ಮೊದಲೇ ಈ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಉತ್ತರವನ್ನು ಹೇಳಬೇಕೆಂದು. ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಉತ್ತರವನ್ನು ಕೊಡಬೇಕೆಂದು

ಕೇಳುವುದರಲ್ಲಿ ತಪ್ಪೇನೂ ಇಲ್ಲ. ಬಡ್ಜೆಟ್ ಮೇಲೆ ಭಾಷಣ ಮಾಡಿದಾಗ ಇದರ ಬಗ್ಗೆ ನಾನು ಮಾತನಾಡಿದ್ದೇನೆ. ರಾಜ್ಯಪಾಲರ ಭಾಷಣದ ಮೇಲೆ ಭಾಗವಹಿಸುವುದಕ್ಕೆ ಸಂದರ್ಭ ಬಂದಿದ್ದರೆ ನಾನು ವಿವರವಾಗಿ ಮಾತನಾಡುತ್ತಿದ್ದೇ. ನಾನು ಮುಖ್ಯಮಂತ್ರಿ ಆಗಿದ್ದಂತಹ ಸಂದರ್ಭದಲ್ಲಿ ಟಾಸ್ಕ್ ಫೋರ್ಸ್ ಅಧ್ಯಕ್ಷರು ಶಾಸಕರೇ ಆಗಿದ್ದರು. ಇಪ್ಪತ್ತು ಅಂಶಗಳ ಆರ್ಥಿಕ ಕಾರ್ಯಕ್ರಮಗಳ ಅಧ್ಯಕ್ಷರೂ ಶಾಸಕರೇ, ಅವರವರ ಕ್ಷೇತ್ರದಲ್ಲಿ ಅವರು ಯಾವುದೇ ಪಕ್ಷಕ್ಕೆ ಸೇರಿರಲಿ ಅವರೇ ಇಂತಹ ಸಮಿತಿಗಳ ಅಧ್ಯಕ್ಷರಾಗಿದ್ದರು.

ಅಧ್ಯಕ್ಷರು : ಆ ಎಲ್ಲಾ ವಿವರಗಳನ್ನೂ ನಾವು ಚರ್ಚೆ ಮಾಡಿದ್ದೇವೆ. ಈಗ ಇಲ್ಲಿ ಇರತಕ್ಕ ವಿಚಾರದ ಬಗ್ಗೆ ನೀವು ಬೆಳಕು ಚೆಲ್ಲಿದರೆ ಒಳ್ಳೆಯದು. ಈಗ ಸಭಾ ನಾಯಕರು ಉತ್ತರ ಹೇಳುವುದಕ್ಕೆ ನಿಂತಿದ್ದಾರೆ. ವಿರೋಧ ಪಕ್ಷದವರು ಅವರಿಗೆ ಷರುತ್ತ ಹಾಕಿದ್ದಾರೆ. ಇದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಎಸ್. ಬಂಗಾರಪ್ಪ : ನಾನು ಕೊಡತಕ್ಕ ಸಲಹೆ ಈ ವಿಚಾರದ ಇತ್ಯರ್ಥಕ್ಕೆ ಅನುಕೂಲವಾಗಬಹುದು ಎಂಬುದನ್ನು ಗಮನದಲ್ಲಿಟ್ಟುಕೊಂಡು ಮಾತನಾಡುತ್ತಿದ್ದೇನೆ. ಇದರಿಂದ ಏನಾದರೂ ಈ ವಿಚಾರ ಸ್ವಲ್ಪ ತಿಳಿಯಾಗಿ ಒಂದು ತೀರ್ಮಾನಕ್ಕೆ ಬರುವುದಕ್ಕೆ ನನ್ನ ಮಾತು ಸಹಕಾರಿಯಾಗುವ ಹಾಗಿದ್ದರೆ ಆಗಲಿ ಎನ್ನುವ ಉದ್ದೇಶ ಬಿಟ್ಟರೆ ನಾನು ಬೇರೆ ಏನೂ ಹೇಳುತ್ತಿಲ್ಲ. ಆರಾಧನಾ ಸಮಿತಿಯ ಅಧ್ಯಕ್ಷರು ಶಾಸಕರಾಗಿದ್ದರು ಅಶ್ರಯ ಸಮಿತಿಯ ಅಧ್ಯಕ್ಷರೂ ಸಹ ಶಾಸಕರಾಗಿದ್ದರು. ಬಡವರಿಗೆ ಸೈಟು ಕೊಡತಕ್ಕ ಸಮಿತಿಯ ಅಧ್ಯಕ್ಷರು ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸುವುದು (ಬಗರ್ ಹುಕುಂ ಸಾಗುವಳಿ) ಇದರ ಅಧ್ಯಕ್ಷರು ಸಹ ಶಾಸಕರಾಗಿದ್ದರು. ಸರ್ಕಾರಿ ಭೂಮಿ ನಮಗೆ ಸಿಗುವುದಿಲ್ಲ ಎಂದರೆ ಖಾಸಗಿ ಭೂಮಿಯನ್ನು ತೆಗೆದುಕೊಳ್ಳುಲು ಕೂಡ ಆಶ್ರಯ ಸಮಿತಿಗೆ ಅಧಿಕಾರವನ್ನು ಕೊಟ್ಟಿದ್ದೆವು. ಈ ರೀತಿ ಜನರ ಪ್ರತಿನಿಧಿಯಾಗಿ ಶಾಸಕರ ಪಾತ್ರ. ಅವರ ಕಾರ್ಯವ್ಯಾಪ್ತಿಯನ್ನು ಬಹಳ ವ್ಯಾಪಕಗೊಳಿಸಿದ್ದೆವು. ಆ ರೀತಿ ಇಲ್ಲದಿದ್ದರೆ ಜನರ ಪ್ರತಿನಿಧಿಗಳು ಸರಿಯಾಗಿ ಕೆಲಸ ಮಾಡಲು ಆಗುವುದಿಲ್ಲ ಎಂಬುದನ್ನು ತಿಳಿದುಕೊಂಡಿದ್ದೇವೆ. ನನ್ನ ವಿಚಾರಧಾರೆಗೆ ಅನುಗುಣವಾಗಿ ನಾನು ಈ ರೀತಿ ಕ್ರಮಗಳನ್ನು ಕೈಗೊಂಡಿದ್ದೆ. ಅದನ್ನು ತಾವು ಒಪ್ಪಬಹುದು, ಅಥವಾ ಬಿಡಬಹುದು. ನಾನು ಈಗ ಪಕ್ಷಾತೀತವಾಗಿ ಮಾತನಾಡುತ್ತಿದ್ದೇನೆ. ನಾನು ಮುಖ್ಯಮಂತ್ರಿ ಆಗಿದ್ದಾಗ ಇಂತಹ ಹಲವಾರು ತೀರ್ಮಾನಗಳನ್ನು ತೆಗೆದುಕೊಂಡಿದ್ದೆ.

1.20 ಪಿ.ಎಂ.

ಈ ರೀತಿ ತೀರ್ಮಾನವಾದಾಗ ಮತ್ತೊಂದು ಭಿನ್ನವಾದ ತೀರ್ಮಾನ ಮಾಡಲು ಸಾಧ್ಯವಿಲ್ಲ. I will have to stand by the decision which I took during my regime as Chief Minister. ಏತಕ್ಕೆಂದರೆ ನಾನು ಆ ವಾದದಲ್ಲಿ ನಂಬಿಕೆ ಇರತಕ್ಕವನು. ಅದನ್ನು ಬಿಟ್ಟು ಮತ್ತೊಂದು ರೀತಿ ಹೋಗಲು ಸಾಧ್ಯವಿಲ್ಲ. ಅದಕ್ಕೆ ಹೊರತಾಗಿ ದೇವೇಗೌಡರು ಇದ್ದಾರೆ ಎಂದು ನಾನು

ಭಾವಿಸುವುದಿಲ್ಲ. ಆದರೆ ಅದಕ್ಕೆ ಏನೂ ಪ್ರತಿಭಂದಕ ಇಲ್ಲ. ನಾನು ಇರತಕ್ಕ ಕಾಲದಲ್ಲಿ ನಮ್ಮ ಪರವಾಗಿ ನಮ್ಮ ಪ್ರತಿನಿಧಿಗಳು ಒಬ್ಬರನ್ನಾಗಿ ಅಧ್ಯಕ್ಷರನ್ನಾಗಿ ಮಾಡಿರತಕ್ಕ ಸಂದರ್ಭಗಳು ಇವೆ. ಕಾನೂನಿನ ಪ್ರಕಾರ ಜನರ ಹಿತದೃಷ್ಟಿಯಿಂದ ಕೆಲಸಕಾರ್ಯಗಳು ಯಾವರೀತಿ ನಡೆಯಬೇಕು ಎಂದು ಮಾಡಿರತಕ್ಕಂಥಾದ್ದು ಆ ಕಾಲದಲ್ಲಿ ಜನತಾದಳದವರು ವಿರೋಧ ಪಕ್ಷದಲ್ಲಿ ಕುಳಿತಿದ್ದರು. ಸ್ವತಂತ್ರವಾಗಿ ಆರಿಸಿ ಬಂದ ಸದಸ್ಯರುಗಳೂ ಇದ್ದರು. ಇದನ್ನು ನಾವು ಪಕ್ಷಾತೀತವಾಗಿ ವಿಚಾರ ಮಾಡಿ ನಿರ್ಧಾರ ತೆಗೆದುಕೊಂಡಿದ್ದೆವು. ಈ ಸಂದರ್ಭದಲ್ಲಿ ಒಂದೇ ಒಂದು ವಿಚಾರ. ಹಿಂದೆ ಇರತಕ್ಕ ಅಧಿಕಾರದ ವ್ಯಾಪ್ತಿಯನ್ನು ಕಡಿಮೆ ಮಾಡಬೇಕು. ಎಂಬ ಒಂದೇ ಒಂದು ಕಾರಣದಿಂದ ಒಂದು ಅಪನಂಬಿಕೆ ಬಂದು ಅಸಿಸ್ಟೆಂಟ್ ಕಮೀಷನರ್‌ರವರನ್ನು ಅಧ್ಯಕ್ಷರನ್ನಾಗಿ ಮಾಡುತ್ತಾರೆ ಎಂಬುದು ಪತ್ರಿಕೆಗಳಲ್ಲಿ ಬಂತು. ಯಾವುದಕ್ಕೆ ಅಂದರೆ ಆಶ್ರಯ ಸಮಿತಿಗೆ (ಬಗರ್ ಹುಕುಂ ಸಾಗುವಳಿ ಸಕ್ರಮಗೊಳಿಸುವ ಬಗ್ಗೆ) ಆಗ ಮಾನ್ಯ ಸದಸ್ಯರುಗಳಿಗೆ ಆತಂಕವಾಯಿತು. ಆ ಹೇಳಿಕೆ ಏತಕ್ಕೆ ಬಂತು ನನಗೆ ಗೊತ್ತಿಲ್ಲ. ನಾನೂ ಆ ವಿಚಾರವನ್ನು ವಿರೋಧ ಮಾಡಿದ್ದೇನೆ, ನಮ್ಮ ಪಕ್ಷದ ಪರವಾಗಿ ನಾವು ವಿರೋಧ ಮಾಡುತ್ತೇವೆ ನಾವು ಅಧಿಕಾರದಲ್ಲಿ ಇದ್ದಾಗ ......

ಅಧ್ಯಕ್ಷರು : ಈಗ ಇರತಕ್ಕ ಸಮಸ್ಯೆಯ ಬಗ್ಗೆ ತಾವು ಸಲಹೆ ನೀಡಿದರೆ ಒಳ್ಳೆಯದು. ಅವರೆಲ್ಲಾ ನಿಂತುಕೊಂಡಿದ್ದಾರೆ, ನಾವು ಕುಳಿತುಕೊಂಡಿದ್ದೇವೆ, ವಿರೋಧ ಪಕ್ಷದ ನಾಯಕರಾದಿಯಾಗಿ ಎಲ್ಲರೂ ನಿಂತಿದ್ದಾರೆ, ಸಮಸ್ಯೆಯನ್ನು ಹೇಗೆ ಬಗೆಹರಿಸಬೇಕು ಎಂಬುದನ್ನು ಹೇಳುವುದು ಬಿಟ್ಟು ....

ಶ್ರೀ ಎಸ್. ಬಂಗಾರಪ್ಪ : ಬೇಡ ಎಂದರೆ ಬಿಡಿ ನನಗೆ ಏನೂ ಚಿಂತೆ ಇಲ್ಲ.

ಅಧ್ಯಕ್ಷರು : ನೇರವಾಗಿ ಸಮಸ್ಯೆಗೆ ಬಂದರೆ ಅದರಿಂದ ಎಲ್ಲರಿಗೂ ಅನುಕೂಲವಾಗುತ್ತದೆ. ಅವರನ್ನು ನಿಲ್ಲಿಸಿಕೊಂಡರೆ ಚೆನ್ನಾಗಿ ಇರುವುದಿಲ್ಲ. ಬಹಳ ಜನ ಸೀನಿಯರ್ಸ್ ಇದ್ದಾರೆ. ನೇರವಾಗಿ ತಾವು ಸಮಸ್ಯೆಗೆ ಬಂದರೆ ಬಹಳ ಒಳ್ಳೆಯದು.

ಶ್ರೀ ಎಸ್. ಬಂಗಾರಪ್ಪ : ಧರಣಿ ಎಂದರೆ ಕುಳಿತುಕೊಂಡು ಎಂದು ನಾನು ತಿಳಿದುಕೊಂಡಿದ್ದೇನೆ. ಅವರು ನಿಂತುಕೊಂಡರೆ ನಾನೇನು ಮಾಡಲಿ. ಈ ಸಂದರ್ಭದಲ್ಲಿ ಮಾನ್ಯ ಸಭಾ ನಾಯಕರಾದ ದೇವೇಗೌಡರ ಗಮನವನ್ನು ಸೆಳೆಯಲ್ಛಿಸುತ್ತೇನೆ. ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಚರ್ಚೆಗೆ ಉತ್ತರ ಕೊಡತಕ್ಕ ಸಂದರ್ಭದಲ್ಲಿ ಈ ಸಮಸ್ಯೆಯು ಉದ್ಭವಾಯಿತು. ಅವರು ಉತ್ತರ ಕೊಡತಕ್ಕ ಸಂದರ್ಭದಲ್ಲಿ ಮುಂದೆ ಈ ಬಗ್ಗೆ ಹೇಳುವುದಿಲ್ಲ ಎಂಬ ಅನುಮಾನ ನಿಮ್ಮಲ್ಲಿ ಏತಕ್ಕೆ ಎಂದು ಸಭಾಧ್ಯಕ್ಷರ ಮನಸ್ಸಿನಲ್ಲಿ ಇದೆ. ತಾವು ಹೇಳಿದಿರಿ ಅವರು ಉತ್ತರ ಪ್ರಾರಂಭ ಮಾಡಿದ್ದಾರೆ, ಅವರು ಮುಂದೆ ಉತ್ತರ ಕೊಡುತ್ತಾರೆ, ಅವರು ಇದರ ಬಗ್ಗೆ ಸಮರ್ಪಕವಾದ, ಸಮಂಜಸವಾದ ಉತ್ತರ ಕೊಡುವುದಿಲ್ಲ ಎಂಬ ಆತಂಕ ನಮ್ಮ ಮನಸ್ಸಿನಲ್ಲಿ ಏತಕ್ಕೆ ಎಂದು. ನಮ್ಮ ಪಕ್ಷದ ನೀತಿ ಏನು ಇದೆ ಎಂಬುದನ್ನು ನಾನು ನನ್ನ ಬಡ್ಜೆಟ್ ಭಾಷಣದ ಸಂದರ್ಭದಲ್ಲಿ ಪ್ರಕಟ ಮಾಡಿದ್ದೇನೆ. ಇದು ಬಹಳ

ಪ್ರಾಮುಖ್ಯವಾದ ವಿಚಾರ. ಆದುದರಿಂದ ಇದರ ಬಗ್ಗೆ ಪ್ರತ್ಯೇಕವಾದ ಚರ್ಚೆಗೆ ಕರೆದು ನಾವು ತೀರ್ಮಾನ ಮಾಡುತ್ತೇನೆ ಎಂದು ಸಭಾ ನಾಯಕರು ಒಪ್ಪಿಗೆ ಕೊಟ್ಟು ಇದಕ್ಕೆ ಆರನೇ ತಾರೀಖು, ಇವತ್ತು ಎಂಟನೇ ತಾರೀಖು ಕರೆದು ಮಾತನಾಡಿ ಉತ್ತರ ಕೊಡುತ್ತೇನೆ ಎಂದು ಹೇಳಿದರು. ಈಗಲೂ ಕೂಡ ಏನೂ ತಪ್ಪಿಲ್ಲ. ವಿರೋಧ ಪಕ್ಷದ ನಾಯಕರುಗಳು, ಸ್ವತಂತ್ರವಾಗಿ ಆರಿಸಿ ಬಂದಿರುವವರನ್ನು ಎಲ್ಲರನ್ನೂ ಮತ್ತೊಮ್ಮೆ ಕರೆಸಿ ಮಾತುಕತೆ ಮಾಡಿ ಈಗಲೇ ಇತ್ಯರ್ಥ ಮಾಡಿದರೆ. There is nothing wrong in it. ತಪ್ಪೇನೂ ಆಗುವುದಿಲ್ಲ. ಆದ್ದರಿಂದ ಈಗಲೇ ಕರೆದು ಮಾತನಾಡಿ ಒಂದು ತೀರ್ಮಾನಕ್ಕೆ ಬರಲು ಸಾಧ್ಯವಾಗುತ್ತದೆ. ಆದ್ದರಿಂದ ಈ ಸಭೆಯನ್ನು ಸ್ವಲ್ಪ ಕಾಲ ಮುಂದಕ್ಕೆ ಹಾಕಿ. ನಾವು ಎಲ್ಲವನ್ನೂ ಭಾಷಣ ಮಾಡಿ ಹೇಳುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು : ಧರಣಿ ಮಾಡುವುದಕ್ಕಿಂತಲೂ ಇದು ಹೆಚ್ಚಾಯಿತು.

ಶ್ರೀ ಎಸ್. ಬಂಗಾರಪ್ಪ : ಅದು ತಮಗೆ ಬಿಟ್ಟಿದ್ದು, ಸಭೆಯನ್ನು ಸ್ವಲ್ಪ ಮುಂದಕ್ಕೆ ಹಾಕಿದರೆ ಸಭಾನಾಯಕರೂ ಸಹ ಒಂದು ತೀರ್ಮಾನಕ್ಕೆ ಬರಲು ಸಾಧ್ಯವಾಗುತ್ತದೆ.

ಶ್ರೀ ಎಂ.ಸಿ. ನಾಣಯ್ಯ : ವಿರೋಧ ಪಕ್ಷದ ಸದಸ್ಯ ಮಿತ್ರರುಗಳೆಲ್ಲರೂ ಬಾವಿಗೆ ಬಂದು ಬಿಟ್ಟಿದ್ದಾರೆ. ಸಂಸದೀಯ ವಿಚಾರದ ವಿಷಯದಲ್ಲಿ, ಸಂಸದೀಯ ಇತಿಹಾಸದಲ್ಲಿ ಇದು ಹಿಂದೆ ಏನೂ ನಡೆಯದೇ ಇರತಕ್ಕಂಥ ವಿಚಾರ ಅಲ್ಲ. ಆದ್ದರಿಂದ ಈ ಸಂದರ್ಭದಲ್ಲಿ ಹಿರಿಯ ಸದಸ್ಯರೆಲ್ಲರನ್ನೂ ಕೇಳಿಕೊಳ್ಳುತ್ತೇನೆ ಮಾನ್ಯ ಮುಖ್ಯಮಂತ್ರಿಗಳು ನೀವು ಎತ್ತಿರತಕ್ಕಂಥ ವಿಚಾರಗಳಿಗೆ ಇನ್ನೂ ಉತ್ತರವನ್ನು ಶುರು ಮಾಡಲಿಲ್ಲ. ಉತ್ತರವನ್ನು ಶುರು ಮಾಡಿ ಇದರ ಬಗ್ಗೆ ಸ್ಪಂದಿಸಬೇಕು ಎಂಬುದು ನಿಮ್ಮ ಮನಸ್ಸಿನಲ್ಲಿ ಇರಬಹುದು. ಉತ್ತರವನ್ನು ಶುರು ಮಾಡಿ ಇದರ ಬಗ್ಗೆ ಸ್ಪಂದಿಸದೇ ಇರಬಹುದು ಎಂದು ನಿಮ್ಮ ಮನಸ್ಸಿನಲ್ಲಿ ಇದೆ ಎಂದು ನಾನು ಭಾವಿಸುತ್ತೇವೆ. ಕಳೆದ ಐದಾರು ದಿವಸಗಳಿಂದ ಈ ವಿಚಾರವನ್ನು ಚರ್ಚೆ ಮಾಡಿ, ಮುಖ್ಯ ಮಂತ್ರಿಗಳು ಈ ಸದನಕ್ಕೆ ಬರುವುದಕ್ಕೆ ಮುಂಚೆ, ಶ್ರೀ ವಾಟಾಳ್ ನಾಗರಾಜರವರು ಈ ವಿಚಾರವನ್ನು ಎತ್ತಿದಾಗ ಮಾನ್ಯ ಸಭಾಧ್ಯಕ್ಷರು ವಿವರಗಳನ್ನು ಕೊಟ್ಟಿದ್ದೀರಿ ತಮ್ಮ ಕೊಠಡಿಯಲ್ಲಿ ಮಾತುಕತೆ ಮಾಡಿದಾಗ ಏನು ಆಯಿತು ಎಂಬ ಬಗ್ಗೆ ಮಾತನಾಡಿದ್ದೀರಿ. ಕಡೆಗೆ ಬಿ.ಡಿ.ಓ. ಆಫೀಸ್‌ನಲ್ಲಿ ಬೇಕಾದರೆ ಒಂದು ಕೊಠಡಿಯನ್ನು ಕಟ್ಟಿಸಲಿಕ್ಕೆ ಒಂದು ಕ್ರಮ ತೆಗೆದುಕೊಳ್ಳುತ್ತಾರೆ ಎಂದು ಮಾನ್ಯ ಸಭಾಧ್ಯಕ್ಷರು ಹೇಳಿದ್ದು ಎಲ್ಲರೂ ಕೇಳಿದರು. ಇವೊತ್ತು ಇರತಕ್ಕ ಈ ವಿಚಾರದಲ್ಲಿ ಶಾಸಕರ ಹಕ್ಕು ಅವರ ಕಾರ್ಯ ವ್ಯಾಪ್ತಿಯ ಬಗ್ಗೆ ಬಹಳಷ್ಟು ಬೆಳಕನ್ನು ಚೆಲ್ಲಿದ್ದೀರಿ. ಇನ್ನೂ ಹಲವಾರು ವಿಚಾರಗಳನ್ನು ಎತ್ತಿದ್ದೀರಿ? ಅದಕ್ಕಾಗಿ ಎಲ್ಲಾ ಉತ್ತರವನ್ನು ಕೊಡಲು ಸಭಾನಾಯಕರು ಇನ್ನೂ ಶುರು ಮಾಡದೇ ಇರತಕ್ಕಂಥ ಸಂದರ್ಭದಲ್ಲಿ ಮೊದಲೇ ಇದರ ಬಗ್ಗೆ ಹೇಳಬೇಕು ಇದರ ಬಗ್ಗೆ ಮೊದಲೇ ಆಶ್ವಾಸನೆ ಕೊಡಬೇಕು ಎಂದು ಹೇಳುವುದು ಸಂಸದೀಯ ವ್ಯವಹಾರಕ್ಕೆ ಸ್ವಲ್ಪ ಮಟ್ಟಿಗೆ ಸರಿಯಾದಂಥ ವಿಚಾರವೇ ಎಂದು ತಾವು ದಯವಿಟ್ಟು ವಿಚಾರಮಾಡಿ. ಏಕೆಂದರೆ ತಾವೆಲ್ಲರೂ ಬಹಳ ಹಿರಿಯರಿದ್ದೀರಿ. ಅದರಲ್ಲೂ ಹಿಂದೆ

ಆಡಳಿತ ಪಕ್ಷದಲ್ಲಿದ್ದಂಥ ಕಾಂಗ್ರೆಸ್‌ನವರೂ ಮಲ್ಲಿಕಾರ್ಜುನ ಖರ್ಗೆರವರು, ಕಾಂಗ್ರೆಸ್ಸಿನ ಸದಸ್ಯರು ಕೂಡ ಸಚಿವರು ಆಗಿದ್ದರು. ಇತರ ಸದಸ್ಯರುಗಳು ಇದ್ದೀರಿ. ಶ್ರೀ ಯಡಿಯೂರಪ್ಪನವರೂ ಹಾಗೂ ಒಂದು ಕಾಲದಲ್ಲಿ ಮಂತ್ರಿಗಳು ಆಗಿದ್ದ ವೈ.ರಾಮಕೃಷ್ಣರವರು ಇಲ್ಲಿ ಇದ್ದೀರಿ. ಮುಖ್ಯಮಂತ್ರಿಗಳು ಉತ್ತರ ಹೇಳತಕ್ಕ ಸಂದರ್ಭದಲ್ಲಿ ರಾಜ್ಯಪಾಲರ ಭಾಷಣಕ್ಕೆ ಉತ್ತರವನ್ನು ಶುರು ಮಾಡುವುದಕ್ಕೆ ಮೊದಲೇ ಇದರ ಬಗ್ಗೆ ಮಾತನಾಡಬೇಕು ಎಂದು ಹೇಳತಕ್ಕದ್ದು ಎಷ್ಟರಮಟ್ಟಿಗೆ ಸರಿ, ತಪ್ಪು ಎಂಬುದನ್ನು ನಿಮ್ಮ ವಿವೇಚನೆಗೆ ಬಿಡುತ್ತೇನೆ. ನೀವು ಎತ್ತಿರತಕ್ಕಂಥ ವಿಚಾರಗಳಿಗೆ ಮುಖ್ಯಮಂತ್ರಿಗಳು ಉತ್ತರ ಕೊಡತಕ್ಕ ಕಾಲದಲ್ಲಿ ಸ್ಪಂದಿಸದಿದ್ದರೆ ಆಗ ಈ ಪ್ರಶ್ನೆಯನ್ನು ಮತ್ತೇ ಪ್ರಸ್ತಾಪ ಮಾಡಲು ಅವಕಾಶ ಇದೆ. ಆದರೆ ಮುಖ್ಯಮಂತ್ರಿಗಳು ಉತ್ತರ ಶುರು ಮಾಡುವುದಕ್ಕೆ ಮೊದಲೇ ಬಾವಿಗೆ ಬರತಕ್ಕ ಪದ್ಧತಿ ಎಷ್ಟು ಸರಿ ? ಎಂಬುದನ್ನು ತಾವೇ ನಿರ್ಧರಿಸಬೇಕು. ತಾವೆಲ್ಲರೂ ನಿಮ್ಮ ನಿಮ್ಮ ಸ್ಥಾನಗಳಿಗೆ ಹೋಗಬೇಕೆಂದು ಕೇಳಿಕೊಳ್ಳುತ್ತೇನೆ. ಒಂದು ವೇಳೆ ಮಾನ್ಯ ಮುಖ್ಯಮಂತ್ರಿಗಳ ಉತ್ತರದಿಂದ ಸಮಾಧಾನ ಆಗದಿದ್ದರೇ ಪುನಃ ಅದೇ ವಿಚಾರವನ್ನು ಪ್ರಸ್ತಾಪ ಮಾಡಿ. ಅವರ ಕಡೆಯಿಂದ ಮತ್ತು ಸರ್ಕಾರದ ಕಡೆಯಿಂದ ಯಾವ ಭರವಸೆಗಳನ್ನು ತೆಗೆದುಕೊಳ್ಳಬೇಕೋ ಆ ಕೆಲಸವನ್ನು ಮಾಡಿ ಎಂದು ತಮ್ಮನ್ನು ಕೇಳಿಕೊಳ್ಳುತ್ತಿದ್ದೇನೆ. ಆದ್ದರಿಂದ ತಾವು ದಯವಿಟ್ಟು ಅವರಿಗೆ ಒಂದು ಅವಕಾಶವನ್ನು ಮಾಡಿಕೊಡಿ ಎಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ವಿ. ಮುನಿಯಪ್ಪ : ಬಂಗಾರಪ್ಪನವರ ಸಲಹೆ ಸೂಕ್ತವಾಗಿದೆ.

ಶ್ರೀ ಎಂ.ಸಿ. ನಾಣಯ್ಯ : ಮುಖ್ಯಮಂತ್ರಿಗಳು ಉತ್ತರ ಹೇಳುವುದಕ್ಕೆ ಮೊದಲೇ, ಸರ್ಕಾರದ ಅನಿಸಿಕೆ ಏನು ಎಂಬುದನ್ನು ಹೇಳುವುದಕ್ಕೆ ಮೊದಲೇ ಬಾವಿಯಲ್ಲಿ ಕುಳಿತುಕೊಳ್ಳುವುದು ಸರಿ ಎಂಬುದನ್ನು ನೀವೇ ಯೋಚನೆ ಮಾಡಿ.

ಶ್ರೀ ವಿ. ಮುನಿಯಪ್ಪ : ಈ ವಿಚಾರದಲ್ಲಿ ನಾಣಯ್ಯನವರು ಹೇಳಿರುವುದು ಪರಿಹಾರವಲ್ಲ.

ಶ್ರೀ ಎಂ.ಸಿ. ನಾಣಯ್ಯ : ಎತ್ತಿರತಕ್ಕ ಈ ವಿಚಾರಗಳಿಗೆ ನಾವು ಪರಿಹಾರ ಹುಡುಕಬೇಕಾಗುತ್ತದೆ. ನೀವು ಎತ್ತಿರತಕ್ಕ ಈ ವಿಚಾರಗಳಿಗೆ ಸರ್ಕಾರ ಸ್ಪಂದಿಸಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು : ವಾಟಾಳ್‌ರವರು, ಮಲ್ಲಿಕಾರ್ಜುನಖರ್ಗೆರವರು, ಯಡಿಯೂರಪ್ಪ ನವರು, ನಂಜೇಗೌಡರು, ತಾವ್ಮೆಲ್ಲರೂ ಅತ್ಯಂತ ಹಿರಿಯರೂ ಇದ್ದೀರಿ ನನಗೆ ಕಾಡತಕ್ಕ ಒಂದೇ ಒಂದು ಸಮಸ್ಯೆ ಏನೆಂದರೆ ಐದು ದಿವಸಗಳ ಕಾಲ ನಾವು ವ್ಯಾಪಕವಾಗಿ ರಾಜ್ಯಪಾಲರ ಭಾಷಣದ ಮೇಲೆ, ಇನ್ನೂ ಕೆಲವು ಸದಸ್ಯರಿಗೆ ನಿರಾಶೆಯಾಗಿದ್ದರೂ ಕೂಡ ಆದಷ್ಟು ಸದಸ್ಯರಿಗೆ ಅವಕಾಶ ಕೊಟ್ಟಿದ್ದು ಅವರು ಭಾಷಣವನ್ನು ಮಾಡಿದ್ದಾರೆ. ಎಲ್ಲರೂ ಮಾತನಾಡಿಕೊಂಡು ನಮ್ಮ ಒಪ್ಪಂದದ ಪ್ರಕಾರ ಇವತ್ತು ಅವರು ಚರ್ಚೆಗೆ ಉತ್ತರ ಕೊಡುವುದಕ್ಕೆ ಸಮಯ ನಿಗಧಿ ಮಾಡಿದ್ದೇವೆ. ಈ ವಿಷಯ ತಾವು ಏನು ಪ್ರಸ್ತಾಪ ಮಾಡಿದ್ದೀರಿ, ಅದು ಬಹಳ ಗಹನವಾದುದು, ಗಂಭೀರವಾದುದು,

ಎನ್ನುವುದರಲ್ಲಿ ಎರಡು ಅಭಿಪ್ರಾಯವಿಲ್ಲ. ಬೆಳಿಗ್ಗೆ ನಾನು ಒಂದು ಹಂತದಲ್ಲಿ ಸ್ಪಷ್ಟೀಕರಣ ಕೊಟ್ಟಿದ್ದೆ. ಅವರು ಉತ್ತರ ಕೊಡಲು ಈಗಷ್ಟೇ ನಿಂತಿದ್ದಾರೆ. ಉತ್ತರ ಕೊಡುವುದಕ್ಕೆ ಮೊದಲೇ ಪೂರ್ವಭಾವಿಯಾಗಿ ನೀವು ಷರತ್ತು ಹಾಕಿ ಇದನ್ನು ಹೇಳಿ ಮತ್ತೆ ಮುಂದಕ್ಕೆ ಹೋಗಬೇಕು ಎನ್ನುವುದಾದರೆ, ಹಾಗೆ ಹೇಳದೇ ಹೋದರೆ ನಾವು ಧರಣೆ ಮಾಡುತ್ತೇವೆ ಎನ್ನುವುದಾದರೆ ಇದು ನಾಳೆ ಪ್ರಶ್ನೋತ್ತರಕ್ಕೂ ಅನ್ವಯಿಸಿರುತ್ತದೆ. ಯಾವ ಕಲಾಪ ಮಾಡಬೇಕಾದರೂ ಯಾರಾದರೂ ಷರತ್ತು ಹಾಕಿ ನಾವು ಹೇಳಿದ ಹಾಗೆ ನಡೆಯದೇ ಹೋದರೆ ನಾವು ಒಂದು ಧರಣಿ ಮಾಡುತ್ತೇನೆ ಎಂದರೆ ಹೌಸ್ ಆರ್ಡರ್‌ನಲ್ಲಿರುವುದಿಲ್ಲ. ಇದು ಒಳ್ಳೆಯ ಸಂಪ್ರದಾಯ ಆಗುತ್ತದೆಯೇ ಎಂದು ದಯವಿಟ್ಟು ಯೋಚನೆ ಮಾಡಿ. ಅವರು ಉತ್ತರವನ್ನು ಪೂರ್ತಿ ಮಾಡಿ ಈ ವಿಷಯವನ್ನು ಪ್ರಸ್ತಾಪ ಮಾಡದೇ ನಿಮ್ಮ ಭಾವನೆಗೆ ಸ್ಪಂದಿಸದೇ ಹೋಗಿದ್ದರೆ ಆಗ ಈ ಹಕ್ಕನ್ನು ನೀವು ಚಲಾಯಿಸಿದ್ದರೆ, ಈಗ ಏನು ಈ ಕ್ರಮ ಕೈಗೊಂಡಿದ್ದೀರಿ ಇದನ್ನು ಚಲಾಯಿಸಿದ್ದರೆ ಆಗ ನಾವು ಆಕ್ಷೇಪಣೆ ಮಾಡಲು ಆಗುತ್ತಾ ಇರಲಿಲ್ಲ. ಆದರೆ ನೀವು ಅವರಿಗೆ ಮಾತನಾಡಲು ಅವಕಾಶವನ್ನೇ ಕೊಡುತ್ತಾ ಇಲ್ಲ. ಅವರು ಹೇಗೆ ಸ್ಪಂದಿಸಲು ಸಾಧ್ಯವಾಗುತ್ತದೆ. ಇದು ಸರಿಯೇ ? ತಾವು ಎಲ್ಲರೂ ಸಂಸದೀಯ ವ್ಯವಹಾರಗಳಲ್ಲಿ ಸಾಕಷ್ಟು ಅನುಭವವುಳ್ಳವರಾಗಿದ್ದೀರಿ.

(ಸದನದ ಬಾವಿಯೊಳಗೆ ವಿರೊಧ ಪಕ್ಷದ ಸದಸ್ಯರು ನಿಂತಿದ್ದರು ಮತ್ತು ಶ್ರೀ ವಾಟಾಳ್ ನಾಗರಾಜ್‌ರವರು ಮಾತನಾಡುತ್ತಿದ್ದರು)

ಅಧ್ಯಕ್ಷರು : ಅವರು ಉತ್ತರ ಕೊಡುವುದಕ್ಕೆ ಮೊದಲೇ ಹೀಗೆ ನಿಂತುಕೊಳ್ಳುವುದು ಬೇಡ. ಅವರಿಗೆ ತೊಂದರೆಯಾಗುತ್ತದೆ. ತಾವೆಲ್ಲರೂ ದಯಮಾಡಿ ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಿ. ಆಸ್ಥಾನದಲ್ಲಿ ನಿಂತು ಮಾತನಾಡುವುದು ಸರಿ ಹೋಗುವುದಿಲ್ಲ ಮತ್ತು ನಿಯಮಾವಳಿ ಪ್ರಕಾರವೂ ಇದು ಸರಿಯಲ್ಲ. ದಯವಿಟ್ಟು ನಿಮ್ಮ ಸ್ಥಾನಗಳಿಗೆ ಹೋಗುವುದು.

(ವಾಟಾಳ್ ನಾಗರಾಜ್‌ರವರು ಈ ಹಂತದಲ್ಲಿಯೂ ಸದನದ ಬಾವಿಯಲ್ಲಿ ನಿಂತುಕೊಂಡು ಮಾತನಾಡುತ್ತಿದ್ದರು)

ಅಧ್ಯಕ್ಷರು : ನಮ್ಮ ಪಟೇಲರ ಗಾದೆ ತರಹ ಆಯಿತು. ಮಹದೇಶ್ವರ ಜಾತ್ರೆಗೆ ಹೋಗಬೇಕು ಎಂದುಕೊಂಡಿದ್ದೇನೆ, ಹೋಗಲೋ ಬೇಡವೋ, ಹೋಗು ಎಂದರೂ ಹೋಗುತ್ತೇನೆ, ಹೋಗಬೇಡ ಎಂದರೂ ಹೋಗುತ್ತೇನೆ. ಈ ರೀತಿ ಎರಡೂ ಕಡೆಯವರೂ ಅದನ್ನು ಅನುಸರಿಸಬೇಡಿ. ದಯವಿಟ್ಟು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ. ತಮ್ಮ ವಾದವನ್ನು ಅಲ್ಲಿಂದ ಮಂಡನೆಮಾಡಿ. ಈ ಸದನ ಕ್ರಮಬದ್ಧವಾಗಿ ನಡೆಯಲಿ. ಅವರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳುತ್ತೇನೆ.

(ಗೊಂದಲ)

ಅಧ್ಯಕ್ಷರು : ಈ ಸದನವನ್ನು ಅರ್ಧ ಘಂಟೆ ಕಾಲ ಮುಂದೂಡಲಾಗಿದೆ.

(ಸದನವು ಪುನಃ 3.46 ನಿಮಿಷಕ್ಕೆ ಸಮಾವೇಶಗೊಂಡಿತು
ಸನ್ಮಾನ್ಯ ಅಧ್ಯಕ್ಷರು, ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

(ವಿರೋಧ ಪಕ್ಷದ ಸದಸ್ಯರುಗಳೆಲ್ಲಾ ಅಧ್ಯಕ್ಷರ ಪೀಠದ ಮುಂಭಾಗದಲ್ಲಿರುವ ಬಾವಿಯಲ್ಲಿ ಧರಣಿ ಕುಳಿತಿದ್ದರು)

ಅಧ್ಯಕ್ಷರು : ಮಾನ್ಯ ಸದಸ್ಯರುಗಳೆಲ್ಲಾ ತಮ್ಮ ತಮ್ಮ ಸ್ಥಾನಗಳಿಗೆ ಬಂದು ಕುಳಿತುಕೊಂಡು ಕಲಾಪ ನಡೆಸುವುದಕ್ಕೆ ಅವಕಾಶ ಕೊಡಬೇಕು.

(ಬಾವಿಯೊಳಗೆ ಧರಣಿ ಕುಳಿತುಕೊಂಡಿದ್ದ ಮಾನ್ಯ ಸದಸ್ಯರುಗಳು ಅಧ್ಯಕ್ಷರ ಕೋರಿಕೆಯನ್ನು ತಳ್ಳಿಹಾಕಿದರು)

ಅಧ್ಯಕ್ಷರು : ಇವತ್ತು ಮಾನ್ಯ ಮುಖ್ಯಮಂತ್ರಿಗಳಿಗೂ ಕೂಡ ಆರೋಗ್ಯ ಸರಿಯಿಲ್ಲದೆ ಇರುವುದರಿಂದ, ಅವರು ಉತ್ತರವನ್ನು ಸೋಮವಾರ ಕೊಡುತ್ತಾರೆ. ಆದುದರಿಂದ ಈಗ ಸದನವನ್ನು ಮುಂದೂಡಿ, ಪುನಃ ಸದನವು 10ನೇ ತಾರೀಖು ಬೆಳಿಗ್ಗೆ 11 ಗಂಟೆಗೆ ಸಮಾವೇಶಗೊಳ್ಳುತ್ತದೆ.

(ಸದನವು 3 ಗಂಟೆ 47 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ ಹತ್ತನೇ ಏಪ್ರಿಲ್ ಮಾಹೆ 1995 ರ ಸೋಮವಾರ ಬೆಳಿಗ್ಗೆ 11-00 ಗಂಟೆಗೆ ಸೇರಲು ನಿಶ್ಚಯಿಸಿತು)

ಮಾನ್ಯ (* ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸಿರುತ್ತದೆ)